
ಸಂಪುಟ 23 ಸಂಚಿಕೆ 5
ಫೆಬ್ರವರಿ 4, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಸ್ಯಾರಂಗ



ತತ್ತರಿಸುತ್ತಿರುವ ಸಣ್ಣ ಕೈಗಾರಿಕೆಗಳು



WTO ನೇಣಿನಿಂದ ಕೃಷಿ ಉಳಿಸಬಹುದೇ?

ಹೋರಾಟದ ಕಣದಲ್ಲಿ ವಿಕ್ರಾಂತ್ ಕಾರ್ಮಿಕರು

ಅರ್ಭಟಗಳ 'ವಂದೇ ಮಾತರಂ'

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 55

ಮತ್ತೆ ಸಂಯುಕ್ತ ರಂಗದ ಜಯಭೇರಿ.........

ಕಳೆದ ಸಂಚಿಕೆಯಲ್ಲಿ 2ನೇ ಸಂಯುಕ್ತ ರಂಗ ರಚನೆ, ಕನಿಷ್ಟ ಕಾರ್ಯಕ್ರಮದಡಿಯಲ್ಲಿ ಚುನಾವಣೆಗೆ ಸ್ಪರ್ದೆ ಹಾಗೂ ಕಾಂಗ್ರೆಸ್ ಮತ್ತು ಮಾಧ್ಯಮಗಳ ಅಪಪ್ರಚಾರದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಸಿಪಿಐ(ಎಂ) ಮತ್ತು ಸಂಯುಕ್ತ ರಂಗವನ್ನು ಮುಖ್ಯವಾಹಿನಿಯಿಂದ ಪ್ರತ್ಯೇಕಿಸಲು ಪ್ರತಿಗಾಮಿಗಳು ನಡೆಸಿದ ವಿಫಲಗೊಳಿಸಿದ ಸಂಯುಕ್ತ ರಂಗ ಚುನಾವಣೆಯಲ್ಲಿ ಜಯ ಧಾರಿಸಿದ ಬಗ್ಗೆ ಹಾಗೂ ಸಂಯುಕ್ತ ರಂಗದ ಒಗ್ಗಟ್ಟು ಹಾಗೂ ರಾಜ್ಯದ ಕಲ್ಯಾಮ ಹಿತಾಸಕ್ತಿಯಿಂದ ಸಿಪಿಐ(ಎಂ) ದೊಡ್ಡ ಪಕ್ಷವಾದರೂ ಮುಖ್ಯಮಂತ್ರಿ ಸ್ಥಾನದ ತ್ಯಾಗ ಈ ಬಗ್ಗೆ ಓದಿರಿ...

ಅಪಪ್ರಚಾರದ ಜತೆಯಲ್ಲಿ, ಕಾಂಗ್ರೆಸ್ ಮತ್ತು ಪತ್ರಿಕೆಗಳು ಜನರಲ್ಲಿ ಗೊಂದಲ ಹುಟ್ಟಿಸುವ ಪ್ರಶ್ನೆಗಳನ್ನು ಎತ್ತಿದವು. ರಾಜ್ಯ ಸರಕಾರಗಳಿಗೆ ತುಂಬಾ ಪರಿಮಿತವಾದ ಅಧಿಕಾರವಿರುತ್ತದೆ ಎಂಬುದು ನಮ್ಮ ಅಭಿಮತ. ಹೀಗಿರುವಾಗ, ಸಿಪಿಐ(ಎಂ)ಗೆ ಅಧಿಕಾರದಲ್ಲಿ ಆಸಕ್ತಿ ಏಕೆಂಬುದು ಅರ್ಥವಾಗುತ್ತಿಲ್ಲ ಎಂದು ಅವರು ಹೇಳಿದರು.

ಸರಕಾರದಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿದಂತೆ ನಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದರೂ ಈ ರೀತಿಯ ಪ್ರಶ್ನೆಯನ್ನು ಎತ್ತಲಾಯಿತು.

ಸರಕಾರದಲ್ಲಿ ಯಾಕೆ ಭಾಗವಹಿಸಬೇಕು ಎಂಬುದಕ್ಕೆ ಕಾರಣ ಸರಳ. ನಾವು ಸರಕಾರದಲ್ಲಿದ್ದರೆ ಹೆಚ್ಚೆಚ್ಚು ಜನರನ್ನು ನಮ್ಮ ಹೋರಾಟಗಳತ್ತ ಸೆಳೆದುಕೊಳ್ಳಬಹುದು.

ನಮ್ಮ ಟೀಕಾಕಾರರು-ಅವರಲ್ಲಿ 'ಎಡಪಂಥೀಯ'ರೂ ಇದ್ದರು - ಸರಕಾರದಲ್ಲಿ ಭಾಗವಹಿಸುವ ನಮ್ಮ ನೀತಿಯನ್ನು ಪ್ರಶ್ನಿಸಿದರು. ನಮ್ಮನ್ನು ಸಮಯಸಾಧಕರು, ತತ್ವ ಹೀನರು ಎಂದು ವರ್ಣಿಸಿದರು. ಸಿಪಿಐ(ಎಂ) ರಾಜ್ಯ ಸಮಿತಿ ಮತ್ತೆ ಮರುತ್ತರ ನೀಡಿತು. ಕಾಂಗ್ರೆಸ್‌ಗೆ ವಿರೋಧವಾಗಿರುವ ಎಲ್ಲ ಪ್ರಜಾಸತ್ತಾತ್ಮಕ ಪಕ್ಷಗಳ ಜತೆ ನಾವು ಹೊಂದಾಣಿಕೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದೆವು. ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಇದಕ್ಕೆ ಆಧಾರವಾಗಿರುತ್ತದೆ ಎಂದು ಸ್ಪಷ್ಟಪಡಿಸಿದೆವು. ದೇಶದ ಪ್ರಜಾಸತ್ತಾತ್ಮಕ ಶಕ್ತಿಗಳಲ್ಲಿ ಏಕತೆ ಸಾಧಿಸಲು ಅದೊಂದೇ ಉಳಿದ ಮಾರ್ಗವಾಗಿತ್ತು.

ನಮ್ಮನ್ನು ಮುಖ್ಯವಾಹಿನಿಯಿಂದ ಪ್ರತ್ಯೇಕಿಸಲು ಕಾಂಗ್ರೆಸ್ ಮತ್ತು ಇತರ ಪ್ರತಿಗಾಮಿ ಪಕ್ಷಗಳು ನಡೆಸಿದ ಸಂಚನ್ನು ವಿಫಲಗೊಳಿಸಲು ಕೂಡ ಇದೊಂದೇ ಕಾರ್ಯಸಾಧು ಪರಿಹಾರವಾಗಿತ್ತು. ನಾವು ಈ ಹೊಣೆಗಾರಿಕೆಯಿಂದ ಜಾರಿಕೊಂಡರೆ ಅದು ವಾಸ್ತವತೆಯ ಮುಂದೆ ಪಲಾಯನವಾದ ಹಾಗೂ ಅಪಜಯವಾದವಾಗುತ್ತಿತ್ತು.

ಹುಲ್ಲು ರಾಶಿಯಲ್ಲಿ ಸೂಜಿ ಹುಡುಕಿದಂತೆ.....

ಶುದ್ಧ ಪ್ರಜಾಸತ್ತಾತ್ಮಕ ಹಾಗೂ ಪೂರ್ಣ ಸಮಾಜವಾದಿ ಪಕ್ಷವನ್ನು ಮಿತ್ರಪಕ್ಷವನ್ನಾಗಿ ಹುಡುಕುವುದು ಹುಲ್ಲಿನ ಬಣವೆಯಲ್ಲಿ ಸೂಜಿಯನ್ನು ಹುದುಕಿದಂತೆ ಆಗುತ್ತದೆ ಎಂಬ ಅರಿವೂ ನಮಗಿತ್ತು.

ಮಿತ್ರಕೂಟದ ನಾನಾ ಪಕ್ಷಗಳ ಸಿದ್ಧಾಂತ ಮತ್ತು ರಾಜಕೀಯ ನಿಲುವುಗಳ ಮೇಲೆ ಪರಸ್ಪರರು ಸವಾರಿ ಮಾಡುವಂತಿಲ್ಲ ಎಂದೂ ಸೂತ್ರದಲ್ಲಿ ಸ್ಪಷ್ಟಪಡಿಸಲಾಯಿತು. ಸಂಘಟನಾತ್ಮಕವಾಗಿ ಕೂಡ ಅವು ತಮ್ಮ ತಮ್ಮ ಚಟುವಟಿಕೆಗಳನ್ನು ನಡೆಸಬಹುದಿತ್ತು. ಪಕ್ಷ ನೀತಿಗಳು ಮತ್ತು ಸಿದ್ಧಾಂತದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಏಕಸ್ವಾಮ್ಯ ಕಾಂಗ್ರೆಸ್ ಆಡಳಿತದ ವಿರುದ್ಧ ಸಂಯುಕ್ತವಾಗಿ ಹೋರಾಡಲು ಒಂದು ಸಾಮಾನ್ಯ ವೇದಿಕೆ ಇರಲು ಸಾಧ್ಯ ಎಂಬುದನ್ನು ಇದು ತೋರಿಸಿಕೊಡುತ್ತದೆ.

ತಾನು ನೆಲೆಯನ್ನು ಕಳೆದುಕೊಳ್ಳುತ್ತಿದ್ದು ಸಿಪಿಐ(ಎಂ) ಮೇಲೆದ್ದು ಬರುತ್ತಿದೆ ಎನ್ನುವುದು ಕಾಂಗ್ರೆಸ್ ಪಕ್ಷಕ್ಕೆ ಆ ವೇಳೆಗೆ ಮನವರಿಕೆಯಾಗಿತ್ತು.

ಸಂಯುಕ್ತ ರಂಗ ವೇದಿಕೆ ಬೆಳೆಯುತ್ತಿರುವ ಸಾಮೂಹಿಕ ಚಳುವಳಿಗಳ ಸಂಕೇತವಾಗಿತ್ತು. ದೇಶಾದ್ಯಂತ ಪ್ರತಿಕ್ರಿಯೆ ಕಂಡುಬಂದಿತ್ತು. 60 ರ ದಶಕದ ಮಧ್ಯಭಾಗದಿಂದ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಕಾರ್ಮಿಕರು, ರೈತರು ಮತ್ತು ಮಧ್ಯಮ ವರ್ಗದ ಜನರು ಬಂಡವಾಳಶಾಹಿ ವಿಭಾಗಗಳಿಗೆ ನೇರ ಸವಾಲು ಹಾಕಿದ್ದರು ಹಾಗೂ ಅಧಿಕಾರಕ್ಕಾಗಿ ಹೋರಾಡುತ್ತಿದ್ದರು.

ರಾಜಕೀಯ ಅಧಿಕಾರ ಗಳಿಕೆಯ ಅಂತಿಮ ಗುರಿ ದೀರ್ಘಕಾಲದ ಹೋರಾಟ. ಆದರೆ ಆ ದಿಕ್ಕಿನಲ್ಲಿ ಮೊದಲ ಹೆಜ್ಜೆ ಇಟ್ಟಿದ್ದು ಸ್ಪಷ್ಟವಾಗಿತ್ತು. ಕಾಂಗ್ರೆಸ್ ಪಕ್ಷ ಸಂಕೇತಿಸುವ ಜಮೀನುದಾರರು - ಬಂಡವಾಳಶಾಹಿಗಳು ಮತ್ತು ಇತರ ಸ್ಥಾಪಿತ ಹಿತಾಸಕ್ತರು ನಡುಗಿಹೋದರು.

ಸಂಯುಕ್ತ ರಂಗ ತನ್ನ ಚುನಾವಣೆ ಕಾರ್ಯಕ್ರಮವನ್ನು ಘೋಷಿಸಿತು. 1967 ರಲ್ಲಿ ರಂಗ ಅಂಗೀಕರಿಸಿದ 18 ಅಂಶದ ಯೋಜನೆ ಈಗಲೂ ಪ್ರಸ್ತುತವಾಗಿತ್ತು. ಆದರೆ ಈ ಸಲ, ಹಿಂದಿನ ಅನುಭವದ ಆಧಾರದಲ್ಲಿ ಹೊಸ ಆದ್ಯತೆಗಳಿಗೆ ಅನುಗುಣವಾಗಿ ಕಾರ್ಯಕ್ರಮವನ್ನು ತಿದ್ದುಪಡಿ ಮಾಡಲಾಯಿತು.

ಆಹಾರ ಬಿಕ್ಕಟ್ಟು, ಭೂಸಮಸ್ಯೆ, ಶಿಕ್ಷಣ, ಕೃಷಿ ಮತ್ತು ನೀರಾವರಿ ವಿಚಾರಗಳಲ್ಲಿ ಅಗತ್ಯವಾದ ತುರ್ತುಕ್ರಮ ಕೈಗೊಳ್ಳಬೇಕು ಎಂಬುದಕ್ಕೆ ಪ್ರಧಾನ್ಯ ಕೊಡಲಾಯಿತು. ಆಹಾರ ನೀತಿಗೆ ಸಂಬಂಧಿಸಿದಂತೆ, ಗುತ್ತೇದಾರಿ ವ್ಯವಹಾರದ ಮೇಲೆ ಹೆಚ್ಚಿನ ನಿಯಂತ್ರಣ ಸಾಧಿಸುವುದಾಗಿ ರಂಗ ಹೇಳಿತು.

. ಎಲ್ಲಾ ದೊಡ್ಡ ಭೂಮಾಲೀಕರು ತಮ್ಮ ಹೆಚ್ಚುವರಿ ಬೆಳೆಯನ್ನು ಬಿಟ್ಟುಕೊಡಬೇಕು ಹಾಗೂ ಏಳು ಎಕರೆಗಿಂತ ಹೆಚ್ಚಿನ ಕೃಷಿಯೋಗ್ಯವಲ್ಲದ ಜಮೀನಿನ ಮೇಲೆ ಲೆವಿ ನೀಡಬೇಕು.

. ಮುಕ್ತ ಮಾರುಕಟ್ಟೆಯಿಂದ ಬೆಳೆ ಖರೀದಿಯನ್ನು ನಿಷೇಧಿಸಲಾಗುವುದು.

. ಸಂಗ್ರಹಿಸಲಾದ ಫಸಲಿನ ಭಾಗವನ್ನು ಅದನ್ನು ಎಲ್ಲಿ ಬೆಳೆಯಲಾಗಿತ್ತೋ ಆ ಪ್ರದೇಶಕ್ಕೆ ಕಳಿಸಲಾಗುವುದು. (ಇದು ಹೆಚ್ಚುವರಿ ಪ್ರದೇಶದ ಶೇಕಡ 30 ರಷ್ಟು ಹಾಗೂ ಕಡಿಮೆ ಇಳುವರಿ ಪ್ರದೇಶದಲ್ಲಿ ಬೆಳೆಯುವ ಪೈರಿನ ಪ್ರಮಾಣಕ್ಕೆ ಸಮನಾಗಿರುತ್ತದೆ)

. ಕಡಿಮೆ ಇಳುವರಿ ಪ್ರದೇಶದಲ್ಲಿ ನಿಯಮಿತ ಆಹಾರ ವಿತರಣೆ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು. ಅದನ್ನು ಕ್ರಮೇಣ ಇತರ ಪ್ರದೇಶಗಳಿಗೂ ವಿಸ್ತರಿಸುವುದು - ಈ ಅಂಶಗಳಿಗೆ ಸಂಯುಕ್ತ ರಂಗ ಒತ್ತು ನೀಡಿತ್ತು.

ಭೂ ಸುಧಾರಣೆಗೆ ಒತ್ತು

ಬೃಹತ್ ಭೂಸುಧಾರಣೆ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲು ಸಂಯುಕ್ತ ರಂಗ ಯೋಜಿಸಿತ್ತು. ಕೆಳಗಿನ ಅಂಶಗಳಿಗೆ ಗಮನ ಕೊಡಲಿತ್ತು.

ಭೂ ಮಾಲಕತ್ವ ಹಕ್ಕನ್ನು ರೈತರ ಪರವಾಗಿ ತರಲು ತಿದ್ದುಪಡಿಗಳನ್ನು ಮಾಡುವುದು, ಮೂರು ಎಕರೆಗಿಂತ ಕಡಿಮೆ ಪ್ರಮಾಣದ ಜಮೀನು ಹೊಂದಿರುವ ಮಧ್ಯಮ ರೈತರನ್ನು ತೆರಿಗೆಯಿಂದ ಮುಕ್ತಗೊಳಿಸುವುದು, ರೈತರ ಕುಟುಂಬದ ಗಾತ್ರವನ್ನು ಗಮನದಲ್ಲಿರಿಸಿಕೊಂಡು ಜಮೀನು ಮಿತಿಯನ್ನು ನಿಗದಿಪಡಿಸುವುದು, ನೊಂದಾಯಿಸದ ಎಲ್ಲಾ ಜಮೀನನ್ನು ಗುರುತಿಸಿ ವಿತರಿಸುವುದು, ದೊಡ್ಡ ಭೂಮಾಲೀಕರನ್ನು ಪಡೆದುಕೊಳ್ಳಲಾದ ಜಮೀನಿನ ಮೇಲೆ ಭೂರಹಿತ ಹಾಗೂ ಬಡ ರೈತರಿಗೆ ಕಾಯಂ ಹಕ್ಕುಗಳನ್ನು ನೀಡುವುದು, ಬರ್ಗಾ ಮೇಲೆ ಪಾಲು ಬೆಳೆಗಾರರಿಗೆ ಅವರ ಹಕ್ಕನ್ನು ಮಾನ್ಯ ಮಾಡುವುದು ಹಾಗೂ ಕನಿಷ್ಟ ಮೂರು ವರ್ಷ ಅವರನ್ನು ಬರ್ಗಾದಿಂದ ತೆರವು ಮಾಡದಿರುವುದು.

ಶಿಕ್ಷಣ ರಂಗದಲ್ಲಿನ ಅವ್ಯವಸ್ಥೆ ಹಾಗೂ ಅರಾಜಕತೆಯನ್ನು ನಿರ್ಮೂಲ ಮಾಡಲು ರಂಗ ಸಂಕಲ್ಪ ಮಾಡಿತು. ನಾಲ್ಕನೇ ತರಗತಿ ವರೆಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ, ಪ್ರಾಥಮಿಕ ಶಾಲೆಗಳು ಇಲ್ಲದ ಕಡೆ ಅದರ ಸ್ಥಾಪನೆ.

ಕನಿಷ್ಟ ವೇತನ, ನಿರುದ್ಯೋಗ ಭತ್ಯೆ ನೀಡಿಕೆ, ನೌಕರರು ಹಾಗೂ ಕಾರ್ಮಿಕರ ಅನುಕೂಲಕ್ಕಾಗಿ ಬೋನಸ್ ನೀಡಿಕೆ ಸಂಬಂಧದ ಕಾನೂನುಗಳ ಸುಧಾರಣೆಯ ಅನುಷ್ಠಾನ.

ವ್ಯಾಪಕ ಕೈಗಾರಿಕೀಕರಣದ ಅಗತ್ಯವನ್ನು ರಂಗ ಪ್ರತಿಪಾದಿಸಿತು. ಗುಡಿ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಯ ಅಭಿವೃದ್ಧಿಗೆ ಎಲ್ಲ ಕ್ರಮಗಳನ್ನು ಕೈಗೊಳ್ಳುವ ಆಶ್ವಾಸನೆ ನೀಡಿತು. ಕೈಗಾರಿಕೆಗಳ ಬೆಳವಣಿಗೆ ಇರುವ ಅಡ್ಡಿ ಆತಂಕಗಳನ್ನು ನಿವಾರಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವುದಾಗಿ ತಿಳಿಸಿತು. ವೃದ್ಧಾಪ್ಯ ವೇತನದ ಆರಂಭ ಹಾಗೂ ಪುರಸಭೆಗಳು ಮತ್ತು ಪಂಚಾಯತಿಗಳ ಇನ್ನಷ್ಟು ಪ್ರಜಾಪ್ರಭುತ್ವೀಕರಣದ ಭರವಸೆಯನ್ನು ಕೊಟ್ಟಿತು.

ಶೇಕಡ 70 ಮೀರಿದ ಮತದಾನ

1969 ಫೆಬ್ರವರಿ 9 ರಂದು ಚುನಾವಣೆ ನಡೆಯಿತು. ಶೇಕಡ 70 ಕ್ಕೂ ಮಿಕ್ಕಿದ್ಧ ಮತದಾರರು ತಮ್ಮ ಹಕ್ಕನ್ನು ಚಲಾಯಿಸಿದರು. ಎಡ ಸಮಯಸಾಧಕರು ಕರೆ ನೀಡಿದ್ದ ಚುನಾವಣೆ ಬಹಿಷ್ಕಾರದ ಹಿನ್ನೆಲೆಯಲ್ಲಿ ಈ ಪ್ರಮಾಣದ ಮತದಾನಕ್ಕೆ ಬಹಳ ಮಹತ್ವವಿದೆ. ಜನತೆ ಈ ಸಮಯಸಾಧಕರನ್ನು ಸ್ಪಷ್ಟವಾಗಿ ತಿರಸ್ಕರಿಸಿತ್ತು.

280 ಸ್ಥಾನಗಳಲ್ಲಿ ಮತದಾನ ನಡೆದಿತ್ತು. ಸಂಯುಕ್ತ ರಂಗ 214 ಗೆದ್ದಿತು. ಕಾಂಗ್ರೆಸ್ 55 ರಲ್ಲಿ ಜಯಶಾಲಿಯಾಯಿತು. ಸಿಪಿಐ(ಎಂ) ಒಂದೇ 101 ಕ್ಷೇತ್ರಗಳಲ್ಲಿ (ಆ ಪೈಕಿ ನಾಲ್ವರು ಪಕ್ಷ ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು) ಹುರಿಯಾಳುಗಳನ್ನು ಕಣಕ್ಕಿಳಿಸಿತ್ತು. ನಮ್ಮ ಬೆಂಬಲದ ಮೂವರು ಪಕ್ಷೇತರರ ಸಹಿತ ನಾವು 83 ಸ್ಥಾನಗಳಲ್ಲಿ ಗೆದ್ದವು. ಬಾಂಗ್ಲಾ ಕಾಂಗ್ರೆಸ್ 33, ಸಿಪಿಐ 30, ಫಾರ್ವರ್ಡ್ ಬ್ಲಾಕ್ 21 ಮತ್ತು ಆರ್‌ಎಸ್‌ಪಿ 12 ಸ್ಥಾನಗಳನ್ನು ಗೆದ್ದವು.

ಜನರು ಸಂಯುಕ್ತ ರಂಗದ ಪರವಾಗಿ ಇದ್ದರು. ಅಷ್ಟುಮಾತ್ರವಲ್ಲದೆ ಸಿಪಿಐ(ಎಂ) ಸಂಯುಕ್ತ ರಂಗ ವಿವಾದಾತೀತ ನಾಯಕ ಎಂಬುದನ್ನು ಅವರು ಸ್ಪಷ್ಟಪಡಿಸಿದರು. ಸಿಪಿಐ(ಎಂ) ಇದೇ ಮೊದಲ ಬಾರಿಗೆ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು.

ಈ ಸಲ ಕೂಡ ನಾನು ಬಾದಾನಗರ ಕ್ಷೇತ್ರದಿಂದ ಸ್ಪರ್ಧಿಸಿದೆ. 1967 ರಲ್ಲಿ ಕಾಂಗ್ರೆಸನಿಂದ ನನ್ನ ವಿರುದ್ಧ ಸ್ಪರ್ಧಿಸಿದ್ದ ಅಮರೇಂದು ಭಟ್ಟಾಚಾರ್ಯ ಈ ಬಾರಿಯೂ ನನ್ನ ಪ್ರತಿಸ್ಪರ್ಧಿಯಾಗಿದ್ದರು. 67 ರಲ್ಲಿ 3500 ಮತಗಳ ಅಂತರದಿಂದ ಗೆದ್ದಿದ್ದ ನಾನು ಈ ಬಾರಿ 17,500 ಮತಗಳ ಅಂತರದಿಂದ ಕಾಂಗ್ರೆಸ್ಸನ್ನು ಪರಾಭವಗೊಳಿಸಿದೆ.

ಸಂಯುಕ್ತ ರಂಗ ಸರಕಾರ ರಚಿಸುವಾಗ ಸಮಸ್ಯೆ ಉದ್ಭವವಾಯಿತು. ತನ್ನ ನಾಯಕ ಅಜಯ ಮುಖರ್ಜಿಯನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಬಾಂಗ್ಲಾ ಕಾಂಗ್ರೆಸ್ ಪಟ್ಟು ಹಿಡಿಯಿತು. ರಂಗದ ಕೆಲವು ಅಂಗ ಪಕ್ಷಗಳೂ ಅದಕ್ಕೆ ಬೆಂಬಲ ನೀಡಿದವು. ತನ್ನ ನಿಲುವು ಜನರ ತೀರ್ಪಿಗೆ ವಿರುದ್ಧವಾದುದು ಎಂದು ಬಾಂಗ್ಲಾ ಕಾಂಗ್ರೆಸ್ ಒಮ್ಮೆಯೂ ಯೋಚಿಸಲಿಲ್ಲ. ಸಿಪಿಐ(ಎಂ) ರಂಗದ ನೇತಾರ ಎನ್ನುವುದರಲ್ಲಿ ಯಾವ ಸಂಶಯವೂ ಇರಲಿಲ್ಲ. ಆದರೆ ತನ್ನನ್ನು ಮುಖ್ಯಮಂತ್ರಿಯನ್ನಾಗಿ ಮಾಡದಿದ್ದರೆ ಮಂತ್ರಿ ಮಂಡಲದಲ್ಲಿ ಸೇರುವುದಿಲ್ಲ ಎಂದು ಅಜಯ್ ಮುಖರ್ಜಿ ಹೇಳಿದರು. ವೈಯಕ್ತಿಕ ಪ್ರತಿಷ್ಠೆಯನ್ನು ರಾಜಕೀಯ ವಿಷಯವನ್ನಾಗಿ ಮಾಡಿದರು.

ಸಿಪಿಐ(ಎಂ) ತ್ಯಾಗ

ಸಂಯುಕ್ತ ರಂಗದ ಒಗ್ಗಟ್ಟು ಮತ್ತು ರಾಜ್ಯದ ಕಲ್ಯಾಣದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಸಿಪಿಐ(ಎಂ) ಮುಖ್ಯಮಂತ್ರಿ ಸ್ಥಾನವನ್ನು ಬಾಂಗ್ಲಾ ಕಾಂಗ್ರೆಸ್‌ಗೆ ಬಿಟ್ಟುಕೊಟ್ಟಿತು. ಆ ಹೊತ್ತಿಗೆ, ಸಾರ್ವಜನಿಕ ಆಡಳಿತ ಮತ್ತು ಪೋಲೀಸ್ ಸಹಿತವಾದ ಗೃಹಖಾತೆಯನ್ನು ತನಗೆ ಕೊಡಬೇಕೆಂದು ಸಿಪಿಐ(ಎಂ) ಸಲಹೆ ಮಾಡಿತು. ಆದರೆ ಗೃಹಖಾತೆಯಲ್ಲಿ ಸಿಪಿಐ ಕೂಡ ಪಾಲು ಕೇಳಿತು.

ಬಿಕ್ಕಟ್ಟು ಜಟಿಲವಾಯಿತು. ದೀರ್ಘ ಸಮಾಲೋಚನೆಯ ನಂತರ ಅಜಯ ಮುಖರ್ಜಿಯನ್ನು ಮುಖ್ಯಮಂತ್ರಿಯನ್ನಾಗಿ ಸೂಚಿಸಲಾಯಿತು. ನಾನು ಸಿಪಿಐ(ಎಂ) ಶಾಸಕ ಪಕ್ಷ ನಾಯಕನಾಗಿ ಸರ್ವಾನುಮತದಿಂದ ಆಯ್ಕೆಯಾದೆ. ಆ ಆಧಾರದಲ್ಲಿ ನಾನು ಸಂಯುಕ್ತ ರಂಗ ಶಾಸಕ ಪಕ್ಷದ ಉಪನಾಯಕನಾದೆ.

ಸಾರ್ವತ್ರಿಕ ಆಡಳಿತ ಮತ್ತು ಪೋಲೀಸ್ ಸಹಿತವಾದ ಗೃಹಖಾತೆಯ ಉಸ್ತುವಾರಿಯೊಂದಿಗೆ ನಾನು ಉಪಮುಖ್ಯಮಂತ್ರಿ ಆದೆ. ಸಿಪಿಐ(ಎಂ) ನ ಈ ಕೆಳಗಿನ ನಾಯಕರು ಕೂಡ ಮಂತ್ರಿಗಳಾದರು.

ಹರೆಕೃಷ್ಣ ಕೋನಾರ್ (ಭೂ ಮತ್ತು ಭೂಕಂದಾಯ), ನಿರಂಜನ್ಸೇನ್ ಗುಪ್ತಾ(ನಿರಾಶ್ರಿತರ ಪರಿಹಾರ ಹಾಗೂ ಪುನರ್‌ವಸತಿ ಮತ್ತು ಜೈಲು), ಸತ್ಯಪ್ರಿಯ ರಾಯ್(ಶಿಕ್ಷಣ), ಕೃಷ್ಣಪ್ರಸಾದ್ ಘೋಷ್(ಕಾರ್ಮಿಕ), ಅಬ್ದುಲ್ಲಾ ರಸೂಲ್(ಸಾರಿಗೆ-ಗೃಹ), ಪ್ರೊವಸ್ ರಾಯ್(ಮೀನುಗಾರಿಕೆ), ಕೃಷ್ಣಚಂದ್ರ ಹಲ್ದರ್(ಅಬಕಾರಿ) ಮತ್ತು ಗುಲಾಂ ಯಝುದಾನಿ(ಪಾಸ್‌ಪೋರ್ಟ್ ಮತ್ತು ಸಿವಿಲ್ ಡಿಫೆನ್ಸ್ - ಗೃಹ).

ಸಂಯುಕ್ತ ರಂಗ ಸರಕಾರದ ಇತರ ಮಂತ್ರಿಗಳ ವಿವರ:

ಸುಶೀಲ್ ಧಾರಾ, ಚಾರು ಸರ್ಕಾರ್, ಭಭತೋಷ ಸರೇನ್(ಬಾಂಗ್ಲಾ ಕಾಂಗ್ರೆಸ್), ಸೋಮನಾಥ ಲಹರಿ, ವಿಶ್ವನಾಥ ಮುಖರ್ಜಿ, ರೇಣು ಚಕ್ರವರ್ತಿ, ಅಬ್ದುಲ್ ರಜಾಕ್ ಖಾನ್(ಸಿಪಿಐ), ಕನ್ನೈಲಾಲ್ ಭಟ್ಟಾಚಾರ್ಯ, ಶಂಭು ಘೋಷ್, ಭಕ್ತಿಭೂಷಣ ಮಂಡಲ್(ಫಾರ್ವರ್ಡ್ ಬ್ಲಾಕ್), ನಾನಿ ಭಟ್ಟಾಚಾರ್ಯ, ಜತಿನ್ ಚಕ್ರವರ್ತಿ(ಆರ್‌ಎಸ್‌ಪಿ), ಸುಭೋದ ಬ್ಯಾನರ್ಜಿ, ಪ್ರತಿಭಾ ಮುಖರ್ಜಿ(ಎಸ್‌ಯುಸಿ), ಜ್ಯೋತಿ ಭಟ್ಟಾಚಾರ್ಯ(ವರ್ಕರ್ಸ್ ಪಾರ್ಟಿ), ಸುಧಿನ್ ಕುಮಾರ್(ಆರ್‌ಸಿಪಿಐ), ದೇವ ಪ್ರಕಾಶ್ ರಾಯ್(ಗೂರ್ಖಾಲೀಗ್), ವಿಭೂತಿ ದಾಸ್‌ಗುಪ್ತಾ (ಲೋಕ್ ಸೇವಕ ಸಂಘ), ರಾಮಚಟರ್ಜಿ (ಫಾರ್ವರ್ಡ್ ಬ್ಲಾಕ್-ಮಾರ್ಕ್ಸ್‌ವಾದಿ) ಮತ್ತು ಬರ್ದಾ ಮುಕುಮಣಿ(ಬೊಲ್ಶೆವಿಕ್ ಪಕ್ಷ)

1969 ರ ಫೆಬ್ರವರಿ 25 ರಂದು ಎರಡನೇ ಸಂಯುಕ್ತ ರಂಗ ಮಂತ್ರಿಮಂಡಲ ಅಧಿಕಾರಕ್ಕೆ ಬಂತು. ಇನ್ನಷ್ಟು ಉತ್ಸಾಹದಿಂದ ನಮ್ಮ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗಲು ಇನ್ನೊಂದು ಅವಕಾಶ ಲಭ್ಯವಾಯಿತು.

ಜನಪರ ಸರಕಾರದ ವಿರುದ್ಧ ಪಿತೂರಿ

ಭೂ ಸುಧಾರಣೆ ನಮ್ಮ ಮೊದಲ ಆದ್ಯತೆಯಾಯಿತು. ಹೆಚ್ಚುವರಿ ಜಮೀನನ್ನು ಗುರುತಿಸಲು, ಒಕ್ಕಲೆಬ್ಬಿಸುವುದನ್ನು ತಡೆಯಲು ಜನತೆ ವ್ಯಾಪಕವಾಗಿ ಪಾಲ್ಗೊಳ್ಳುವಂತೆ ಮನವಿ ಮಾಡಲಾಯಿತು. ಹಾಗೂ ಪ್ರಾಂತೀಯ ಕೃಷಿಕ ಸಭಾಗಳ ಎಲ್ಲಾ ಘಲಕಗಳು ಈ ಪ್ರಯತ್ನದಲ್ಲಿ ಕೈಜೋಡಿಸಿದವು. ಹೆಚ್ಚುವರಿ ಜಮೀನನ್ನು ವಶಪಡಿಸಿಕೊಳ್ಳುವುದು ಹಾಗೂ ಅದನ್ನು ವಿತರಿಸುವುದರ ವಿಚಾರವಾಗಿ ಗ್ರಾಮೀಣ ಹಾಗೂ ಅದನ್ನು ವಿತರಿಸುವುದರ ವಿಚಾರವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕ ಚಳುವಳಿಗಳು ನಡೆದವು. ಸಂಯುಕ್ತರಂಗ ಸರಕಾರದ ಆಡಳಿತ ಅವಧಿಯಲ್ಲಿ ಒಕ್ಕಲೆಬ್ಬಿಸುವುದನ್ನು ವಸ್ತುಶಃ ಪೂರ್ಣವಾಗಿ ನಿಲ್ಲಿಸಲಾಯಿತು. ಇದು ಒಂದು ಆರಂಭವಷ್ಟೆ. ಕೆಲವು ಭೂಮಾಲಿಕರು ನ್ಯಾಯಾಲಯಗಳಿಂದ ತಡೆಯಾಜ್ಞೆ ತಂದು ಅಡ್ಡಿ ಆತಂಕ ಒಡ್ಡಿದರೂ ನಾವು ಆಶಾವಾದಿಗಳಾಗಿದ್ದೆವು.

ಮುಂದುವರಿಯುವುದು

ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳು ಜನತಂತ್ರ ವಿರೋಧಿ, ವಿಶ್ವಬ್ಯಾಂಕ್ ಗುಲಾಮಿಕೆ ನಿರ್ದೇಶನದು

ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ.ಗುರುಶಾಂತ್

ಹಲವು ಹುದ್ದೆಗಳ ರದ್ದು ಹಾಗೂ ಕೆಲವು ಇಲಾಖೆಗಳ ನಿರ್ಮೂಲನದಂತಹ ಶಿಫಾರಸು ನೀಡಿರುವ ಆಡಳಿತ ಸುಧಾರಣಾ ಆಯೋಗದ ಮಧ್ಯಂತರ ಶಿಫಾರಸುಗಳಲ್ಲಿ ಬಹುತೇಕ ತಿರಸ್ಕಾರಕ್ಕೆ ಯೋಗ್ಯವಾಗಿವೆ. ಈ ಶಿಫಾರಸುಗಳು ಸರ್ಕಾರದ ಆಡಳಿತವನ್ನು ಸುಧಾರಿಸುವ ಅಥವಾ ಚುರುಕುಗೊಳಿಸುವ ದಿಕ್ಕಿನಲ್ಲಿರದೇ 'ಸರ್ಕಾರವನ್ನು ಸಣ್ಣ ಗಾತ್ರಕ್ಕೆ' ಅದರ ಹಂತ ಹಂತ...ಸಗೀಕರಿಸುವ ಅಂತರ್ರಾಷ್ಟ್ರೀಯ ಕಾರ್ಯಸ್ಥ... ಸಂಸ್ಥೆ ಹಾಗೂ ವಿಶ್ವ ಬ್ಯಾಂಕಿನ ನಿರ್ದೇಶನಗಳನ್ನೇ ಜಾರಿಗೊಳಿಸುವ 'ಅಗಾಧ ಕಾಳಜಿ'ಯಿಂದ ಕೂಡಿದೆ. ಇವು ಕೇಂದ್ರ-ರಾಜ್ಯ ಸರ್ಕಾರಗಳೆರಡರ ಹುನ್ನಾರವೂ ಹೌದು. ಉದಾರೀಕರಣದ ಹೊಸ ಆರ್ಥಿಕ ನೀತಿಯ ಫಲವಾಗಿದೆ. ಹಾರ್‍ನಳ್ಳಿ ರಾಮಸ್ವಾಮಿಯವರ ಅದ್ಯಕ್ಷತೆಯ ಈ ಸುಧಾರಣಾ ಆಯೋಗ ರಚಿಸಿದ ಕಾರ್ಯಸೂಚಿ ಪ್ರಕಟವಾದಾಗಲೇ ಇಂತಹ ಶಿಫಾರಸು ಪ್ರಕಟಗೊಳ್ಳುವ ಅನುಮಾನ ಎದ್ದಿತ್ತು. ಹೀಗೆ ಅದು ತನ್ನ ಯಜಮಾನರು ವಹಿಸಿದ ಕೆಲಸನ್ನು ನಿಷ್ಠೆಯಿಂದ ಅನುಷ್ಠಾನಕ್ಕೆ ತರಲು ನಿರ್ಧರಿಸಿದ್ದಾರೆ.

ತನ್ನ ನಾಡಿನ ಜನತೆಯ ಅಗತ್ಯಗಳಿಗೆ ಕಿವಿಕೊಡುವ ಯಾವ ಇರಾದೆಯೂ ಇಲ್ಲದ, ಸಾಲ ಕೊಟ್ಟವರ ಆದೇಶಗಳಿಗೆ ಡೊಗ್ಗು ಸಲಾಮು ಹಾಕುವ ಕೃಷ್ಣ ಸರ್ಕಾರದ ನಿಲುವು ಸಾರ್ವಭೌಮತೆ, ಪ್ರಜಾಪ್ರಭುತ್ವ, ಮೌಲ್ಯಗಳಿಗೆ ಮಾಡಿದ ಅವಮಾನವಾಗಿದೆ.

...ರಸುಗಳಂತೆ ನಾಡ ಕಛೇರಿ, ವಿಭಾ... ಈ ವರದಿಯ ಮ...ಛೇರಿ(ಎ.ಸಿ.)ಗಳನ್ನು ರದ್ದು ಈ ಹಿಂದೆ ಆಡಳಿತಾತ್ಮಕ ಹಾಗೂ ಮಾರ್ಗ... ನಿರ್ವಹಣೆಗಾಗಿ ರೂಪಿಸಲಾಗಿದ್ದ ಇಲಾಖೆಗಳನ್ನು (ಉದಾ: ಕೃಷಿ ಇಲಾಖೆಯಿಂದ - ತೋಟಗಾರಿಕೆ, ಹೈನುಗಾರಿಕೆ, ಇತ್ಯಾದಿ ಹಾಗೆ ಆರೋಗ್ಯ ಪುನಃ ಒಂದೇ ಇಲಾಖೆಗೆ ವಿಲೀನಗೊಳಿಸಲು ಸೂಚಿಸಲಾಗಿದೆ. ಸಚಿವ ಸಂಪುಟ ಬೇಕಾದರೆ ಚಿಕ್ಕದಾಗಲೀ ಆದರೆ ಎ.ಸಿ., ತಹಶೀಲ್ದಾರ್, ಮಾತ್ರವಲ್ಲ ಅತ್ಯಗತ್ಯವಾಗಿರುವ ಪ್ರಥಮ ದರ್ಜೆ, ದ್ವಿತೀಯ ದಜೆ, ಸಹಾಯ ಗುಮಾಸ್ತರ ಹುದ್ದೆಗಳನ್ನು ರದ್ದು ಪಡಿಸಬೇಕಂತೆ. ಆದರೆ ಇದೇ ಆಯೋಗವು ಸರ್ಕಾರದ ಬಳಿ ಒಂದು ಲಕ್ಷದ 5 ಸಾವಿರ ಕಡತಗಳು ವಿಲೇವಾರಿ ಆಗದೇ ಉಳಿದಿವೆಯೆಂಬ ಸತ್ಯವನ್ನು ಹೊರಗೆಡಹಿದೆ. ಇನ್ನೂ ಕೆಳಹಂತದ ಕಛೇರಿಗಳಲ್ಲಿ ಧೂಳು ಅಲ್ಲ ಗೆದ್ದಲು ಹಿಡಿದ ಫೈಲುಗಳೆಷ್ಟು? ಅಂದರೆ ನೌಕರರನ್ನು ಹೆಚ್ಚಿಸುವ ಬದಲು ಕಡಿತಮಾಡಬೇಕೆಂಬ ಸಲಹೆಯ ನಿಜ ಉದ್ದೇಶ ಏನು?

...ಆಧಾರದಲ್ಲಿ ನೇಮಕಾತಿ ಎಂದಿದೆ ...ೋಗ. ರಾಮಸ್ವಾಮಿಯವರ ದೃಷ್ಟಿಯಲ್ಲಿ ಯಾವುದು ಅರ್ಹತೆ?, ಈಗಿರುವ ಸಾಮಾಜಿಕ ನ್ಯಾಯದ ನೀತಿಯನ್ನು ಕೈ ಬಿಡಬೇಕೆ.... ಹೀಗೆ ಹಲವು ಇತರೆ ಗಂಭೀರ ಅಂಶಗಳೂ ಇವೆ.

ಈ ಶಿಫಾರಸುಗಳನ್ನು ಅನುಷ್ಠಾನಕ್ಕೆ ತಂದಿದ್ದಾದರೆ ಇರುವ ಹುದ್ದೆಗಳನ್ನು ನಾಶಗೊಳಿಸುವುದು, ಹೊಸ ನೇಮಕಾತಿಗೆ ನಿರ್ಬಂಧ ಹೇರುವುದು, ಕೆಲಸದ ಹೊರೆ ಹೆಚ್ಚಿ, ಒತ್ತಡ, ಗೊಂದಲಗೊಳಿಸುವುದು, ಒಟ್ಟಾರೆ ಜನಸಾಮಾನ್ಯರ ಪಾಲಿಗೆ ಕರಾಳ ಪರಿಣಾಮ ಬೀರಲಿದೆ. ನಿರುದ್ಯೋಗಿಗಳಿಗೆ ಹೆಚ್ಚಿನ ಬವಣೆ ತಂದೊಡ್ಡಲಿದೆ. ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಲಿವೆ. ಈಗಾಗಲೇ ಜನಸಂಖ್ಯೆಯ ಹೆಚ್ಚಳ, ಹಲವುಹೊಸ ಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ಹೆಚ್ಚಿನ ನೌಕರರ ನೇಮಕಾತಿ, ಹೊಸ ಇಲಾಖೆಗಳ ಸೃಷ್ಟಿ ಹಾಗೂ ವಿಸ್ತರಣೆ ಅತ್ಯಗತ್ಯವಿತ್ತು. ಇದರ ಬದಲಿಗೆ ಈಗ ತಂದಿರುವ ಶಿಫಾರಸು, ಆಡಳಿತ ವಿಕೇಂದ್ರೀಕರಣದ ಮೂಲಕ ಪರಿಣಾಮಕಾರಿ ಆಡಳಿತ ತರುವ ಬದಲು ಪೇಪರ್‌ಲೆಸ್, ಕ್ಲರ್ಕ್‌ಲೆಸ್ ಎಂಬ ಹೈಟೆಕ್ ಗುಲಾಮರ ಸರ್ವಾಧಿಕಾರ ಮೆರೆಸಲು ಹೊರಟಂತಿದೆ.

ಇಂತಹ ಈ ಎಲ್ಲಾ ಶಿಫಾರಸ್ಸುಗಳನ್ನು ಕೃಷ್ಣ ಸರ್ಕಾರ ಒಪ್ಪಬಾರದು. ಒಪ್ಪದಂತೆ ಎಲ್ಲಾ ಕಡೆಗಳಿಂದ ಪ್ರತಿರೋಧ ಒಡ್ಡಬೇಕು.

ಶಿಕ್ಷಣ ದಂಧೆಗೆ ಅನುಮತಿ

ಕರ್ನಾಟಕ ಘನ ಸರ್ಕಾರ ಹೊಸದಾಗಿ 41 ಎಂಜಿನಿಯರಿಂಗ್ ಕಾಲೇಜುಗಳಿಗೆ ಅನುಮತಿ ನೀಡಿದೆ. ಇದರಿಂದಾಗಿ ಈಗಿರುವ 9000 ದ ಜೊತೆಗೆ ಹೊಸದಾಗಿ 11 ಸಾವಿರ ಸೀಟುಗಳು ತೆರೆಯಲಿವೆ.ಯಾರಿಗೆ ಎಂಬುದೇ ಪ್ರಶ್ನೆ. ಜನಸಾಮನ್ಯರಿಗಲ್ಲ ಎಂಬುದೇ ಸಿದ್ಧ ಉತ್ತರ. ಈ ಹೊಸ ಕಾಲೇಜುಗಳು ಆರಂಭವಾಗುವುದೇ ಆ ಖಾಸಗಿ ಸಂಸ್ಥೆಗಳಿಂದ.

ಇದನ್ನು ಬರೀ ಖಾಸಗೀ ಎಂದರೆ ಹಿಂದಿನ ಹುನ್ನಾರ ಅರ್ಥವಾಗುವುದು ಕಷ್ಟ... ಈ ಕಾಲೇಜು ಪಡೆದಿರುವುದು ವಿವಿಧ ಜಾತಿಗಳು, ಸರಾಯಿ ಲಾಭಿಗಳು, ರಾಜಕಾರಣಿಗಳು, ಬೆಳಗಾವಿ ಲಿಂಗಾಯತ್ ಸೊಸೈಟಿ.. ಲಿಕ್ಕರ್ ದೊರೆಗಳಾದ ದಾಸಪ್ಪ, ಆದಿಕೇಶವರು, ಸಚಿವರಾದ ಮಲ್ಲಿಕಾರ್ಜುನ ಖರ್ಗೆ, ಟಿ.ಜಾನ್, ಮಾಜಿ ಸಚಿವ ಭೀಮಣ್ಣ ಖಂಡ್ರೆ, ಜಾಲಪ್ಪ, ಎಂ.ಎಸ್.ಸೀತಾರಾಂ, ಉದ್ಯಮಪತಿಗಳಾದ ದಯಾನಂದ ಸಾಗರ್, ಶರಣಬಸಪ್ಪ ಅಪ್ಪ, ಖಮರುಲ್ ಇಸ್ಲಾಂ, ಎನ್.ಆರ್.ಶೆಟ್ಟಿ, ಡಾ|| ಜವಳಿ.. ಯವರಿಗೆ ಸಾಕಲ್ಲವೇ ಈ ಪಟ್ಟಿ. ಹೈಟೆಕ್ ಕೃಷ್ಣರ ಶಿಕ್ಷಣ ದಂದೆ ಹಾಗೂ ಮಾಫಿಯಾ ಸೇವೆ.

ಅಖಿಲ ಭಾರತ ತಾಂತ್ರಿಕ ಮಂಡಳಿ ಅನುಮತಿ ಸಿಕ್ಕ ಕೂಡಲೇ (ಕೇಂದ್ರದಲ್ಲೂ ಇವರಸೋದರರೇ ಇದ್ದಾರಲ್ಲ) ವ್ಯಾಪಾರ ಆರಂಭಿಸಿರುವ ಈ

ಪುಟ 11 ಕ್ಕೆ

ಅರಣ್ಯ ಇಲಾಖೆಯುವರಿಂದ ರೈತರಿಗೆ ಕಿರುಕುಳ

ಅರಣ್ಯ ಇಲಾಖೆಯುವರು ಕೋಲಾರ ಜಿಲ್ಲೆಯಲ್ಲಿನ ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವ ಭೂ ಪ್ರದೇಶಕ್ಕೆ ಗಡಿ ರೇಖೆಯನ್ನು ಗುರ್ತಿಸಿ ಗಡಿ ಹದ್ದುಬಸ್ತು ನಿರ್ಮಿಸುತ್ತಿರುವ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳ ಮತ್ತು ರೈತರ ನಡುವೆ ತಕರಾರುಗಳು ಉಂಟಾಗುತ್ತಿರುವುದು ಹೆಚ್ಚಾಗಿದೆ. ಇಲಾಖೆಯವರು ಗಡಿ ಅದ್ದುಬಸ್ತು ನಿರ್ಮಿಸುವಾಗ ಅರಣ್ಯ ಪ್ರದೇಶವಲ್ಲದೇ ಅದರ ಪಕ್ಕದಲ್ಲಿರುವ ಗೋಮಾಳ, ಸರ್ಕಾರಿ ಭೂಮಿಗಳಲ್ಲಿ ಸಕ್ರಮಮಾಡಿಕೊಂಡಿರುವ ರೈತರು ಹಾಗೂ ಅಕ್ರಮ ಸಾಗುವಳಿ ಮಾಡುತ್ತಿರುವ ರೈತರಭೂಮಿಗಳನ್ನು ಸೇರಿಸಿಕೊಂಡು ಗಡಿ ಅದ್ದುಬಸ್ತು ನಿರ್ಮಾಣ ಮಾಡುವ ಮೂಲಕ ರೈತರಿಗೆ ಕಿರುಕುಳ ನೀಡುತ್ತಿದ್ದಾರೆ. ಶ್ರೀನಿವಾಸಪುರ ತಾಲ್ಲೂಕು ಸೇರಿದಂತೆ ಜಿಲ್ಲೆಯ ಬಹುತೇಕ ತಾಲ್ಲೂಕುಗಳಲ್ಲಿ ಅರಣ್ಯ ಇಲಾಖೆಯುವರು ಗಡಿ ನಿರ್ಮಾಣ ಕಾರ್ಯಾಚರಣೆ ಆರಂಭಿಸಿ ತಮ್ಮ ಜಮೀನುಗಳಿಂದ ರೈತರನ್ನು ತೆರುವುಗೊಳಿಸುವ ಕ್ರಮಕ್ಕೆ ವಿರೋಧ ವ್ಯಕ್ತಗೊಂಡಿದೆ.

1985-86 ರಲ್ಲಿ ಸರ್ಕಾರದ ಆದೇಶದಂತೆ ಅರಣ್ಯ ಇಲಾಖೆಯವರು ಕಂದಾಯ ಇಲಾಖೆಯಿಂದ ಜಿಲ್ಲೆಯ ಅನೇಕ ಕಡೆ 'ಸಿ' ಮತ್ತು 'ಡಿ' ವರ್ಗದ ಸರ್ಕಾರಿ ಭೂಮಿಯನ್ನು ಪಡೆಯಲಾಗಿತ್ತು. ಆ ಮೊದಲೇ 'ಸಿ' ಮತ್ತು 'ಡಿ' ವರ್ಗದ ಸರ್ಕಾರಿ ಭೂಮಿಯನ್ನು ಭೂಮಿ ಇಲ್ಲದ ಭೂಹೀನರು ಕೃಷಿಕೂಲಿಕಾರರು ಸಾವಿರಾರು ಎಕರೆಯಷ್ಟು ಭೂಮಿಯನ್ನು ಅಕ್ರಮವಾಗಿ ಉಳುಮೆ ಮಾಡುತ್ತಿದ್ದರು. ಅವುಗಳ ಸಕ್ರಮಕ್ಕೆ ಸಾಗುವಳಿ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಸರ್ಕಾರ ಆದೇಶವನ್ನು ಮುಂದೆ ಇಟ್ಟುಕೊಂಡು ಅರಣ್ಯ ಇಲಾಖೆಯವರು ಸದರಿ ಭೂಮಿಗಳಿಂದ ರೈತರನ್ನು ತೆರುವುಗೊಳಿಸಿ ರೆವಿನ್ಯೂ ಇಲಾಖೆಯಿಂದ ತಮ್ಮ ಇಲಾಖೆಗೆ ವರ್ಗಾಯಿಸಿಕೊಂಡು ಅರಣ್ಯವನ್ನು ಬೆಳೆಸಿದರು.

1991 ರಲ್ಲಿ ಕರ್ನಾಟಕ ಸರ್ಕಾರ ಮತ್ತೊಂದು ಆದೇಶವನ್ನು ಹೊರಡಿಸಿ, 1986 ರಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಿದ್ದ 'ಸಿ' ಮತ್ತು 'ಡಿ' ವರ್ಗದ ಸರ್ಕಾರಿ ಭೂಮಿಯನ್ನು ಕಂದಾಯ ಇಲಾಖೆಗೆ ಪುನರ್ ವರ್ಗಾಯಿಸಬೇಕೆಂದು ಆದೇಶಿಸಿತು. ಕೆಲವು ತಾಲ್ಲೂಕುಗಳಲ್ಲಿ ರೆವಿನ್ಯೂ ಅಧಿಕಾರಿಗಳು ಈ ಆದೇಶವನ್ನು ಸಕ್ರಮವಾಗಿ ಜಾರಿಗೊಳಿಸದ ಪರಿಣಾಮವಾಗಿ ಕೆಲವು 'ಸಿ' ಮತ್ತು 'ಡಿ' ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ವಾಪಸ್ಸಾಗಲಿಲ್ಲ. ಕೆಲವು ಕಡೆ ರೆವಿನ್ಯೂ ದಾಖಲೆಗಳಲ್ಲಿ ವಾಪಸ್ಸಾಗಿರುವ ಬಗ್ಗೆ ದಾಖಲಾಗಿದ್ದರೂ ಸ್ವಾದೀನದಲ್ಲಿ ಅರಣ್ಯ ಇಲಾಖೆಯವರೇ ಈಗಲೂ ಇದ್ದಾರೆ.

1992-93 ರಲ್ಲಿ ಸರ್ಕಾರಿ ಗೋಮಾಳ, ಬಂಜರು ಭೂಮಿ, ಖರಾಬು ಭೂಮಿಯಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ರೈತರು ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿ ಸಕ್ರಮಗೊಳಿಸಿಕೊಳ್ಳಬಹುದೆಂದು ಸರ್ಕಾರ ಆದೇಶಿಸಿತು. 1996 ರಿಂದ 98 ರ ತನಕ ಭೂ ಮಂಜೂರಾತಿ ಸಮಿತಿಗಳ ಮೂಲಕ ಸಕ್ರಮಗೊಳಿಸಿ ಭೂಮಿಯನ್ನು ವಿತರಿಸಲಾಯಿತು. ಕರ್ನಾಟಕ ರಾಜ್ಯದಲ್ಲಿ ರೈತ ಸಂಘಟನೆಗಳ ನಿರಂತರ ಹೋರಾಟದ ಪ್ರತಿಫಲವಾಗಿ 'ಉಳುವವನಿಗೆ ಭೂಮಿ ಕೊಡಿ' 'ಅಕ್ರಮ ಭೂಮಿ ಸಕ್ರಮಗೊಳಿಸಿ' ಎಂಬ ಬೇಡಿಕೆಗಳು ಸಫಲವಾಗಿ ಇದರ ಪ್ರಯೋಜನ ಸ್ವಲ್ಪ ಮಟ್ಟಿಗೆ ಬಡರೈತನಿಗೆ, ಭೂಹೀನರಿಗೆ ಕೃಷಿಕೂಲಿಕಾರರಿಗೆ ಸಿಕ್ಕಿದವು. ಕೆಲವು ಪಟ್ಟಭದ್ರ ಹಿತಾಸಕ್ತಿಗಳು, ಶ್ರೀಮಂತ ರೈತರು ಅಧಿಕಾರಿಗಳೊಂದಿಗೆ ಶಾಮೀಲಾಗಿ ಭ್ರಷ್ಟಾಚಾರದ ಮೂಲಕ ಬಡವರಿಗೆ ಸಿಗಬೇಕಾಗಿದ್ದ ಭೂಮಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಭೂಹೀನ ಕೃಷಿಕರಿಗೆ ಭೂಮಿಯನ್ನು ವಿತರಿಸಬೇಕೆಂಬ ಭೂ ಸುಧಾರಣಾ ಕಾನೂನುಗಳು ಇದ್ದರೂ ಕೃಷಿಕ ಭೂಹೀನ ಬಡ ರೈತರಿಗೆ ಭೂಮಿ ಹಂಚಿಕೆಯಾಗಲಿಲ್ಲ.

ಇತ್ತೀಚಿನ ದಿನಗಳಲ್ಲಿ ಶ್ರೀಮಂತ ರೈತರು, ಕೃಷಿಕರಲ್ಲದ ಬಂಡವಾಳಗಾರರು, ವ್ಯಾಪಾರಸ್ತರು ಸರ್ಕಾರಿ ಭೂಮಿಯನ್ನು ಹಿಡಿಯಲು ಅರಣ್ಯ ಇಲಾಖೆಗೆ ಒಳಪಡದ ಸರ್ಕಾರಿಗೋಮಾಳ, ಸರ್ಕಾರಿ 'ಸಿ' ಮತ್ತು 'ಡಿ' ಭೂಮಿಯಲ್ಲಿ ಅರಣ್ಯ ಇಲಾಖೆಯವರು ಈ ಮೊದಲೇ ಅರಣ್ಯ ಬೆಳೆಸಿರುವ ಭೂಮಿಯಲ್ಲಿ ಮರಗಳನ್ನು ಕಡಿದು ನೂರಾರು ಎಕರೆ ಭೂಮಿಯನ್ನು ಹಿಡಿಯಲು ಅಕ್ರಮವಾಗಿ ಪ್ರವೇಶ ಮಾಡುತ್ತಿದ್ದಾರೆ. ಇವರ ಏಜೆಂಟರಂತಿರುವ ಸರ್ಕಾರದ ಅಧಿಕಾರಿಗಳು ಇಂತಹ ಅಕ್ರಮಕಾರರನ್ನು ತಡೆಯಲು ವಿಫಲರಾಗಿದ್ದಾರೆ.

ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯುವರು ರಾಜ್ಯ ಅರಣ್ಯ ಪ್ರದೇಶಕ್ಕೆ ಒಳಪಡದ ಸರ್ಕಾರದ 'ಸಿ' ಮತ್ತು 'ಡಿ' ವರ್ಗದ ಭೂಮಿಯನ್ನು ಗೋಮಾಳ, ನೆಡುತೋಪು ಖಾರೆಸ್ಟ್ ಸರ್ಕಾರಿ ಖರಾಬು ಭೂಮಿಯನ್ನು ರಾಜ್ಯ ಅರಣ್ಯ ಜಿಲ್ಲಾಧಿಕಾರಿಗಳ ಸುತ್ತೋಲೆ ಸಂಖ್ಯೆ ಎಲ್.ಎಸ್.ಡಿ.ಸಿ.ಆರ್.41:97-98 ದಿ. 2.3.97 ರ ಪ್ರಕಾರ ರೆವಿನ್ಯೂ ಇಲಾಖೆಗೆ ಕೋರಲಾಗಿದ್ದು, ರೆವಿನ್ಯೂ ಇಲಾಖೆಯಿಂದ ಯಾವುದೇ ತಿದ್ದುಪಡಿಗಳಾಗುವ ಮೊದಲೇ ಅರಣ್ಯ ಇಲಾಖೆಯುವರು ಗಡಿ ಅದ್ದುಬಸ್ತುಗಳನ್ನು ನಿರ್ಮಿಸುತ್ತಿರುವುದರಿಂದ, ಈಗಾಗಲೇ ಈ ವರ್ಗದ ಭೂಮಿಗಳನ್ನು ಭೂ ಮಂಜೂರು ಮಾಡಿಕೊಂಡಿರುವ ರೈತರಿಗೂ ಸೇರಿದಂತೆ ಈಗ ಅಕ್ರಮ ಸಾಗುವಳಿ ಮಾಡುತ್ತಿದ್ದು, ಸಕ್ರಮಕ್ಕೆ ಅರ್ಜಿ ಸಲ್ಲಿಸಿರುವ ರೈತರಿಗೂ ಕಿರುಕುಳ ನೀಡುತ್ತಿದ್ದಾರೆ.

ಅರಣ್ಯ ಇಲಾಖೆಯವರು ಗಡಿ ಗುರ್ತಿಸಲು ತಾಲೂಕಿನ ಕೆಲವು ಅರಣ್ಯ ಪ್ರದೇಶಗಳ ಗ್ರಾಮಗಳನ್ನು ಅಲ್ಲಿನ ಸರ್ವೆ ನಂಬರ್‌ಗಳನ್ನು ಗುರ್ತಿಸಿಕೊಂಡಿದ್ದು ಅವುಗಳ ಜೊತೆಗೆ ಅದರ ಅಕ್ಕಪಕ್ಕದಲ್ಲಿ ಗುರ್ತಿಸಿಕೊಳ್ಳದೇ ಇರುವ ಸರ್ವೆ ನಂಬರುಗಳಲ್ಲಿ ಅಕ್ರಮವಾಗಿ ಗಡಿ ಅದ್ದುಬಸ್ತು ನಿರ್ಮಿಸುತ್ತಿರುವ ಮೂಲಕ ರೈತರಿಗೆ ತೊಂದರೆ ನೀಡಲಾಗುತ್ತಿದೆ.

ಇಲಾಖೆಯವರ ಈ ಅಕ್ರಮ ನೀತಿಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಕೋಲಾರ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ. ಕಿರುಕುಳ ಹೀಗೆ ಮುಂದುವರಿಸಿದರೆ ಇಡೀ ಜಿಲ್ಲಾದ್ಯಂತ ರೈತ ಸಂಘಟನೆ ನೇತೃತ್ವದಲ್ಲಿ ಅರಣ್ಯ ಇಲಾಖೆಗಳ ಮುಂದೆ ಪ್ರತಿಭಟನೆಯನ್ನು ನಡೆಸಲಾಗುವುದು.

ಕೋಲಾರ ಜಿಲ್ಲೆಯಲ್ಲಿ ವ್ಯವಸಾಯ ಮಾಡಲು ಯಾವುದೇ ನೈಸರ್ಗಿಕ ನೀರಾವರಿ ಮೂಲಗಳು ಇಲ್ಲದೆ, ಸರ್ಕಾರದ ನೀರಾವರಿ ಯೋಜನೆಗಳು ಇಲ್ಲದೆ ಇರುವುದರಿಂದ ವರ್ಷಪೂರ್ತಿ ಕೆಲಸ ದೊರೆಯದೆ ಬಡ ರೈತರು ಕೃಷಿಕೂಲಿಕಾರರಿಗೆ ಮಳೆ ಆಶ್ರಯದಲ್ಲಿ ವ್ಯವಸಾಯ ಮಾಡಲು ಹೆಚ್ಚಿನ ಭೂಮಿ ಅವಶ್ಯಕವಾಗಿದ್ದು, ಬಡ ರೈತರು, ಕೃಷಿ ಕೂಲಿಕಾರರು ತಮ್ಮ ಜೀವನಕ್ಕಾಗಿ ವಲಸೆ ಹೋಗುವುದನ್ನು ತಪ್ಪಿಸಲು, ಸರ್ಕಾರದ ಗೋಮಾಳ, ಬಂಜರು ಭೂಮಿಯನ್ನು ಬಡ ರೈತ ಭೂಹೀನ ಕೃಷಿ ಕೂಲಿಕಾರರಿಗೆ ಹಂಚಬೇಕು. ಹಾಗೂ ಅಕ್ರಮ ಭೂಮಿಯನ್ನು ಸಕ್ರಮಗೊಳಿಸಲಿಕ್ಕೆ ಅರ್ಜಿ ಸಲ್ಲಿಸಲು ಸರ್ಕಾರ ಮತ್ತೊಮ್ಮೆ ಅವಕಾಶ ಕಲ್ಪಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಕೋಲಾರ ಜಿಲ್ಲಾ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

- ಪಿ.ಆರ್. ಸೂರ್ಯನಾರಾಯಣ

ಹೊಡಲ್ ಕೊಲೆಗಡುಕರು 'ಜೈಲ್‌ಖಾನಾ'ದಲ್ಲಿ

ಇವರು ತಲೆಮರೆಸಿಕೊಂಡಿದ್ದರೋ ಅಥವಾ ಸುರಕ್ಷಿತವಾಗಿ 'ಆಶ್ರಯುವಾಸಿ'ಗಳಾಗಿದ್ದರೇ ಎಂಬುದನ್ನು ಪೋಲೀಸರು ಅಥವಾ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆಯವರೇ ಹೇಳಬೇಕು.

ಗುಲ್ಬರ್ಗ ಜಿಲ್ಲಾ ಹಾಗೂ ರಾಜ್ಯದ ಹೈಕೋರ್ಟ್‌ನ ಮೆಟ್ಟಿಲೇರಿಸಿ ಕಂಬ ಸುತ್ತಿದರೂ ನಿರೀಕ್ಷಣಾ ಜಾಮೀನು ಸಿಗದಿರುವಾಗ ಹೊಡಲ್ ಚನ್ನಪ್ಪನ ಕೊಲೆಯ ಕುಖ್ಯಾತಿ ಕ್ರಿಮಿನಲ್ ಧರ್ಮರಾಜ್ ಅರೆಸ್ಟು ಅಥವಾ ಶರಣು ಆಗಿದ್ದಾನೆ. ಕೊಲೆ ಕೇಸನ್ನೇ ದಾಖಲಿಸದಿದ್ದಾಗ, ಚೆನ್ನಪ್ಪನ ಮನೆಯವರಿಗೆ ಧೈರ್ಯ ತುಂಬಿ, ಪ್ರಕರಣ ಬಯಲಿಗೆಳೆದು ಆ ಗ್ಯಾಂಗನ್ನು ಬಂಧಿಸಲೇಬೇಕೆಂದು ಹೋರಾಟ ನಡೆಸಿದ್ದು, ನ್ಯಾಯಾಲಯದಲ್ಲಿ ಲಡಾಯಿ ನಡೆಸಿದ್ದು ಸಿಪಿಐ(ಎಂ) ಪಕ್ಷ, ಜೊತೆಗೂಡಿದ್ದು ಸಮತಾದ ಮಾಜಿ ಸಚಿವ ಎಸ್.ಕೆ.ಕಾಂತರವರು. ಖರ್ಗೆಯವರು ತಮ್ಮ ಈ ನಿಷ್ಠಾವಂತನನ್ನು ಬಟ್ಟೆಯಲ್ಲಿ ಸುತ್ತಿ ಬಾಗಲಲ್ಲಿ ಇಟ್ಟುಕೊಂಡಿದ್ದಾರೆಂದೂ ಅಲ್ಲದೇ ಡಿವೈಎಸ್‌ಪಿಯವರ ಸುಪರ್ದಿನಲ್ಲಿ ಧರ್ಮ ಗ್ಯಾಂಗ್ ಶುಶ್ರೂಷೆ ಪಡೆಯುತ್ತಿತ್ತೆಂದೂ ಗುಸುಗುಸು ಸುದ್ದಿಗಳು ಹಬ್ಬಿದ್ದವು. ಪ್ರತಿಭಟನೆಯೂ ಬೆಳೆಯಿತು. ಹೀಗಾಗಿ ಬೇರೆ ದಾರಿಕಾಣದೆ ಈಗ ಕಂಬಿ ಎಣಿಸಬೇಕಾಗಿ ಬಂದಿದೆ. ಕ್ರಿಮಿನಲ್ ಹಾಗೂ ರಾಜಕೀಯ ಸಂಬಂಧಗಳ ವಿರುದ್ಧ ನಡೆಸಿದ ಹೋರಾಟಗಳ ಪರಿಣಾಮವಿದು. ಕೇಸ್ ನಿಖಾಲಿಯಾಗುವವರೆಗೂ ಅಪರಾಧಿಗಳಿಗೆ ಶಿಕ್ಷೆಯಾಗುವವರೆಗೂ ಹೋರಾಟ ನಡೆಸಬೇಕಿದೆ.

ಜನವರಿ 17 ರಂದು ಹಾಸನದಲ್ಲಿ ಕೆಂಪು-ಹಸಿರು-ನೀಲಿ ಶಾಲುಗಳು ಸಂಗಮ ಕೇವಲ ಬಣ್ಣಗಳಲ್ಲಿ ವಿವಿಧ ವಿಚಾರಧಾರೆಗಳು ಮಿಲನ. ಜಾಗತೀಕರಣ, ಉದಾರೀಕರಣದ ವಿರುದ್ಧ ವಿಶಾಲ ನೆಲೆಯ ಜನ ಪ್ರತಿರೋಧ ಒಡ್ಡಲು ಹಲವಾರು ಸುತ್ತಿನ ಪ್ರಚಾರ, ಸಭೆ-ಜಾಥಾ ನಡೆಸಿ, ಇದೀಗ ಸಮಾವೇಶ ಆರ್ಥಿಕ ನೀತಿಗಳು-ಹಾಗೂ ದಿಕ್ಕು ತಪ್ಪಿಸಬಯಸುವ ಕೋಮುವಾದದ ವಿರುದ್ಧ ಆಕ್ರೋಶ.

ಅಂತಃಕರಣವಿಲ್ಲದ ಜಾಗತೀಕರಣ - ವಿರೋಧಿಸಿದ ಸಮಾವೇಶ

ಹಾಸನದಲ್ಲಿ ನಡೆದ ಈ ಜಾಗತೀಕರಣ ವಿರೋಧಿ ಸಮಾವೇಶ ಜನಪರವಾದ ಎಲ್ಲಾ ಸಂಘಟನೆಗಳನ್ನು ಒಂದೇ ವೇದಿಕೆಯಡಿ ಕರೆ ತಂದು, ರೈತ-ಕಾರ್ಮಿಕ ವಿರೋಧಿಯಾಗಿರುವ ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣದಂತಹ ಆರ್ಥಿಕ ನೀತಿಗಳ ವಿರುದ್ಧದ ಹೋರಾಟದ ಹೆಜ್ಜೆಗಳನ್ನು ರೂಪಿಸಿತು.



ಈ ಸಮಾವೇಶದಲ್ಲಿ ಜನವಾದಿ ಮಹಿಳಾ ಸಂಘಟನೆಯ ಕಾರ್ಯದರ್ಶಿ ಕೆ.ನೀಲ, ರಾಜ್ಯ ರೈತ ಸಂಘದ ಅಧ್ಯಕ್ಷ ಕೆ.ಎಸ್.ಪುಟ್ಟಣ್ಣಯ್ಯ, ಖ್ಯಾತ ವಿಜ್ಞಾನಿ ಡಾ| ಎಸ್.ಚಟರ್ಜಿ, ಖ್ಯಾತ ಜನಪರ ಸಾಹಿತಿ ಡಾ. ಹಿ.ಶಿ.ರಾಮಚಂದ್ರೇಗೌಡ, ದಲಿತ ಮುಖಂಡ ಹಾಗೂ ಖ್ಯಾತ ಸಾಹಿತಿ ದೇವನೂರು ಮಹಾದೇವ, ಮತ್ತೋರ್ವ ದಲಿತ ಮುಖಂಡ ಮಾವಳ್ಳಿ ಶಂಕರ್ ಇನ್ನೂ ಮುಂತಾದ ನಾಯಕರೆಲ್ಲ ಜಾಗತೀಕರಣ ವಿರೋಧಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಕೂಲಿ ಕಾರ್ಮಿಕರ ಕಷ್ಟನಷ್ಟಗಳು ಹಾಗೂ ಜಾಗತೀಕರಣದ ಆರ್ಥಿಕ ನೀತಿ ದುಡಿಯುವ ವರ್ಗದವರಿಗೆ ತಂದೊಡ್ಡುತ್ತಿರುವ ಅನಾಹುತಗಳನ್ನು ವಿವರಿಸಿ ಜಾಗತೀಕರಣ ವಿರೋಧಿ ಸಮಾವೇಶದ ಅನಿವಾರ್ಯ ಹಾಗೂ ಅಗತ್ಯಗಳನ್ನು ಪ್ರಸ್ತಾಪಿಸಿದವರು ಸಿ.ಐ.ಟಿ.ಯು.ದ ರಾಜ್ಯ ಉಪಾಧ್ಯಕ್ಷ ಹಾಗೂ ಹಾಸನದ ಜಾಗತೀಕರಣ ವಿರೋಧಿ ವೇದಿಕೆಯ ಸಂಚಾಲಕ ವಿ.ಸುಕುಮಾರ್. ಜಿಲ್ಲೆಯಲ್ಲಿ ಸಾಲದ ಹೊರೆ ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡ ನಾಲ್ವರ ರೈತರ ಸಾವಿಗೆ ಶ್ರದ್ಧಾಂಜಲಿ ಅರ್ಪಿಸುವ ಮೂಲಕ ಈ ಜಾಗತೀಕರಣ ವಿರೋಧಿ ಸಮಾವೇಶ ಪ್ರಾರಂಭವಾಯಿತು.

ಸಮಾವೇಶದ ಉದ್ಘಾಟನೆ ಮಾಡಿದ ರೈತ ಮುಖಂಡ ಕಡಿದಾಳ್ ಶ್ಯಾಮಣ್ಣ, ಜಾಗತೀಕರಣದ ಆರ್ಥಿಕ ನೀತಿಗಳಿಗೆ ಅಂತಃಕರಣವಿಲ್ಲ. ಜನಪ್ರತಿನಿಧಿಗಳೇ ಈ ಜಾಗತೀಕರಣದ ದುಷ್ಪರಿಣಾಮಗಳಿಗೆ ಹೊಣೆಯಾಗುತ್ತಾರೆ. ಬ್ರಿಟಿಷರ ವಿರುದ್ಧ ಹೋರಾಡಿ ಜಯಿಸಿದ ಭಾರತೀಯರು ಜಾಗತೀಕರಣದ ವಿರುದ್ಧ ಹೋರಾಡಬಲ್ಲರು. ಹೋರಾಟಕ್ಕೆ ನಾವೆಲ್ಲರೂ ಅಣಿಯಾಗಬೇಕೆಂದರು.

ಹಾಸನದಲ್ಲಿ ಜಾಗತೀಕರಣ ವಿರೋಧಿ ಸಮಾವೇಶ

ವರದಿ: **ಚಂದ್ರಚೂಡ್**

ಜಾಗತೀಕರಣವೋ? ಜೋಗತೀಕರಣವೋ?

ತನ್ನ ಪ್ರಖರ ವಿಚಾರಗಳಿಂದ ಸಮಾವೇಶದಲ್ಲಿ ನೆರೆದಿದ್ದ ಸಾವಿರದಷ್ಟು ಮಂದಿಯನ್ನು ಮೈಯೆಲ್ಲಾ ಕಿವಿಯಾಗಿ ಕೇಳುವಂತೆ ಮಾತನಾಡಲು ಶುರುವಿಟ್ಟವರು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ನೀಲಾ.

ಜಾಗತೀಕರಣ ಮತ್ತು ಮಹಿಳೆ ಪಾತ್ರದ ವಿಚಾರಧಾರೆಯನ್ನು ಆಳವಾಗಿ ವಿವರಿಸಿದ ನೀಲರವರು ಜಾಗತೀಕರಣವನ್ನು ವ್ಯಾಖ್ಯಾನಿಸಿದ್ದು ಹೀಗೆ, ಉತ್ತರ ಕರ್ನಾಟಕದಲ್ಲಿ ಹೆಣ್ಣು ಮಕ್ಕಳನ್ನು 'ಬಸವಿ' ಬಿಡುವುದಕ್ಕೆ ಜೋಗತೀ.. ಈ ದೇಶದ ಸ್ವಾಭಿಮಾನವನ್ನು, ಸಾರ್ವಭೌಮತ್ವವನ್ನು ಈ ಜಾಗತೀಕರಣ ಜೋಗತೀಕರಣಕ್ಕೆ ಒಡ್ಡುವುದೇ ಆಗಿದೆ. ಈ ಫಲವಾಗಿಯೇ ಬಂಡವಾಳ ಶಾಹಿಗಳ ಜಾಹೀರಾತು ಪ್ರಚಾರದಲ್ಲಿ ಮಹಿಳೆಯರು ಅಂಗಾಂಗ ಪ್ರದರ್ಶನ ನಡೆಸಿ ಮಾರಾಟದ ವಸ್ತುವಾಗುತ್ತಿದ್ದಾರೆ.

ಉತ್ತರ ಕರ್ನಾಟಕದ ರೈತರ ಪರಿಸ್ಥಿತಿಯನ್ನು ಬಿಡಿಸಿಟ್ಟವರು ಖ್ಯಾತ ಸಾಹಿತಿ ದೇವನೂರು ಮಹಾದೇವ. ತಮ್ಮ ಕವಿತ್ವದ ಪರಿಭಾಷೆಯಲ್ಲಿಯೇ ಮಾತನಾಡಿದರು. ವಲಸೆ ಹಕ್ಕಿಗಳಿಗೆ ಮಾತ್ರ ಹೊಂದಿಕೊಳ್ಳುವ ಈ ಜಾಗತೀಕರಣದಿಂದ ಮನುಷ್ಯನಿಗೆ ಅಪಾಯವೇ ಹೆಚ್ಚು. ಶ್ರಮದ ಸಂಸ್ಕೃತಿಯಿಂದ ಮನುಷ್ಯನನ್ನು ದೂರವಾಗಿಸುವಲ್ಲಿ ಯತ್ನಿಸುವಲ್ಲಿ ಬಂಡವಾಳ ಶಾಹಿಗಳು ಹೂಡಿದ ತಂತ್ರ ಈ ಜಾಗತೀಕರಣವೆಂದರು.

ದಲಿತ ಮುಖಂಡ ಮಾವಳ್ಳಿ ಶಂಕರ್, ಶೋಷಿತ ವರ್ಗವನ್ನು ಇನ್ನಷ್ಟು ಶೋಷಣೆಗೆ ಒಳಪಡಿಸುವ ಈ ಜಾಗತೀಕರಣವನ್ನು ಎಲ್ಲಾ ನೊಂದವರ್ಗದವರು ಎದುರಿಸಲು ಸನ್ನದ್ಧರಾಗಬೇಕೆಂದರು.

ಸಮಾವೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಾಲ ಮನ್ನಾ ಮಾಡಲು ಸರ್ಕಾರವನ್ನು ಒತ್ತಾಯಿಸಲಾಯಿತು. ಜಾಗತೀಕರಣದ ವಿರುದ್ಧದ ಹೋರಾಟಕ್ಕೆ ದಲಿತ, ಕಾರ್ಮಿಕ ರೈತ ಸಂಘಟನೆಗಳಿಗೆ ಕರೆ ನೀಡಲಾಯಿತು.

ಹಾಸನ ಜಿಲ್ಲೆಯಿಂದ ಜಾಗತೀಕರಣದ ವಿರುದ್ಧದ ಸಮರ್ಥ ಧ್ವನಿಯೊಂದು ಈ ಸಮಾವೇಶದಲ್ಲಿ ಹೊರಟಿತು. ಜಿಲ್ಲೆಯ ರೈತರು, ಕಾರ್ಮಿಕರು, ವಿದ್ಯಾರ್ಥಿ ಯುವ ಜನರೆಲ್ಲರೂ ಪಾಲ್ಗೊಂಡಿದ್ದರು.

ಸಂವಾದಗೋಷ್ಠಿ: ಸಮಾವೇಶದ ನಂತರ ಡಾ|| ಚಟರ್ಜಿಯವರನ್ನೊಳಗೊಂಡಂತೆ ಇತರ ನಾಯಕರುಗಳೊಂದಿಗೆ ಸಂವಾದ ಗೋಷ್ಠಿಯೊಂದನ್ನು ನಡೆಸಲಾಯಿತು. ಈ ಸಂವಾದಗೋಷ್ಠಿಯನ್ನು ವಿದ್ಯಾರ್ಥಿ ಯುವಜನರು, ರೈತರು, ಕಾರ್ಮಿಕರೆಲ್ಲರೂ ತಮ್ಮತಮ್ಮ ಪ್ರಶ್ನೆಗಳನ್ನು ಜಿಲ್ಲೆ ಉತ್ತರ ಪಡೆದರು. ಈ ಸಂವಾದ ಗೋಷ್ಠಿ ಅಪಾಯಗ…ಯುವ ವರ್ಗಕ್ಕೆ ಜಾಗತೀಕರಣದ …ರಿವು ಮಾಡಿಕೊಡುವಲ್ಲಿ ಯಶಸ್ವಿಯಾಯಿತು.

ಹಾಸನಜಿಲ್ಲೆಯ ಡಿವೈಎಫ್ಐ ಮತ್ತು ಎಸ್ಎಫ್ಐ ಸಂಗಾತಿಗಳು ಜಿಲ್ಲಾದ್ಯಂತ ಪ್ರವಾಸ ಮಾಡಿದ ಜಾಗತೀಕರಮ ವಿರೋಧಿ ಜಾಥಾದಲ್ಲಿ ಪಾಲ್ಗೊಂಡರು.

ಹಾಸನದಲ್ಲಿ ನಡೆದ ಜಾಗತೀಕರಣ ವಿರೋಧಿ ಸಮಾವೇಶಕ್ಕೆ ಪೂರಕವಾಗಿ ಜನವರಿ ಒಂಭತ್ತನೇ ತಾರೀಖಿನಿಂದ ಹದಿಮೂರರವರೆಗಿನ ಒಟ್ಟು ಐದು ದಿನಗಳವರೆಗಿನ ಜಾಗತೀಕರಣ ವಿರೋಧಿ ಜಾಥಾ ಪ್ರವಾಸ ಮಾಡಿತು.

ಮೊದಲಿಗೆ ಕ್ರಾಂತಿಗೀತೆಗಳನ್ನು ಹಾಡುವುದರ ಮೂಲಕ ಜನತೆಯ ಗಮನ ಸೆಳೆದು ನಂತರ ಜಾಗತೀಕರಣದ ಅಪಾಯಗಳ ಅರಿವು ಮೂಡಿಸುವಲ್ಲಿ ಈ ಜಾಥಾ ಯಶಸ್ವಿ ಪ್ರಯತ್ನವೊಂದನ್ನು ನಡೆಸಿತು. ಈ ಜಾಥಾ ಹೋದೆಡೆಯಲ್ಲೆಲ್ಲಾ ಜನತೆಯಿಂದ ಜಾಗತೀಕರಣ ಕುರಿತಾದ ಪ್ರಶ್ನೆಗಳು ಕೇಳಿಬಂದವು. ಎಷ್ಟೋ ರೈತರಿಗೆ 'ಜಾಗತೀಕರಣ'ವೆಂಬ ಪದವೇ ಹೊಸದರಂತಿತ್ತು. ವಿವರಿಸುತ್ತಾ ಹೋದಂತೆ ಜನ ಕಣ್ಣರಳಿಸಿದರು.

ಡಿವೈಎಫ್ಐ ಸಂಗಾತಿಗಳಾದ ಧರ್ಮೇಶ್, ಚಂದ್ರಚೂಡ್, ಡಿ.ಟಿ.ಶಿವಣ್ಣ, ಹರೀಶ್, ವೆಂಕಟೇಶ್, ಎಸ್.ಎಫ್.ಐನ ಸಂಗಾತಿಗಳಾದ ನವೀನ್ ಕುಮಾರ್, ರಾಜು, ಸುಂದರಾ, ಸುರೇಶ್‌ರವರುಗಳು ಈ ಜಾಥಾದಲ್ಲಿ ಪಾಲ್ಗೊಂಡರು.

ಜನವರಿ 17 ರಂದು ನಡೆದ ಜಾಗತೀಕರಣ ವಿರೋಧಿ ಸಮಾವೇಶಕ್ಕೆ ಪೂರಕವಾಗಿ ಈ ಜಾಗತೀಕರಣ ವಿರೋಧಿ ಜಾಥಾ ಜಿಲ್ಲಾದ್ಯಂತ ಪ್ರವಾಸ ಮಾಡಿತು.

ಶುಲ್ಕ ಏರಿಕೆ, ಉದ್ಯೋಗ ಕಡಿತ ವಿರುದ್ಧ ವಿದ್ಯಾರ್ಥಿ ಯುವಜನರ ಪ್ರತಿಭಟನೆಯ ಮಹಾಪೂರ

ಪ್ರತಿರೋಧ ಒಡ್ಡಿದ ಜನವರಿ 19 ರ ಅಖಿಲ ಭಾರತ ಮುಷ್ಕರ

ಮಿತಿಯೇ ಇಲ್ಲದ ಶುಲ್ಕ ಏರಿಕೆಗಳು, ಶಿಕ್ಷಣದ ಖಾಸಗೀಕರಣ, ಸಾಲದೆಂದು ಶಿಕ್ಷಣದಲ್ಲಿ ಮೌಢ್ಯ-ಮತಾಂಧತೆ ತುಂಬುವ ಕೋಮುವಾದಿ ಆಟ, ಶಿಕ್ಷಣ ರಂಗದಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹೊಸಕಿ ಹಾಕುವ ಪ್ರಯತ್ನ, ಉದ್ಯೋಗ ಕಡಿತ ಇವುಗಳ ವಿರುದ್ಧ ದೇಶದ ವಿದ್ಯಾರ್ಥಿ-ಯುವಜನ ತೀವ್ರವಾದ ಪ್ರತಿರೋಧ ಒಡ್ಡಿದ್ದಾರೆ.

ನವೆಂಬರ್ 27 ರಂದು ದೆಹಲಿಯಲ್ಲಿ ವಿದ್ಯಾರ್ಥಿ-ಯುವಜನರ ಬೃಹತ್ ಪಾರ್ಲಿಮೆಂಟ್ ಚಲೋ ರ‍್ಯಾಲಿಯ ತೀರ್ಮಾನದಂತೆ ರಾಜ್ಯಾದ್ಯಂತ ಲಕ್ಷಾಂತರ ವಿದ್ಯಾರ್ಥಿ ಯುವಜನರು ಜನವರಿ 19 ರಂದು ಕೇಂದ್ರ-ರಾಜ್ಯ ಸರ್ಕಾರಗಳ ದೇಶ ಮಾರಿ ನೀತಿಗಳ ವಿರುದ್ಧ ಐತಿಹಾಸಿಕ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರೆಂಬ ವರದಿ ಬಂದಿದೆ. ರಾಜ್ಯದಲ್ಲಿಯೂ ವಿಶ್ವವಿದ್ಯಾಲಯ ಕೇಂದ್ರಗಳು, ಶಾಲಾ ಕಾಲೇಜುಗಳಲ್ಲಿ ಸಹಸ್ರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಮುಷ್ಕರ ಪಾಲ್ಗೊಂಡ ವರದಿ ಕೇಂದ್ರ-ರಾಜ್ಯ ಸರ್ಕಾರಿ ಕಛೇರಿಗಳ ಪಿಕೆಟಿಂಗ್ ವ್ಯಾಪಕ ರಸ್ತೆ ತಡೆ, ಮೆರವಣಿಗೆ, ಭೂತದಹನಗಳ ವರದಿಗಳು ಬರುತ್ತಿವೆ.

ಜ್ಞಾನ ಭಾರತಿ - ಜ್ಞಾನ ಗಂಗಾ ಬಂದ್

ಜಾಗತೀಕರಣ-ಉದಾರೀಕರಣ-ಖಾಸಗೀಕರಣಗಳ ವ್ಯಕ್ತವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ ಕೇಂದ್ರದಲ್ಲಿ ಜನವರಿ 19 ರಂದು ಎಲ್ಲಾ ವಿಭಾಗಗಳು ಸ್ತಬ್ಧವಾಗಿ ಬಂದ್ ಸಂಪೂರ್ಣವಾಗಿತ್ತು. ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. ನೂರಾರು ವಿದ್ಯಾರ್ಥಿಗಳು ಜ್ಞಾನಭಾರತಿಯಲ್ಲಿ ಮೆರವಣಿಗೆ ನಡೆಸಿ ಶಿಕ್ಷಣ ವ್ಯಾಪಾರೀಕರಣದ, ಕೋಮುವಾದೀಕರಣದ ಪ್ರತೀಕವಾದ ಕೇಂದ್ರ ಸರ್ಕಾರದ ಭೂತ ದಹನವನ್ನು ನಡೆಸಿದ್ದಾರೆ.

ಇದೇ ರೀತಿಯಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯ ಕೇಂದ್ರ ಜ್ಞಾನ ಗಂಗಾ ದಲ್ಲಿ ವಿಶ್ವವಿದ್ಯಾಲಯ ಕೇಂದ್ರ ಸಂಪೂರ್ಣ ಬಂದ್ ಆಗಿತ್ತು. ಹಾಗೆ ತುಮಕೂರು ಸ್ನಾತಕೋತ್ತರ ಕೇಂದ್ರ, ಕೋಲಾರ ಸ್ನಾತಕೋತ್ತರ ಕೇಂದ್ರ, ರಾಯಚೂರು ಸ್ನಾತಕೋತ್ತರ ಕೇಂದ್ರಗಳು ಸಂಪೂರ್ಣ ಬಂದ್ ಆಗಿತ್ತು. ಹಾಗೆ ತುಮಕೂರು ಸ್ನಾತಕೋತ್ತರ ಕೇಂದ್ರ, ಕೋಲಾರ ಸ್ನಾತಕೋತ್ತರ ಕೇಂದ್ರ, ರಾಯಚೂರು ಸ್ನಾತಕೋತ್ತರ ಕೇಂದ್ರಗಳು ಸಂಪೂರ್ಣ ಬಂದ್ ಆಗಿದ್ದವು.

ಬೆಂಗಳೂರು ನಗರದಲ್ಲಿ ನಗರ ಕೇಂದ್ರ, ಮೈಸೂರು ಬ್ಯಾಂಕ್ ವೃತ್ತದಲ್ಲಿ ನೂರಾರು ವಿದ್ಯಾರ್ಥಿ ವಿದ್ಯಾರ್ಥಿಗಳು ಪಾಲ್ಗೊಂಡ ಪ್ರತಿಭಟನೆಯಲ್ಲಿ ವಿಶ್ವವಿದ್ಯಾಲಯ ಕಾನೂನು ಕಾನೂನು ಕಾಲೇಜಿನಲ್ಲಿ ಸ್ನಾತಕೋತ್ತರ ತರಗತಿಗಳೂ ಸೇರಿದಂತೆ ಕಾಲೇಜು ಸಂಪೂರ್ಣ ಬಂದ್ ಆಗಿತ್ತು. ಸರ್ಕಾರಿ ವಿಜ್ಞಾನ ಕಾಲೇಜು, ವಿಜಯ ನಗರ ಕಾಲೇಜು, ಮುಂತಾದ ಕಾಲೇಜು ವಿದ್ಯಾರ್ಥಿಗಳು ತರಗತಿ ಬಹಿಷ್ಕಾರದಲ್ಲಿ ಪಾಲ್ಗೊಂಡಿದ್ದರು. ಆಚಾರ್ಯ ಪಾಠ ಶಾಲಾ ಸಂಜೆ ಕಾಲೇಜುಗಳಲ್ಲಿ ಸಂಜೆ ತರಗತಿಗಳನ್ನು ಬಹಿಷ್ಕರಿಸಿ, ಅಟಲ್ ಬಿಹಾರಿ ವಾಜಪೇಯಿ ಯವರ ಭೂತದಹನ ನಡೆಸಲಾಯಿತು. ನೂರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇನ್ನೊಂದೆಡೆ ಡಿವೈಎಫ್ಐ ನೇತೃತ್ವದಲ್ಲಿ ಉದ್ಯೋಗ ವಿನಿಮಯ ಕಛೇರಿ ಎದುರು ನೂರಾರು ಯುವಜನರು ಪ್ರದರ್ಶನ ನಡೆಸಿ ಪಿಕೆಟಿಂಗ್ ಮಾಡಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನಲ್ಲಿ ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ ಸುಮಾರು ಮುನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೆರವಣಿಗೆ ಹೊಸಕೋಟೆ ಪ್ರಮುಖ ರಸ್ತೆಗಳಲ್ಲಿ ನಡೆದಿದೆ. ಹೆದ್ದಾರಿಯ ಪ್ರಮುಖ ವೃತ್ತ(ಕೆ.ಇ.ಬಿ ಸರ್ಕಲ್)ನಲ್ಲಿ ಸುಮಾರು ಅರ್ಧ ಗಂಟೆಗಳ ಕಾಲ ರಸ್ತೆ ತಡೆ ನಡೆದಿದೆ. ಕನಕಪುರದಲ್ಲಿ ಎಲ್ಲಾ ಪ್ರಮುಖ ಶಿಕ್ಷಣ ಸಂಸ್ಥೆಗಳು ನಡೆಸಿದ್ದಾರೆ. ದೊಡ್ಡ ಬಳ್ಳಾಪುರದಲ್ಲಿ ಪೋಲೀಸರ ನಿರ್ಬಂಧ ವಿದ್ಯಾರ್ಥಿಗಳು ತರಗತಿ ಬಹಿಷ್ಕಾರ ನಡೆಸುವುದನ್ನು ತಡೆದಿದೆ. (ವಿದೇಶಿ ನಿಯೋಗವೊಂದು ಅಂದು ದೊಡ್ಡಬಳ್ಳಾಪುರದಲ್ಲಿ ಇತ್ತಂತೆ) ಸುಮಾರು 50 ವಿದ್ಯಾರ್ಥಿಗಳು ಶಿಕ್ಷಣ ವಿರೋಧಿ ನೀತಿಗಳ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ.

ಹಾಸನದಲ್ಲಿ ನಗರದಲ್ಲಿ ಬಹುತೇಕ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಜನ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದಾರೆ. ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಪ್ರಧಾನ ವಾಜಪೇಯಿಯವರ ಭೂತದಹನ ನಡೆಸಲಾಗಿದೆ. ಬೇಲೂರಿನ ಶಾಲಾ ಕಾಲೇಜುಗಳು ಬಹುತೇಕ ಬಂದ್ ಆಗಿದ್ದವು. ಸುಮಾರು 3,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಕೋಲಾರ, ಚಿಂತಾಮಣಿ, ಗೌರಿಬಿದನೂರು, ಬಾಗೇಪಲ್ಲಿ, ಗುಡಿಬಂಡೆ, ಮುಂತಾದೆಡೆಗಳಲ್ಲಿ ವಿದ್ಯಾರ್ಥಿ ಸಮುದಾಯದಿಂದ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಕೋಲಾರ ಜಿಲ್ಲಾ ಕೇಂದ್ರ ನೂರಾರು ವಿದ್ಯಾರ್ಥಿಗಳ ಮೆರವಣಿಗೆ ಭೂತದಹನ ನಡೆದಿದೆ.

ತುಮಕೂರು ಜಿಲ್ಲೆಯ ತುಮಕೂರು, ತುರುವೇಕೆರೆ, ಗುಬ್ಬಿ, ಸಿ.ಎಸ್.ಪುರ ಮುಂತಾದೆಡೆ

ಕಾಶ್ಮೀರ ಕದನ ವಿರಾಮ

ಸರ್ಕಾರದ ನಿಜ ಉದ್ದೇಶಗಳೇನು?

ಭಾರತದ ಗಣರಾಜ್ಯವು ತನ್ನ 50 ನೇ ವರ್ಷವನ್ನು ಪೂರೈಸುವ ವೇಳೆಗೆ ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರದಲ್ಲಿ ಕದನ ವಿರಾಮವನ್ನು ಎರಡನೇ ಬಾರಿಗೆ ಮತ್ತೊಂದು ತಿಂಗಳಿಗಾಗಿ ವಿಸ್ತರಿಸಿದೆ.

ಕಳೆದೆರಡು ತಿಂಗಳ ಅನುಭವವೇನೆಂದರೆ ಕದನ ವಿರಾಮದ ಸಂದರ್ಭದಲ್ಲೇ ಕೆಲವು ಕೆಲವು ಉಗ್ರಗಾಮಿಗ ಸಂಘಟನೆಗಳು ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಿ ಅಮಾಯಕ ಜನರ ಪ್ರಾಣ ಹಾನಿಗೆ ಕಾರಣವಾಗಿದೆ. ಇದರಿಂದ ಸ್ಪಷ್ಟವಾಗುವ ಅಂಶ ಕದನ ವಿರಾಮದ ಮುಂದುವರಿಕೆಯೊಂದೇ ರಾಜ್ಯದಲ್ಲಿ ಸಾಮಾನ್ಯ ಪರಿಸ್ಥಿತಿಯನ್ನು ಉಂಟುಮಾಡಲಾರದು.

ನಿರ್ಣಾಯಕ ಹಾಗೂ ಅಂತಿಮ ಪರಿಹಾರವನ್ನು ಒದಗಿಸುವ ಚಿಂತನೆಯಿಂದ ಕೂಡಿದ ಕಾರ್ಯಯೋಜನೆಯನ್ನು ಹೊರತುಪಡಿಸಿದ ಕೇವಲ ಕದನ ವಿರಾಮ ಮುಂದುವರಿಕೆ ಫಲಕಾರಿಯಾಗದು. ಈ ನಿಟ್ಟಿನಲ್ಲಿ ವಾಜಪೇಯಿ ಸರ್ಕಾರದ ನಿಲುವು ಅಂತಹ ನ್ಯೂನತೆಯಿಂದ ಕೂಡಿದೆ.

ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಸಿಮ್ಲಾ ಒಪ್ಪಂದ ಆಧಾರಿತ ಭಾರತ ಹಾಗೂ ಪಾಕಿಸ್ತಾನ ನಡುವಿನ ದ್ವಿಪಕ್ಷೀಯ ಮಾತುಕತೆ ಪರಿಹಾರ ಎಂಬುದನ್ನು ಭಾರತ ಸ್ಪಷ್ಟಪಡಿಸುತ್ತಾ ಬಂದಿದೆ. ಹಾಗಾಗಿ ಅಮಾಯಕ ಜನರ ಪ್ರಾಣ ರಕ್ಷಣೆಗಿರುವ ಮಾರ್ಗೋಪಾಯಗಳಲ್ಲಿ ಪಾಕಿಸ್ತಾನದೊಂದಿಗೆ ಉನ್ನತ ಹಂತದ ಮಾತುಕತೆಯನ್ನು ಹೊರತುಪಡಿಸಲಾಗದು.

ಈ ವಿಷಯದಲ್ಲಿ ಪ್ರಧಾನ ಮಂತ್ರಿಗಳು ತಮ್ಮ ಹಿಂದಿನ ನಿಲುವನ್ನು ಬದಲಾಯಿಸಿ ಪಾಕಿಸ್ತಾನದೊಂದಿಗೆ ಉನ್ನತ ಹಂತದ ಮಾತುಕತೆಗೆ ಸಿದ್ಧರಾಗಿದ್ದೇವೆ ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ ಸರ್ಕಾರದ ಇನ್ನೊಂದು ವಲಯದಿಂದ 'ಗಡಿಯಾಚೆಗಿನ ಭಯೋತ್ಪಾದನೆ ನಿಲ್ಲದ ಹೊರತು ಮಾತುಕತೆ ಸಾಧ್ಯವಿಲ್ಲವೆಂಬುದಾಗಿದೆ.

ಸಂವಿಧಾನದ ವಿಧಿ 370 ರ ಅನುಗುಣವಾಗಿ ಕಾಶ್ಮೀರಕ್ಕೆ ಕೊಡಮಾಡಬೇಕಿರುವ ಸ್ವಾಯತ್ತತೆಯ ಪ್ರಶ್ನೆ ಪರಿಹಾರವಾಗದೇ ಸಮಸ್ಯೆ ಪರಿಹಾರವಾಗಲಾರದು. ಈ ವಿಷಯದಲ್ಲಿ ಬಿಜೆಪಿ ಈಗಲೂ ಈ ವಿಧಿಯನ್ನು ರದ್ದು ಮಾಡಬೇಕೆಂದು ಒತ್ತಾಯಿಸುತ್ತಿದೆ. ಜಮ್ಮು ಕಾಶ್ಮೀರ ವಿಧಾನಸಭೆಯ ಸ್ವಾಯತ್ತತೆ ಕುರಿತು ನಿರ್ಣಯವನ್ನು ಕೇಂದ್ರ ಸಚಿವ ಸಂಪುಟ ಸಾರಾಸಗಟಾಗಿ ತಿರಸ್ಕರಿಸುವ ಬದಲು ಅತಿರೇಕದ ನಿಲುವುಗಳನ್ನು ಒಪ್ಪದೆ ಸಂವಿಧಾನದ ಚೌಕಟ್ಟಿನೊಳಗೇ ಒದಗಿಸಬಹುದಾದ ಸ್ವಾಯತ್ತತೆಯ ಗಾತ್ರ ಮತ್ತು ವಸ್ತು, ವಿಷಯ ಕುರಿತು ಮಾತುಕತೆಯ ಬಾಗಿಲನ್ನು ತೆಗೆದಿಡಬಹುದಾಗಿತ್ತು. ಬದಲಿಗೆ ವಾಜಪೇಯಿ ಸರಕಾರವು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವ ರೀತಿಯಲ್ಲಿ ಕಾಶ್ಮೀರ ವಿಧಾನಸಭೆಯ ನಿರ್ಣಯವನ್ನು ತಿರಸ್ಕರಿಸಿತು.

ಸಮಸ್ಯೆಯನ್ನು ಕೋಮುವಾದೀಕರಿಸುವ ನಿಟ್ಟಿನಲ್ಲಿ ಜಮ್ಮು-ಕಾಶ್ಮೀರವನ್ನು ಹಿಂದೂಗಳ ಜಮ್ಮು ಮುಸಲ್ಮಾನರ ಕಾಶ್ಮೀರ ಕಣಿವೆ ಹಾಗ ಬೌದ್ಧರ ಲದ್ದಾಖ್ ಆಗಿ ತ್ರಿಭಜಿಸುವ ಆರ್.ಎಸ್.ಎಸ್.ನ ಸೂತ್ರ ಹಾಗೂ ಪ್ರಚಾರ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದೆ.

ಮತ್ತೊಂದು ಅಪಾಯಕಾರಿ ಬೆಳವಣಿಗೆ ಎಂದರೆ 2001 ರ ಜನವರಿ 24 ರ ಹಿಂದೂ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಅಂಶ. ವಾಜಪೇಯಿ ಸರ್ಕಾರವು ವಾಶಿಂಗ್ಟನ್‌ನಲ್ಲಿನ ಹೊಸ ಆಡಳಿತಕ್ಕೆ ಕಾಲಾವಕಾಶ ಒದಗಿಸುವ ಹಿನ್ನಲೆಯಲ್ಲಿ ಕಾಶೀರದಲ್ಲಿನ ಕದನವಿರಾಮವನ್ನು ವಿಸ್ತರಿಸುತ್ತಿದೆ ಎಂಬುದು. ಇದು ಕಾಶ್ಮೀರ ಸಮಸ್ಯೆಯಲ್ಲಿ ಅಮೆರಿಕಾ ಮಧ್ಯ ಪ್ರವೇಶಿಸುವುದಕ್ಕೆ ಅನುವು ಮಾಡಿಕೊಡುತ್ತದೆ. ಭಾರತದಲ್ಲಿ ಮೂಡಿರುವ ಒಮ್ಮತಾಭಿಪ್ರಾಯದ ವಿರುದ್ಧವಾದ ಅಂಶ ಅಮೇರಿಕಾದ ಮಧ್ಯ ಪ್ರವೇಶಿಸಿಕೆ.

ಇಲ್ಲವಾಗಿರುವ ದೂರದೃಷ್ಟಿ

ವಾಜಪೇಯಿ ಸರ್ಕಾರಕ್ಕೆ ಇಲ್ಲವಾಗಿರುವ ದೂರದೃಷ್ಟಿ, ಆರ್.ಎಸ್.ಎಸ್. ನ ಬೇಡಿಕೆಯಾದ ಮೂರು ಭಾಗವಾಗಿ ವಿಭಜಿಸುವ ಸೂತ್ರ ಹಾಗೂ ಸ್ವತಂತ್ರ ಕಾಶ್ಮೀರ ಕುರಿತ ಅಮೇರಿಕಾದ ನಿಲುವು ರಾಷ್ಟ್ರದ ಐಕ್ಯತೆ ಹಾಗೂ ಸಮಗ್ರತೆಗೆ ಗಂಡಾಂತರ ಕಾದಿದೆ.

ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಸಮಸ್ಯೆಗೆ ಪರಿಹಾರ ಒದಗಿಸಲು ವಾಜಪೇಯಿ ಸರ್ಕಾರಕ್ಕೆ ಇರುವ ಕಾರ್ಯಯೋಜನೆಯನ್ನು ಅದು ಸ್ಪಷ್ಟಪಡಿಸಬೇಕು. ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ವಿಧಿ 370 ರ ಅನ್ವಯ ಜಮ್ಮು ಮತ್ತು ಕಾಶ್ಮೀರ ಜನತೆಗೆ ಗರಿಷ್ಠ ಸ್ವಾಯತ್ತತೆಯನ್ನು ಒದಗಿಸಿ, ಯಾವುದೇ ಪರಿಹಾರವು ಪಾಕಿಸ್ತಾನದೊಂದಿಗಿನ ದ್ವಿಪಕ್ಷೀಯ ಮಾತುಕತೆ ಹಾಗೂ ಮೂರನೇ ವ್ಯಕ್ತಿಯ ಮಧ್ಯ ಪ್ರವೇಶವಿಲ್ಲದ ಮುಖ್ಯ ವಾಸ್ತವಾಂಶಗಳ ಆಧಾರದಲ್ಲಿ ಪರಿಹಾರ ರೂಪಿತವಾಗಾಬೇಕು.

ಬೆಂಗಳೂರು ವಿಶ್ವವಿದ್ಯಾಲಯ ತುಮಕೂರು ಪಿ.ಬಿ.ಕೇಂದ್ರ ಬಂದ್ ಆಗಿದೆ. ತುರುವೇಕೆರೆಯಲ್ಲಿ ಆರು ಸಾವಿರಕ್ಕೂ ಹೆಚ್ಚು ಜನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

ಚಿಕ್ಕ ಮಗಳೂರಿನಲ್ಲಿ 10,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. 600 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೆರವಣಿಗೆ ನಡೆಸಿ ಭೂತದಹನ ನಡೆಸಲಾಗಿದೆ. ರಾಯಚೂರು ಜಿಲ್ಲೆಯ ರಾಯಚೂರು, ಮಾನ್ವಿ ಮುಂತಾದೆಡೆ ವ್ಯಾಪಕ ಪ್ರತಿಭಟನೆಗಳು ನಡೆದಿವೆ. ಗದಗ್ ಜಿಲ್ಲೆಯ ಮುಂಡರಗಿ ಪ್ರತಿಭಟನೆ ನಡೆದಿದೆ. ಕೊಡಗಿನ ಬಾಗಮಂಡಲದ ಸುಮಾರು 80 ವಿದ್ಯಾರ್ಥಿಗಳು ಪಾಲ್ಗೊಂಡು ಪ್ರತಿಭಟನೆ, ತರಗತಿ ಬಹಿಷ್ಕಾರ ನಡೆದಿದೆ. ಸೋಮವಾರ ಪೇಟೆ, ಸೋಮವಾರ ಸಂತೆಯಲ್ಲಿಯು ಸಹ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹೂವಿನ ಹಡಗಲಿ, ಕೂಡ್ಲಗಿ ಮುಂತಾದೆಡೆ ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಯುವಜನರ ಜೊತೆ ಸೇರಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಮಂಡ್ಯ ಜಿಲ್ಲೆಯ ಮಂಡ್ಯದಲ್ಲಿ ವ್ಯಾಪಕ ತರಗತಿ ಬಹಿಷ್ಕಾರ, ತಾಲೂಕಿನಲ್ಲಿ ತರಗತಿ ಬಹಿಷ್ಕಾರ ಸುಮಾರು ಒಂದೂವರೆ ಗಂಟೆಗಳ ಕಾಲ ರಸ್ತೆ ತಡೆ ನಡೆದಿದೆ. ಕೆ.ಎಂ.ದೊಡ್ಡಿಯಲ್ಲಿ ಒಂದೂವರೆ ಗಂಟೆಗಳ ಕಾಲ ರಸ್ತೆ ತಡೆ, ಮದ್ದೂರಿನಲ್ಲಿ ತರಗತಿ ಬಹಿಷ್ಕಾರ ನಡೆದಿದೆ. ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳ ಬೃಹತ್ ಪ್ರತಿಭಟನೆ ನಡೆದಿದೆ. ಕೆ.ಆರ್.ನಗರದಲ್ಲಿ ತರಗತಿ ಬಹಿಷ್ಕಾರ ನಡೆದಿದೆ. ಹುಣಸೂರಿನಲ್ಲಿ ಪ್ರತಿಭಟನೆ ನಡೆದಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಕಾರವಾರ, ಮುಂಡಗೋಡು, ಹೊನ್ನಾವರ, ಸಿದ್ದಾಪುರ, ಅಂಕೋಲಾ, ಕುಮಟಾ ಮುಂತಾದೆಡೆ ವ್ಯಾಪಕ ವಿದ್ಯಾರ್ಥಿಗಳು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ.

ಮಂಗಳೂರು ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಲ್ಲಿಯೂ ವ್ಯಾಪಕವಾಗಿ ವಿದ್ಯಾರ್ಥಿಗಳು ತರಗತಿ ಬಹಿಷ್ಕಾರದಲ್ಲಿ ಪಾಲ್ಗೊಂಡಿದ್ದಾರೆ. ವಿವಿಧ ನಗರಗಳಲ್ಲಿ ವಿದ್ಯಾರ್ಥಿ ಯುವಜನರ ಸಭೆಗಳು ನಡೆದಿವೆ. ದಾವಣಗೆರೆಯಲ್ಲಿ ಬಹುತೇಕ ಶಾಲಾ ಕಾಲೇಜುಗಳು ಬಂದ್ ಆಗಿದ್ದವು. ಹರಪನಹಳ್ಳಿಯಲ್ಲಿಯೂ ವಿದ್ಯಾರ್ಥಿಗಳು ಬಂದ್ ಆಚರಿಸಿ ಪ್ರತಿಭಟನೆ ನಡೆಸಿದ್ದಾರೆ. ಕೊಪ್ಪಳ ಜಿಲ್ಲೆಯ ಗಂಗಾವತಿ ಮುಂತಾದೆಡೆ ಯಶಸ್ವಿ ಹೋರಾಟಗಳು ನಡೆದಿವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಗುಲ್ಬರ್ಗ, ಶಹಾಪುರ, ಸುರಪುರ ಮುಂತಾದೆಡೆ ವಿದ್ಯಾರ್ಥಿಗಳು

ಜನರ ಪ್ರತಿರೋಧ ಆಳಗೊಳ್ಳಲಿ ಸರ್ಕಾರವನ್ನು ಸೋಲಿಸಲಿ

ದೇಶಾದ್ಯಂತ ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ಮತ್ತಿತರ ಜನವಿಭಾಗಗಳು ಹೋರಾಟದ ಕಣಕ್ಕೆ ಧುಮುಕುತ್ತಿವೆ. ಈ ಪ್ರತಿರೋಧವನ್ನು ಆಳಗೊಳಿಸಬೇಕು ಎಂದು ಇತ್ತೀಚಿಗೆ ಭುವನೇಶ್ವರದಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಪ್ರಸಕ್ತ ರಾಜಕೀಯ ಸನ್ನಿವೇಶದ ವಿಶ್ಲೇಷಣೆ.

ಭುವನೇಶ್ವರದಲ್ಲಿ ನಡೆದ ಸಿಪಿಐ(ಎಂ) ಸಭೆ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಸನ್ನಿವೇಶವನ್ನು ವಿಮರ್ಶಿಸುವಾಗ ಅದನ್ನು ಬಹಳಷ್ಟು ಬಾಧಿಸಿದ ಸಂಗತಿಯೆಂದರೆ ನವದೆಹಲಿಯಲ್ಲಿರುವ ಎನ್‌ಡಿಎ ಸರ್ಕಾರ ದೇಶವನ್ನು ಎಂತಹ ಕೆಸರಲ್ಲಿ ಸಿಲುಕಿಸುತ್ತಿದೆ ಎಂಬುದು ಹಾಗೂ ದೇಶವನ್ನು, ಜನತೆಯನ್ನು ಮುಂಬರುವ ವಿನಾಶದಿಂದ ರಕ್ಷಿಸಲು ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂದು.

ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೇರಿದ ನಂತರ ರಾಷ್ಟ್ರೀಯ ಐಕ್ಯತೆ ಮತ್ತು ಕೋಮುಸೌಹಾರ್ದಕ್ಕೆ ಬಂದಿರುವ ಸಂಚಕಾರದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಕೇಂದ್ರ ಸಮಿತಿ ಬಿಜೆಪಿ ಕೇವಲ ಇನ್ನೊಂದು ಬೂರ್ಜ್ವಾ-ಭೂಮಾಲಕ ಪಕ್ಷವೆಂದು ತಳ್ಳಿ ಹಾಕುವಂತಿಲ್ಲ, ಅದರ ಹಿಂದೆ ಆರ್.ಎಸ್.ಎಸ್. ಇದೆ, ಈ ಆರ್.ಎಸ್.ಎಸ್. ತಾಲಿಬಾನ್ ಮಾದರಿ ಮತೀಯ ಪ್ರಭುತ್ವವನ್ನು ಹೇರಬಯಸುವಂತದ್ದು.

ಡಿಸೆಂಬರ್‌ನಲ್ಲಿ ಪ್ರಧಾನ ಮಂತ್ರಿಗಳೇ ಮುಂದೆ ಬಂದು ಬಾಬ್ರಿ ಮಸೀದಿ ಧ್ವಂಸದ ಕೇಸಿನಲ್ಲಿ ಆಪಾದಿತರಾದ ಮೂವರು ಸಹಯೋಗಿಗಳನ್ನು ಸಮರ್ಥಿಸಿಕೊಂಡಾಗ ಆರ್.ಎಸ್.ಎಸ್. ಆಟ ಸ್ಪಷ್ಟವಾಯಿತು. ಯಾರು ಏನೇ ಹೇಳಲಿ ಬಿಜೆಪಿಯು ಆರ್.ಎಸ್.ಎಸ್.ನ ಬಾಲಂಗೋಚಿಯಷ್ಟೇ ಎಂಬುದು ಸ್ಪಷ್ಟವಾಯಿತು.

ಆಧರೆ ಬಾಬ್ರಿ ಮಸೀದಿ ಇದ್ದಲ್ಲಿ ದೇವಸ್ಥಾನ ಕಟ್ಟುವುದು ಅಪೂರ್ಣವಾಗುಳಿದಿರುವ ಕೆಲಸ, ಅದು 'ರಾಷ್ಟ್ರೀಯ ಭಾವನೆಯ ಅಭಿವ್ಯಕ್ತಿ' ಎಂಬ ಅವರ ಸಿದ್ಧಾಂತದ ವಿರುದ್ಧ ವ್ಯಕ್ತಗೊಂಡ ರಾಷ್ಟ್ರೀಯ ಭಾವನೆ ಈ ವಿಷಯದಲ್ಲಿ ವಿರೋಧ ಪಕ್ಷಗಳ ದೃಢ ನಿಲುವಿಗೆ ಜನತೆಯ ಬೆಂಬಲವಿದೆಯೆಂಬುದನ್ನು ಸೂಚಿಸಿತು. ಅವರ ಕುಮರಕೋಂ 'ಚಿಂತನೆ'ಗಳಿಗೆ ಖಂಡಿತ ಇದೂ ಒಂದು ಮುಖ್ಯ ಕಾರಣವಾಗಿದೆ. ಶ್ರೀ ವಾಜಪೇಯಿ ಮತ್ತೊಮ್ಮೆ ದೇಶದ ಕಣ್ಣಿಗೆ ಮಣ್ಣೆರಚಲು ಪ್ರಯತ್ನಿಸಿದರು. ಆದರೆ ಸಫಲರಾಗಲಿಲ್ಲ. ಇದರಲ್ಲಿ ಆಶ್ಚರ್ಯವೇನಿಲ್ಲ.

ನಿಜ, ಎನ್‌ಡಿಎ ಭಾಗೀದಾರರಲ್ಲಿ, ಬೆಂಬಲಿಗರಲ್ಲಿ ಕೆಲವರು ಪ್ರಧಾನಮಂತ್ರಿಗಳ ಹೇಳಿಕೆಗಳ ಬಗ್ಗೆ ಅಸಂತೋಷ ವ್ಯಕ್ತಪಡಿಸಿದರು. ಆದರೆ ಬಿಜೆಪಿಯ ಅಥವಾ ಆರ್.ಎಸ್.ಎಸ್.ನ ನಿಲುವನ್ನು ದೃಢವಾಗಿ ವಿರೋಧಿಸಲಿಲ್ಲ. ಅಧಿಕಾರದಾಹವೋ ಅಥವಾ ಬೇರೆ ಯಾವುದಾದರೂ ಕಾರಣವೋ ಗೊತ್ತಿಲ್ಲ. ಸ್ವಲ್ಪ ಗೊಣಗಿಕೊಂಡರೆ ತಮ್ಮ ಕರ್ತವ್ಯ ಪೂರೈಸಿತು ಎಂದು ಅವರು ತಿಳಿಕೊಂಡಂತಿದೆ. ಇದು ಸಂಘ ಪರಿವಾರಕ್ಕೆ ಅತ್ಯಂತ ಅನುಕೂಲಕರ ಸನ್ನಿವೇಶ. ತಮ್ಮ ಮಿತ್ರರನ್ನು ಲೆಕ್ಕಕ್ಕೆ ತಗೊಳ್ಳಬೇಕಾಗಿಲ್ಲ ಎಂದು ಅವರಿಗೆ ಗೊತ್ತಿದೆ.

ಆದರೆ ಜನಕೋಟಿಯನ್ನು ಅವರು ಹೀಗ್ಗೆ ಲೆಕ್ಕಕ್ಕೆ ತಗೊಳ್ಳದಿರಲು ಸಾಧ್ಯವಿಲ್ಲ. ಅಲ್ಪಸಂಖ್ಯಾತರಷ್ಟೇ ಅಲ್ಲ, ಬಹುಸಂಖ್ಯಾತರಲ್ಲೂ ದೊಡ್ಡ ವಿಭಾಗ ದೇಶದ ಸಮ್ಮಿಶ್ರ ಸಂಸ್ಕೃತಿಯ ರಕ್ಷಣೆಗೆ ಕಟಿಬದ್ಧರಾಗಿದ್ದಾರೆ. ಉತ್ತರ ಪ್ರದೇಶ, ಗುಜರಾತ್, ರಾಜಸ್ತಾನಗಳ ಸ್ಥಳೀಯ ಚುನಾವಣೆಗಳಲ್ಲಿ ಬಿಜೆಪಿ ನಿರೀಕ್ಷೆ ಮಣ್ಣುಪಾಲದ್ದು, ಉತ್ತರ ಪ್ರದೇಶದಲ್ಲಿ ಮುಂದಿನ ವಿಧಾನಸಭಾ ಚುನಾವಣೆಗಳ ಬಗ್ಗೆ ಬಿಜೆಪಿ ಮುಖಂಡರು ಭಯಭೀತರಾಗಿರುವುದು ನಮ್ಮ ಜನಸಾಮಾನ್ಯರು ಮೂಲತಃ ಧರ್ಮನಿರಪೇಕ್ಷರು ಎಂದು ಎತ್ತಿ ತೋರಿಸಿದೆ.

ಸಾಮ್ರಾಜ್ಯಶಾಹಿ-ಪರ ಸರಕಾರ ಕೂಡಾ

ಬಿಜೆಪಿ ಸರಕಾರ ಆರ್.ಎಸ್.ಎಸ್. ಗುರಿಸಾಧನೆಯನ್ನಷ್ಟೇ ಮಾಡುತ್ತಿಲ್ಲ, ಸಾಮ್ರಾಜ್ಯಶಾಹಿ ಶಕ್ತಿಗಳಿಗೂ ನೆರವಾಗುತ್ತಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ತೀವ್ರ ಹೋರಾಟಗಳ ಮೂಲಕ ಸ್ವಾತಂತ್ರ್ಯ ಪಡೆದ ನಂತರ ದೇಶದ ಹಿಂದೆಂದೂ ಇಷ್ಟು ನಗ್ನವಾಗಿ ಸಾಮ್ರಾಜ್ಯಶಾಹಿ-ಪರವಾದ ಸರಕಾರವನ್ನು ಕಂಡಿರಲಿಲ್ಲ. ನಿಜ ಸಂಗತಿಯೆಂದರೆ ಆರ್ಥಿಕ ರಂಗದಲ್ಲಿ ಸರ್ಕಾರ ಕೈಗೊಳ್ಳುತ್ತಿರುವ ಪ್ರತಿಯೊಂದು ಕ್ರಮವೂ ಭಾರತದ ಜನಗಳ ಹಿತರಕ್ಷಣೆಗಾಗಿ ಅಲ್ಲ, ಬಹುರಾಷ್ಟ್ರೀಯ ಕಂಪನಿಗಳ ಮತ್ತು ಅವರ ಸಾಮ್ರಾಜ್ಯಶಾಹಿ ಬೆಂಬಲಿಗರ ಹಿತರಕ್ಷಣೆಗಾಗಿ ಮಾತ್ರ. ಹಿಂದೆ ಸಾಮ್ರಾಜ್ಯಶಾಹಿಗಳ ಬ್ಲಾಕ್‌ಮೇಲನ್ನು ಎದುರಿಸಲು ನಿರ್ಮಿಸಿದ ಸಾರ್ವಜನಿಕ ವಲಯವನ್ನು ಬಿಜೆಪಿ ನೇತೃತ್ವದ ಸರಕಾರ ಒಂದೊಂದಾಗಿ ಕಳಚಿ ಹಾಕಿ ನಮ್ಮ ಸ್ವಾವಲಂಬನೆಯ ಆಧಾರವನ್ನೇ ನಾಶ ಮಾಡುತ್ತಿದೆ. ಈ ಮೂಲಕ ವಿದೇಶಿ ಮತ್ತು ದೇಶೀ ಗುತ್ತೇದಾರಿ ಬಂಡವಾಳಕ್ಕೆ ನಮ್ಮ ಆರ್ಥಿಕತ ಮೇಲೆ ಕಪಿಮುಷ್ಟಿ ಹೊಂದಲು ಅವಕಾಶ ನೀಡುತ್ತಿದೆ.

ಇದು ಜನಸಾಮಾನ್ಯರ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಉದಾಹರಣೆಗೆ ಮಹಾರಾಷ್ಟ್ರ ವಿದ್ಯುತ್ ಮಂಡಳಿ ಯೂನಿಟ್ಟಿಗೆ 2.50 ರೂ.ನಂತೆ ವಿದ್ಯುತ್ ನೀಡುತ್ತಿತ್ತು. ಆದರೆ ಅಮೆರಿಕನ್ ಬಹುರಾಷ್ಟ್ರೀಯ ಕಂಪನಿ ಎನ್ರೋನ್ ಈಗ ರೂ. 7.80 ರೂ ವಸೂಲಿ ಮಾಡುತ್ತಿದೆ. ಆದರೂ ಕೂಡಾ ವಿಶ್ವಬ್ಯಾಂಕ್‌ನ ಆದೇಶದಂತೆ ಹರ್‍ಯಾಣ, ಒರಿಸ್ಸಾ, ಆಂಧ್ರ ಪ್ರದೇಶ, ರಾಜಸ್ತಾನ ಮತ್ತಿತರ ಕೆಲವು ರಾಜ್ಯಗಳಲ್ಲಿ ವಿದ್ಯುತ್ ಉತ್ಪಾದನೆಯನ್ನು ಖಾಸಗೀಕರಿಸಲಾಗುತ್ತಿದೆ.

ಬಿಜೆಪಿ ಸರಕಾರದ ಇಂತಹ ನೀತಿಗಳ ಬೇರೆ ಕೆಲವು ದುಷ್ಪರಿಣಾಮಗಳೆಂದರೆ ನಿರುದ್ಯೋಗ ಹೆಚ್ಚಳ, ಸಾಮಾಜಿಕ ಕಾಳಜಿಗಳ ನಿರ್ಲಕ್ಷ್ಯ, ಹಿಂದುಳಿದ ಪ್ರದೇಶಗಳ ಮತ್ತು ಜನಗಳ ನಿರ್ಲಕ್ಷ್ಯ.

ರೈತಾಪಿ ಜನಗಳ ಸಂಕಟ

ಅದೇ ವೇಳೆಗೆ ಈ ಸರಕಾರ ಗ್ರಾಮೀಣ ಜನಸಮೂಹಗಳ ಮೇಲೆ ವರ್ಣಿಸಲಾಗದ ಕಷ್ಟಕೋಟಲೆಗಳನ್ನು ಹೇರುತ್ತಿದೆ. ಅವರು ಬಳಸುವ ಬೀಜ, ಗೊಬ್ಬರ, ವಿದ್ಯುತ್, ನೀರಾವರಿ ಇತ್ಯಾದಿಗಳ ಖರ್ಚು ಏರುತ್ತಿದೆ, ಅವರ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಸಿಗುವ ಬೆಲೆ ಕಮ್ಮಿಯಾಗುತ್ತಿದೆ. ಧಾನ್ಯಗಳು, ಆಲೂಗಡ್ಡೆ, ಹಾಲಿನ ಪುಡಿ, ತೆಂಗು, ರಬ್ಬರು ಇತ್ಯಾದಿಗಳ ಬೆಲೆ ಭಾರತೀಯ ಮಾರುಕಟ್ಟೆಯಲ್ಲಿ ತೀವ್ರವಾಗಿ ಇಳಿದಿರುವುದು ಉತ್ಪಾದನೆ ಹೆಚ್ಚಾದ್ದರಿಂದ ಅಲ್ಲ ಬದಲಾಗಿ, ಈ ಸರಕುಗಳನ್ನು ಲಂಗುಲಗಾಮಿಲ್ಲದೆ ಆಮದು ಮಾಡಿ ರಾಶಿ ಹಾಕಿದ್ದರಿಂದಾಗಿ ಈ ಸಮಸ್ಯೆ ಬಂದಿದೆ.

ಕೈಗಾರಿಕಾ ವಲಯದಲ್ಲಿದ್ದಂತೆ ಇಲ್ಲೂ ಬಿಜೆಪಿ ನೇತೃತ್ವದ ಸರ್ಕಾರ ಸಾಮ್ರಾಜ್ಯಶಾಹಿ-ಪರ ಪಕ್ಷಪಾತ ಎದ್ದು ಕಾಣುತ್ತಿದೆ. ವಿಶ್ವ ವ್ಯಾಪಾರ ಸಂಸ್ಥೆಯ ಒಪ್ಪಂದದಲ್ಲಿ ವಿಧಿಸಿದ ಸಮಯದ ಮಿತಿಯ ಮೊದಲೇ ಈ ಸರಕಾರ ಕೃಷಿ ಸರಕುಗಳ ಆಮದನ್ನು ಉದಾರಗೊಳಿಸಿದೆ. ಈ ಏಪ್ರಿಲ್ ನಂತರ ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ.

ಇಂತಹ ಪರಿಸ್ಥಿತಿ ಸ್ವಾತಂತ್ರ್ಯದ ನಂತರ ರೈತಾಪಿ ಜನಗಳಿಗೆ ಹಿಂದೆಂದೂ ಬಂದಿರಲಿಲ್ಲ. ಕೃಷಿಗಿಂತ ಕೈಗಾರಿಕೆಯ ಕೈ ಮೇಲಾಗಿದ್ದರೂ ರೈತರು ಅಲ್ಪಸ್ವಲ್ಪವಾದರೂ ಉಳಿತಾಯ ಮಾಡುತ್ತಿದ್ದರು. ಈಗ ಅದೂ ಇಲ್ಲದಂತೆ ಮಾಡಲಾಗುತ್ತಿದೆ. ಕೃಷಿಯೀಗ ನಷ್ಟದ ಬಾಬತ್ತಾಗುತ್ತಿದೆ. ಇದರಿಂದ ದೇಶದ ಆಹಾರ ಭದ್ರತೆಗೂ ಸಂಚಕಾರ ಬಂದಿದೆ. ನಮ್ಮ ಆಹಾರಕ್ಕೆ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಅವಲಂಬಿಸುವಂತೆ ಮಾಡುವ ಪಿತೂರಿ ಇಲ್ಲಿ ಕಾಣುತ್ತಿದೆ. ಈ ಹಿಂದೆ ಪಿಎಲ್-480 ರ ರೂಪದ ಸಾಮ್ರಾಜ್ಯಶಾಹಿ ಬ್ಲಾಕ್ ಮೇಲಿನಿಂದ ಭಾರತದ ರೈತರು ದೇಶವನ್ನು ಉಳಿಸಿದ್ದರು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬೇಕು. ಕೃಷಿ ಕಾರ್ಮಿಕರಿಗೆ ದೊರೆಯುವ ಕೆಲಸದಲ್ಲೂ ಬಹಳ ಕಡಿತವಾಗಿದೆ. ನಮ್ಮ ಸಮಾಜದ ಅತ್ಯಂತ ಕೆಳಸ್ತರದಲ್ಲಿರುವ ಈ ವಿಭಾಗ

ತತ್ತರಿಸುತ್ತಿರುವ ಸಣ್ಣ ಕೈಗಾರಿಕೆಗಳು

ಜಾಗತೀಕರಣದ ಹಿನ್ನೆಲೆಯಲ್ಲಿ ಸಣ್ಣ ಕೈಗಾರಿಕೆಗಳ ಮುಂದಿನ ಸವಾಲುಗಳು ಹಾಗೂ ಪರ್ಯಾಯ ನೀತಿಗಳ ಅನ್ವೇಷಣೆ ಕುರಿತ ಕಾರ್ಯಾಗಾರವೊಂದು ಅಕ್ಟೋಬರ್ 14, 2000 ದಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ ನಡೆದಿದೆ. ಕರ್ನಾಟಕ ಕೈಗಾರಿಕಾ ವಾಣಿಜ್ಯ ಸಂಸ್ಥೆ, ಹುಬ್ಬಳ್ಳಿ , ಉತ್ತರ ಕರ್ನಾಟಕದ ಸಣ್ಣ ಕೈಗಾರಿಕೆಗಳ ಸಂಘ ಹುಬ್ಬಳ್ಳಿ ಹಾಗೂ ಧಾರವಾಡ ಜಿಲ್ಲಾ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಸಂಘಟಿಸಿದ್ದ ಈ ಕಾರ್ಯಾಗಾರದಲ್ಲಿ 167 ಲಕ್ಷ ಜನರಿಗೆ ಉದ್ಯೋಗ ಒದಗಿಸುವ, ನಾಲ್ಕು ಲಕ್ಷ ಅರವತ್ತೈದು ಸಾವಿರ ವಾರ್ಷಿಕ ಉತ್ಪಾದನೆಯನ್ನು ಮಾಡುವ ಹಾಗೂ ಸರ್ಕಾರಕ್ಕೆ 51150 ಕೋಟಿ ರೂಪಾಯಿಗಳ ಆದಾಯ ಒದಗಿಸುವ ದೇಶಾದ್ಯಂತ ವ್ಯಾಪಿಸಿರುವ 31 ಲಕ್ಷ ಸಣ್ಣ ಕೈಗಾರಿಕಾ ಘಟಕಗಳ ರಕ್ಷಣೆಗೆ ಕಾರ್ಯಾಗಾರವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಿದೆ.

ರಾಷ್ಟ್ರದ ಆರ್ಥಿಕತೆಯಲ್ಲಿ ಸಣ್ಣ ಕೈಗಾರಿಕೆಗಳ ಪಾತ್ರ: ಸಣ್ಣ ಕೈಗಾರಿಕಾ ವಲಯುವು ಸಾಂಪ್ರದಾಯಿಕವಾಗಿ, ಅದರ ಗಾತ್ರ, ಉತ್ಪಾದನೆ, ಉದ್ಯೋಗ ಹಾಗೂ ರಫ್ತಿನಲ್ಲಿ ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಇತ್ತೀಚಿನ ಅಂದಾಜಿನ ಪ್ರಕಾರ 31 ಲಕ್ಷ ಸಣ್ಣ ಕೈಗಾರಿಕಾ ಘಟಕಗಳು ದೇಶದಾದ್ಯಂತ 167 ಲಕ್ಷ ಜನರಿಗೆ ಉದ್ಯೋಗ ಒದಗಿಸಿವೆ. ಹಾಗೆಯೇ 4,65,000 ಕೋಟಿ ರೂ ವಾರ್ಷಿಕ ಉತ್ಪಾದನೆಯಿದೆ. ಸರ್ಕಾರಕ್ಕೆ 51,150 ಕೋಟಿ ರೂಗಳಷ್ಟು ಆದಾಯವು ಸಣ್ಣ ಕೈಗಾರಿಕಾ ವಲಯುದಿಂದ ಬಂದಿದೆ. ಇದು ಒಟ್ಟು ಉತ್ಪಾದನೆಯಲ್ಲಿ ಶೇ 11 ರಷ್ಟು ಹಾಗೂ 44.000 ಕೋಟಿಗಳು ರಫ್ತಿನಿಂದ ಬಂದ ಆದಾಯವಾಗಿದೆ. ಸಣ್ಣ ಕೈಗಾರಿಕಾ ವಲಯವು ಶೇ 44 ರಷ್ಟು ಕೈಗಾರಿಕಾ ಉತ್ಪಾದನೆಯಲ್ಲೂ ಹಾಗೂ ಶೇ 35 ರಷ್ಟು ಭಾರತದ ರಫ್ತಿಗೆ ಕೊಡುಗೆ ನೀಡಿದೆ. ಈ ವಲಯದಲ್ಲಿ ಪ್ರತಿಕೋಟಿ ರೂಪಾಯಿ ಬಂಡವಾಳ ಹೂಡಿಕೆಯಿಂದ 523 ಜನರಿಗೆ ಉದ್ಯೋಗ ಒದಗಿಸಬಹುದಾದ ಅವಕಾಶಗಳಿವೆ. ಈ ವಲಯಕ್ಕೆ ಬ್ಯಾಂಕ್‌ಗಳಿಂದ ಹರಿದು ಬರುತ್ತಿರುವ ಸಾಲದ ಪ್ರಮಾಣ ಕೇವಲ ಶೇ. 17.5 ರಷ್ಟು ಮಾತ್ರ. ಈ ವಲಯದ ಉದ್ಯಮಿಗಳು ಸ್ವಯಂ ಹಣಕಾಸು ನೀತಿಗಳಿಂದ ಪರಿಗಣಿಸಬಹುದಾದಂತ ಒತ್ತಡಗಳಿಗೆ ಒಳಗಾಗಿದ್ದಾರೆ. ಭಾರೀ ಕೈಗಾರಿಕೆಗಳ ವಲಯವು ಶೇ 55 ರಷ್ಟು ಒಟ್ಟು ಉತ್ಪಾದನೆಯಲ್ಲಿ ಹಾಗೂ ಶೇ 65 ರಷ್ಟು ದೇಶದ ರಫ್ತಿಗೆ ಕೊಡುಗೆ ನೀಡಿದೆ. ಈ ವಲಯವು ಬ್ಯಾಂಕುಗಳಿಂದ ಸುಮಾರು ಶೇ 85 ರಷ್ಟು ಸಾಲ ತೆಗೆದುಕೊಳ್ಳುವಲ್ಲಿ ಸಫಲರಾಗಿದ್ದಾರೆ. ಎನ್‌ಪಿಎಯಲ್ಲೂ ಸಹ ಇದರ ಪಾಲು ದೊಡ್ಡದು. ಇಲ್ಲಿ ಪ್ರತಿಕೋಟಿರೂಪಾಯಿ ಬಂಡವಾಳ ಹೂಡಿಕೆಯಿಂದ ಕೇವಲ 100 ರಿಂದ 150 ಜನರಿಗೆ ಮಾತ್ರ ಉದ್ಯೋಗ ಒದಗಿಸಲು ಸಾಧ್ಯವಾಗಿದೆ. ಈ ಎರಡು ವಲಯದಲ್ಲಿ ಹೂಡಿಕೆಯಾಗುವ ಬಂಡವಾಳದ ಪ್ರಮಾಣಕ್ಕೆ ಹೋಲಿಕೆ ಮಾಡಿದರೆ ಉದ್ಯೋಗದ ದೃಷ್ಟಿಯಿಂದ ಸಣ್ಣ ಕೈಗಾರಿಕಾ ವಲಯುವೇ ಹೆಚ್ಚು ಉಪಯುಕ್ತವಾಗಿದೆ.

ಸಣ್ಣ ಕೈಗಾರಿಕೆಗಳನ್ನು ಅಧಃಪತನಕ್ಕೆ ತಳ್ಳುತ್ತಿರುವ ಆಮದು ನೀತಿ -2000: ಸಣ್ಣ ಕೈಗಾರಿಕಾ ವಲಯವು LPG ನೀತಿಯಿಂದಾಗಿ ತೀವ್ರವಾಗಿ ಬಿಕ್ಕಟ್ಟಿಗೆ ಸಿಲುಕಿದೆ. 2.21 ಲಕ್ಷ ಸಣ್ಣ ಕೈಗಾರಿಕೆಗಳು ನಷ್ಟವನ್ನು ಅನುಭವಸುತ್ತಿದ್ದು ಲಕ್ಷಾಂತರ ಮಂದಿ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಈ ಹೊಸ ಆಮದು ನೀತಿ 2000 ದ ಪ್ರಕಾರ ಕೇಂದ್ರ ಸರ್ಕಾರದ ಹೇಳಿಕೆಯಂತೆ 812 ವಸ್ತುಗಳಲ್ಲಿ 624 ವಸ್ತುಗಳನ್ನು ಸಣ್ಣ ಕೈಗಾರಿಕಾ ವಲಯುದ ರಕ್ಷಣೆಗಾಗಿ ಮೀಸಲಿಡುವುದಾಗಿ ಹೇಳಿದರೂ ಸಹ ಮುಕ್ತ ವ್ಯಾಪಾರ ಪರವಾನಗಿ ನೀಡಲಾಗಿದೆ. ವಿಶ್ವ ವ್ಯಾಪಾರಿ ಸಂಘಟನೆ ಒಪ್ಪಂದದ ಪ್ರಕಾರ 2001 APFI ವೇಳೆಗೆ ORS ನ ಮೂಲಕ ಈ ಎಲ್ಲಾ ಕೈಗಾರಿಕೆಗಳು ನಾಶವಾಗಲಿವೆ. ಪರಿಣಾಮವಾಗಿ 400 MNCಗಳು ತಮ್ಮ ಸುಭದ್ರ ಆರ್ಥಿಕ ತಳಪಾಯದ ಮೇಲೆ ದೇಶದಾದ್ಯಂತ ವ್ಯಾಪಾರ ಆರಂಭ ಮಾಡುತ್ತಿವೆ. ಈ ಕಂಪನಿಗಳು ಸಾಕಷ್ಟು ಸುಲಭ ಸಾಲ ಸೌಲಭ್ಯಗಳು, ಅಗ್ರರೀತಿಯ ಪ್ರಚಾರ, ಉತ್ತಮ ತಾಂತ್ರಿಕ ಸೌಲಭ್ಯ ವೃತ್ತಿಪರ ಕೌಶಲ್ಯಯುತ ವ್ಯವಸ್ಥಾಪಕ ಪರಿಣತರೊಂದಿಗೆ ಮಾರುಕಟ್ಟೆ ಪ್ರವೇಶಿಸಲಿವೆ. ಚಾಕೋಲೇಟಿನಿಂದ ಕಾರ್‌ವರೆಗೆ ವಿವಿಧ ರೀತಿಯ ಉತ್ಪಾದನೆಗಳು ಗ್ರಾಹಕ ಮಾರುಕಟ್ಟೆಯನ್ನು ಆಕ್ರಮಿಸಲಿವೆ. ಈ ವಿಚಾರವಾಗಿ ಆಮದು ನೀತಿ 2000 ತೀರಾ ಅಪಕ್ವವಾದ ಆತುರದ ನಿರ್ಧಾರವಾಗಿದ್ದು, SSF ನೊಂದಿಗೆ ಚರ್ಚಿಸದೆ ಹಾಗೂ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದಿರುವುದು ರಾಷ್ಟ್ರದ ಅರ್ಥವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರಬಲ್ಲದು.

ಈ ಹೊಸ ಆಮದು ನೀತಿ ವಿಷಯವಾಗಿ ನಿಷ್ಕಪಟ ಗಂಭೀರವಾದ ಸಂವಾದ ಸಣ್ಣ ಕೈಗಾರಿಕಾ ವಲಯದಲ್ಲಿ ಆಗದೆ ಇರುವುದು ವಿಪತ್ತಿನ ಸಂಕೇತ. ಈ ಮುಕ್ತ ಆರ್ಥಿಕ ನೀತಿಯು ಡಾರ್ವಿನ್ನನ ಜೀವವಿಕಾಸ ಸಿದ್ಧಾಂತದಂತೆ ಬಲಿಷ್ಠರು ಮಾತ್ರ ಬದುಕುಳಿಯಲು ಸಾಧ್ಯ. ಈ ಹೊಸ ಆಮದು ನೀತಿಯಿಂದಾಗಿ ದೊಡ್ಡ ಪ್ರಮಾಣದಲ್ಲಿ ಸಣ್ಣ ಕೈಗಾರಿಕಾ ಉದ್ಯಮಪತಿಗಳು ಉಸಿರಾಡುವುದು ಸಹ ಕಷ್ಟವಾಗಿದೆ. ಹಲವರು ಆತ್ಮಹತ್ಯೆಯ ಹಾದಿ ಹಿಡಿಯುತ್ತಿದ್ದಾರೆ. ಹಾಗೆಯೇ ಇದು ವಿದೇಶಿ ನೀತಿ ನಿಲುವುಗಳನ್ನು ನಿಯಂತ್ರಿಸುವಲ್ಲಿಯೂ ಸಹ ವಿಫಲವಾಗಿದೆ. ಬಹುರಾಷ್ಟ್ರೀಯ ಕಂಪನಿಗಳ ಕಾರ್ಮಿಕ ವರ್ಗ ಸಣ್ಣ ಉಳಿತಾಯವನ್ನು ಹಾಳುಗೆಡವುತ್ತಿದೆ. ಪರಿಣಾಮವಾಗಿ ಪಾವತಿ ಶಿಲ್ಕಿನ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯಿದೆ. ಅತ್ಯಂತ ಮುಂದುವರಿದ ರಾಷ್ಟ್ರಗಳಲ್ಲಿಯೂ ಸಹ ಅಲ್ಲಿನ ಕೃಷಿ ಮತ್ತು ಕೈಗಾರಿಕಾ ವಲಯುವನ್ನು ವಿಶೇಷವಾಗಿ ಸಣ್ಣ ಕೈಗಾರಿಕಾ ವಲಯುವನ್ನು ಕಾಪಾಡಲು ನಿರ್ದಿಷ್ಟ ನೀತಿ ನಿಯಮಗಳನ್ನು ರೂಪಿಸಿಕೊಂಡಿದ್ದಾರೆ. ಆದ್ದರಿಂದ ಈ ನೀತಿಗಳನ್ನು ಪುನರ್ವಿಮರ್ಶಿಸುವ, ಪರ್ಯಾಯ ಮಾರ್ಗಗಳನ್ನು ಕಂಡುಹಿಡಿಯುವಂತೆ ಕೇಂದ್ರ ರಾಜ್ಯ ಸರ್ಕಾರಗಳ ಮೇಲೆ ಒತ್ತಡ ತರುವುದು ಅನಿವಾರ್ಯವಾಗಿದೆ.

ಆರಂಭದಲ್ಲೇ ನೀತಿಯ ನ್ಯೂನತೆ: ಈ ಸಂವಾದದಲ್ಲಿ ಸ್ಪಷ್ಟ ಅಭಿಪ್ರಾಯಕ್ಕೆ ಬರುವಾಗ್ಗೆ ಪ್ರಾಯಶಃ ಮಾಹಿತಿ ತಂತ್ರಜ್ಞಾನ ಮತ್ತು ಸಾಫ್ಟ್‌ವೇರ್ ಕೈಗಾರಿಕೆಗಳನ್ನು ಹೊರತುಪಡಿಸಿದರೆ 1991 ರಿಂದ LPG ಆರ್ಥಿಕ ನೀತಿಯಿಂದಾಗಿ ಯಾವುದೇ ಮುಚ್ಚುಮರೆಯಿಲ್ಲದೆ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ವಿಫಲರಾಗಿದ್ದೇವೆ. ವ್ಯಾಪಾರ, ಕೃಷಿ ರಂಗಗಳನ್ನು ನಿರ್ಲಕ್ಷಿಸಲಾಗಿದೆ. ಮಾನವ ಕಲ್ಯಾಣ ಯೋಜನೆಗಳಾದ ಶಿಕ್ಷಣ, ಆರೋಗ್ಯ, ವಸತಿ, ಶೌಚಾಲಯ ವ್ಯವಸ್ಥೆ, ಕುಡಿಯುವ ನೀರು,



ಜೀವನಾವಶ್ಯಕ ಸಾರ್ವಜನಿಕ ವಿತರಣೆಯನ್ನು ಉಪೇಕ್ಷಿಸಲಾಗಿದೆ. ಬಡತನ, ನಿರುದ್ಯೋಗ, ಬೆಲೆ ಏರಿಕೆ, ಹಣದುಬ್ಬರಗಳನ್ನು ಇಳಿಸುವ ಮೂಲಕ ಸಾಮಾನ್ಯ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದರ ಮೂಲಕ ಆಂತರಿಕ ಮಾರುಕಟ್ಟೆಯನ್ನು ಚುರುಕುಗೊಳಿಸಬೇಕಿದೆ. ಅನುತ್ಪಾದಕ ಸರ್ಕಾರಿ ವೆಚ್ಚಗಳನ್ನು, ಸಾರ್ವಜನಿಕ ಆಡಳಿತದಲ್ಲಿ ಅಧಿಕಾರಶಾಹಿ ನಿಯಂತ್ರಣವನ್ನು, ಹಗರಣಗಳನ್ನು ನಿಯಂತ್ರಿಸಬೇಕಿದೆ. ಬದಲಿಗೆ ಎಲ್ಲಾ ಸಾಮಾಜಿಕ, ಆರ್ಥಿಕ ರಾಜಕೀಯ ಬಿಕ್ಕಟ್ಟುಗಳು ಉಲ್ಬಣಗೊಳ್ಳುತ್ತಿವೆ.

ಕೇಂದ್ರ ರಾಜ್ಯ ಸರ್ಕಾರಗಳು ಸಾರ್ವಜನಿಕ ಜವಾಬ್ದಾರಿಗಳಿಂದ ಹೆಚ್ಚು ಹೆಚ್ಚು ನುಣುಚಿಕೊಳ್ಳುತ್ತಿವೆ. ಸಾರ್ವಜನಿಕ ವಲಯುಗಳನ್ನು ಎಂಎನ್‌ಸಿಗಳಿಗೆ ಮಾರುವುದರ ಮೂಲಕ ದೇಶದ ತ್ಯಾಗ ಬಲಿದಾನಗಳನ್ನು ಪರಮಾಧಿಕಾರದ ಮೇಲಿರುವ ನಂಬಿಕೆಯನ್ನು ಹುಸಿಗೊಳಿಸುತ್ತಿದ್ದಾರೆ. ಸಾರ್ವಜನಿಕ ಸೇವಾ ವಲಯುಗಳಾದ ವಿದ್ಯುತ್, ಸಾರಿಗೆ, ಸಂಪರ್ಕ, ಪೆಟ್ರೋಲಿಯಂ ಉತ್ಪನ್ನಗಳು, ಬ್ಯಾಂಕ್, ವಿಮೆ ಮುಂತಾದ ಕ್ಷೇತ್ರಗಳನ್ನು ಖಾಸಗೀಕರಣಗೊಳಿಸಲಾಗುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತ ಅವಕಾಶ ನೀಡಿರುವುದು ದೇಶೀಯ ಕೈಗಾರಿಕೆಗಳಿಗೆ ವಿಶೇಷವಾಗಿ ಸಣ್ಣ ಕೈಗಾರಿಕೆಗಳಿಗೆ ತೀವ್ರವಾದ ಹೊಡೆತ ಬಿದ್ದಿದೆ. 1980 ರಿಂದ 1990 ರ ಅವಧಿಯಲ್ಲಿ ಭಾರೀ ಕೈಗಾರಿಕೆಗಳ ವಾರ್ಷಿಕ ಬೆಳವಣಿಗೆಯ ದರ ಶೇ 16ರಿಂದ 9 ಕ್ಕೆ ಹಾಗೆಯೇ, ಸಣ್ಣ ಕೈಗಾರಿಕೆಗಳ ವಾರ್ಷಿಕ ಬೆಳವಣಿಗೆಯ ದರ ಶೇ 31 ರಿಂದ 11 ಕ್ಕೆ ಇಳಿದಿದೆ. ಪರಿಣಾಮವಾಗಿ ದೇಶೀಯ ಕೈಗಾರಿಕೆಗಳು ಸಂಕಷ್ಟದಲ್ಲಿ ಸಿಲುಕಿವೆ. ಲಕ್ಷಾಂತರ ಉದ್ಯೋಗಗಳು ಕಡಿತಗೊಂಡಿವೆ.

ವಿಶ್ವ ವ್ಯಾಪಾರ ಸಂಘಟನೆಯಡಿಯಲ್ಲಿ ಭಾರತದ ಈಗಿನ ನಿರೀಕ್ಷೆಯಂತೆ ರಫ್ತು ಹೆಚ್ಚುವ ಯಾವ ಸಾಧ್ಯತೆಗಳೂ ಇಲ್ಲ. ದೇಶದ ಆಂತರಿಕ ವ್ಯಾಪಾರದ ಕುಸಿತವು ವಿದೇಶಿ ವಿನಿಮಯ ದರವು ಡಾಲರ್ ಎದುರು ರೂಪಾಯಿಯ ಅಪಮೌಲ್ಯ ಹೆಚ್ಚಲಿದೆ. ವಿದೇಶಿ ಸಾಲ ಹೆಚ್ಚಾಗುವ ಸಾಧ್ಯತೆಯಿದೆ. ತಡವಾಗಿಯಾದರೂ ಸಹ 'ಮಾನವೀಯ ದೃಷ್ಟಿಕೋನದಿಂದ ಸುಧಾರಣೆ', 'ಸ್ವದೇಶಿ ಹಿತದೊಂದಿಗೆ ಸುಧಾರಣೆ', 'ಆರ್ಥಿಕ ಸಾರ್ವಭೌಮತ್ವದೊಂದಿಗೆ ಸುಧಾರಣೆ' ಎನ್ನುವ ಮಾತು ಎಲ್ಲೆಡೆ ಕೇಳಿಬರುತ್ತಿದೆ. ವಿಶ್ವ ವ್ಯಾಪಾರ ಸಂಘಟನೆ, LPGಯ ಪ್ರತಿಕೂಲ ಪರಿಣಾಮಗಳನ್ನು ವಿರೋಧಿಸಿ ಭಾರತದಾದ್ಯಂತ ವಿವಿಧ ವರ್ಗದ ಜನರು ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ. ಈ ನೀತಿಯ ಆರಂಭದ ಹೆಜ್ಜೆಯೇ ಬಹುದೂರಕ್ಕೆ ಕೊಂಡೊಯ್ದಿದೆ. ಸಣ್ಣ ಕೈಗಾರಿಕಾ ವಲಯವನ್ನು ಬಲಪಡಿಸುವಲ್ಲಿ ಪೂರ್ವ ಸುಧಾರಣೆ ಮತ್ತು ನಂತರದ ಸುಧಾರಣೆಗಳು ಅನಿಶ್ಚಿತತೆ ದೃಢ ನಿರ್ಧಾರದ ಕೊರತೆಯೊಂದಿಗೆ ನ್ಯೂನವಾಗಿವೆ. ಎರಡನೇ ಹಂತದ ಸುಧಾರಣೆಗಳು ಸಹ ದುರಂತಕ್ಕೀಡಾದವು. ಕಾರಣ ಅಸಮತೋಲನ ಸ್ಪರ್ಧೆ, ಸೂಕ್ತ ಸಾಲ ಸೌಲಭ್ಯದ ಕೊರತೆ, ಮೂಲಭೂತ ಸೌಕರ್ಯಗಳ ಕೊರತೆ. ಹಾಗಾಗಿ ಸಣ್ಣ ಕೈಗಾರಿಕೆಗಳು ಮಾರುಕಟ್ಟೆಯ ಮೇಲಿನ ಹಿಡಿತವನ್ನು ಕಳೆದುಕೊಂಡವು.

ನಿರ್ಲಕ್ಷಿತವಾಗಿರುವ ಉತ್ತರ ಕರ್ನಾಟಕ: ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಹುಬ್ಬಳ್ಳಿ, ಧಾರವಾಡದಲ್ಲಿ ಕೈಗಾರಿಕೆಗಳು, ಮುಂಚೂಣಿಯಲ್ಲಿದ್ದವು. ಆದರೆ ಕಳೆದೊಂದು ದಶಕದಿಂದ ಹೊಸ ಆರ್ಥಿಕ ನೀತಿಯಿಂದಾಗಿ ಸಾಕಷ್ಟು ಕೈಗಾರಿಕೆಗಳು ಮುಚ್ಚಿವೆ. ದೊಡ್ಡ ಕೈಗಾರಿಕೆಗಳೆನಿಸಿದ, ಮೈಸೂರ್ ಕಿರ್ಲೋಸ್ಕರ್, ಇಂಡಿಯಾ ಪ್ಲೈವುಡ್, ಬಟ್ಟೆ ಮಿಲ್ಲುಗಳು ಮುಚ್ಚಿಹೋಗಿವೆ. ಈ ಕೈಗಾರಿಕೆಗಳನ್ನು ಅವಲಂಬಿಸಿದ್ದ ಹಲವಾರು ಸಣ್ಣ ಕೈಗಾರಿಕೆಗಳು ಮುಚ್ಚಿವೆ. ಪ್ಲಾಸ್ಟಿಕ್ ಪೈಪುಗಳು, ಮಾರ್ಜಕಗಳು, ಔಷಧಿಗಳು ಆಹಾರೋತ್ಪನ್ನ ಕೈಗಾರಿಕೆಗಳು, ರಾಸಾಯನಿಕ ಕೈಗಾರಿಕೆಗಳು ಸಹ ಮುಚ್ಚಿವೆ. ಹೊಸ ಉದ್ಯಮವಾದ ಮಾಹಿತಿ ತಂತ್ರಜ್ಞಾನದ ಉದ್ದಿಮೆಗಳು ಸಹ ಸಾಕಷ್ಟು ಸ್ಥಾಪಿತವಾಗಿಲ್ಲ. ವಾಸ್ತವವಾಗಿ ಈ ಪ್ರದೇಶದಲ್ಲಿ ಕೈಗಾರಿಕೆಗಳು ಹೆಚ್ಚಾಗಿ ಸ್ಥಾಪಿತವಾಗಿಲ್ಲ. ಈ ಪ್ರದೇಶದಲ್ಲಿ ಜನರು ಮೂಲಭೂತ ಸೌಕರ್ಯಗಳ ಕೊರತೆಯನ್ನು ತೀವ್ರವಾಗಿ ಎದುರಿಸುತ್ತಿದ್ದಾರೆ. ರೈಲ್ವೆ ಸಾರಿಗೆ, ರಸ್ತೆ ಸಾರಿಗೆ, ವಿಮಾನ ಸಾರಿಗೆ, ನಿರಂತರ ವಿದ್ಯುತ್, ನೀರಿನಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಲ್ಲಿನ ವಕೀಲರ ಹಾಗೂ ಜನರ ಬಹುದಿನದ ಬೇಡಿಕೆಯಾದ ಪ್ರತ್ಯೇಕ ಹೈಕೋರ್ಟ್ ಸ್ಥಾಪನೆಗೆ ಕೇಂದ್ರ ರಾಜ್ಯ ಸರ್ಕಾರಗಳು ತೋರುತ್ತಿರುವ ನಿರ್ಲಕ್ಷ್ಯದಿಂದಾಗಿ ಪ್ರತ್ಯೇಕ ರಾಜ್ಯ ಸ್ಥಾಪನೆಗೆ ಬೇಡಿಕೆ ಮುಂದಿಟ್ಟಿರುವುದು ವಿಷಾದಕರ.

ಮನವಿಯ ಪ್ರಮುಖ ಅಂಶಗಳು ಹಾಗೂ ಬೇಡಿಕೆಗಳು

WTO ಮತ್ತು LPG ಗಳಿಂದ ಸಣ್ಣ ಕೈಗಾರಿಕೆಗಳ ಮೇಲಾಗುವ ಪರಿಣಾಮಗಳ ಕುರಿತು ತನಿಖೆ ನಡೆಸುವುದು. IMF, WTO, W.B.ಗಳ ಮೊದಲ ಸುತ್ತಿನ ಒಪ್ಪಂದಗಳನ್ನು ರಾಷ್ಟ್ರೀಯ ಹಿತಾಸಕ್ತಿಗಳಿಗನುಗುಣವಾಗಿ ಪುನರ್ ವಿಮರ್ಶಿಸಬೇಕು.

ಎಸ್.ಪಿ.ಗುಪ್ತಾ ನೇತೃತ್ವದ ಯೋಜನಾ ಆಯೋಗದ ವರದಿಯನ್ನು ತಡೆಹಿಡಿಯುವುದು. ಆಮದು ನೀತಿ 2000ನ್ನು ಪುನರ್ ವಿಮರ್ಶಿಸಬೇಕು ಹಾಗೂ ತಕ್ಷಣದ ಕಾರ್ಯವಾಗಿ ಮುಕ್ತ ಪರವಾನಗಿಯಡಿಯಲ್ಲಿ ಬರುವ ಸಣ್ಣ ಕೈಗಾರಿಕಾ ಉತ್ಪನ್ನಗಳ ಹಿತದೃಷ್ಟಿಯಿಂದ ಆಮದು ಸುಂಕ ಹೆಚ್ಚಿಸಬೇಕು.

ಸಾರಿಗೆ, ಉಗ್ರಾಣ, ನಿರಂತರ ಹಾಗೂ ಸಾಕಷ್ಟು ವಿದ್ಯುತ್ ಪೂರೈಕೆ, ಆಧುನಿಕ ತಂತ್ರ ಇವನ್ನು ರಿಯಾಯಿತಿ ದರದಲ್ಲಿ ಒದಗಿಸುವುದು. ಭಾರತ ಸರಕಾರದ ಮೂಲಭೂತ ಸೌಕರ್ಯ ಯೋಜನೆಯಡಿಯಲ್ಲಿ AIDBI ರಾಜ್ಯ ಸರ್ಕಾರಗಳ ಗ್ಯಾರಂಟಿಯಿಲ್ಲದೆ ಸಾಲ ನೀಡಬೇಕು ಹಾಗೂ ಸಂವಿಧಾನದ 74ನೇ ಕಾಯ್ದೆಯಂತೆ ಕೈಗಾರಿಕಾ ನಗರಗಳನ್ನು ಸ್ಥಾಪಿಸಬೇಕು.

ಸರ್ಕಾರವು ಶಾಸನವನ್ನು ಜಾರಿ ಮಾಡುವುದರ ಮೂಲಕ ಸಣ್ಣ ಕೈಗಾರಿಕಾ ವಲಯಕ್ಕೆ ಸಾರ್ವಜನಿಕ ಹಾಗೂ ಖಾಸಗಿ ವಲಯುಗಳಿಂದ ಸಾಕಷ್ಟು ಸಾಲ ಸೌಲಭ್ಯ ದೊರೆಯುವಂತೆ ಮಾಡುವುದು ಹಾಗೂ ಸರ್ಕಾರ ಹಾಗೂ ಬೇರೆ ಸಂಸ್ಥೆಗಳು ಸಹ ಸಣ್ಣ ಕೈಗಾರಿಕೆಗಳ ಬಗ್ಗೆ ಕಾಳಜಿ ವಹಿಸುವಂತೆ ಮಾಡುವುದು.

ಬ್ಯಾಂಕುಗಳು ಸಣ್ಣ ಕೈಗಾರಿಕೆಗಳಿಗೆ ನೀಡುವ ಸಾಲದ ದರ ಗ್ಯಾರಂಟಿಗೆ ಸಂಬಂಧಿಸಿದಂತೆ, ಕಪೂರ್ ಮತ್ತು ನಾಯಕ್ ಕಮಿಟಿಯ ವರದಿಯು ಶಿಫಾರಸ್ಸು ಮಾಡಿರುವಂತೆ ಕನಿಷ್ಠ ಭದ್ರತೆಯನ್ನು ಅನ್ವಯಗೊಳಿಸಲು ಒತ್ತಾಯಿಸುವುದು.

ಸಣ್ಣ ಕೈಗಾರಿಕಾ ಘಟಕಗಳ ಆದ್ಯತೆಗಳನ್ನು ಪೂರೈಸುವಂತೆ ವಿಮ ಯೋಜನೆಗಳನ್ನು ಜಾರಿಗೊಳಿಸಬೇಕು. ಸಣ್ಣ ಕೈಗಾರಿಕೆಗಳ ಮೇಲಿನ ಶುಲ್ಕ ಏರಿಕೆಯನ್ನು ಕಡಿತಗೊಳಿಸಬೇಕು.

ಸಣ್ಣ ಕೈಗಾರಿಕೆಗಳು ಬ್ಯಾಂಕುಗಳು, ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವಾಗ ಸ್ಥಿರ ಠೇವಣಿಯನ್ನು 'ಕ್ರೋಢೀಕೃತ ಭದ್ರತೆ' ಎಂದು ಒತ್ತಾಯಿಸುವುದನ್ನು ತತ್‌ಕ್ಷಣ ಕೈ ಬಿಡಬೇಕು.

ಸಣ್ಣ ಕೈಗಾರಿಕೆಗಳ ಮಾರಾಟ ಮಾಡಲು ಮತ್ತು ರಫ್ತನ್ನು ಉತ್ತೇಜಿಸಲು 'ಸಾಮಾನ್ಯ ವೇದಿಕೆ'ಯೊಂದನ್ನು ರಚಿಸಬೇಕು. ಸಣ್ಣ ಕೈಗಾರಿಕೆಗಳ ಉತ್ಪನ್ನಗಳ ರಫ್ತಿಗೆ ಸಾಕಷ್ಟು ರಿಯಾಯಿತಿ ಕೊಡಬೇಕು. ಸಣ್ಣ ಕೈಗಾರಿಕಾ ಘಟಕಗಳಿಗೆ ಅಗತ್ಯ ಮಾನವ ಮತ್ತು ತಾಂತ್ರಿಕ ಸಂಪನ್ಮೂಲಗಳನ್ನು ಒದಗಿಸಬೇಕು. ವೃತ್ತಿಪರತೆಯನ್ನು ಬೆಳೆಸಲು ವಿವಿಧ ಹಂತಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

ಪ್ರಾದೇಶಿಕ ಅಸಮಾನತೆಗಳನ್ನು ಹೋಗಲಾಡಿಸಲು, ಉತ್ತರ ಕರ್ನಾಟಕದ ಭಾಗಗಳು ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳ ವಿಸ್ತರಣೆಗೆ ಗಮನ ಹರಿಸಬೇಕು.

ವಿಕ್ರಾಂತ್ ಟೈರ್ಸ್ ಮೈಸೂರು ನಗರದ ಪ್ರತಿಷ್ಠಿತ ಕಾರ್ಖಾನೆ. ಈ ಕಾರ್ಖಾನೆಯಲ್ಲಿ 2200 ಕಾರ್ಮಿಕರಿದ್ದಾರೆ. ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿ, ಕಿರುಕುಳ, ದಬ್ಬಾಳಿಕೆ, ಸರ್ವಾಧಿಕಾರ ಧೋರಣೆ ಮಿತಿ ಮೀರಿದೆ. ಕಾರ್ಮಿಕರ ವೇತನ ಒಪ್ಪಂದವನ್ನು ನಿಗದಿತ ಅವಧಿಯೊಳಗೆ ಬಗೆಹರಿಸುವುದಾಗಿ ಮಾತು ಕೊಟ್ಟಿದ್ದರು. 2 ವರ್ಷಗಳಾದರೂ ತನ್ನ ಮಾತಿನಂತೆ ನಡೆದುಕೊಳ್ಳುತ್ತಿಲ್ಲ. ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಲ್ಲಿ ತನ್ನ ಹಠಮಾರಿ ಧೋರಣೆ ತಳೆದಿದೆ. ಆಡಳಿತ ಮಂಡಳಿಯ ಧೋರಣೆ ಕಾರ್ಮಿಕರನ್ನು ರೊಚ್ಚಿಗೆಬ್ಬಿಸಿದೆ. ಜನವರಿ 12ರಿಂದ ಅನಿರ್ದಿಷ್ಟ ಮುಷ್ಕರ ಪ್ರಾರಂಭಿಸಿದ್ದಾರೆ.

ಮಾಲೀಕರ ಹಠಮಾರಿತನ

ವಿಕ್ರಾಂತ್ ಟೈರ್ಸ್ ಕಾರ್ಮಿಕರ ಹೋರಾಟ

ಸಿದ್ದಯ್ಯ

ವಿಕ್ರಾಂತ್ ಟೈರ್ಸ್ ಮೈಸೂರು ನಗರದ ಪ್ರತಿಷ್ಠಿತ ಕಾರ್ಖಾನೆ 1979ರಲ್ಲಿ ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿ ಸಾರ್ವಜನಿಕ ಶೇರು ಬಂಡವಾಳದೊಂದಿಗೆ ಈ ಕಾರ್ಖಾನೆ ಸ್ಥಾಪನೆಗೊಂಡಿತು. ಮೂರು ಸಾವಿರ ಜನರಿಗೆ ಉದ್ಯೋಗ ನೀಡಿತು. ಕಾರ್ಮಿಕರ ಪರಿಶ್ರಮ, ನಿಷ್ಠೆ, ತ್ಯಾಗಗಳಿಂದ ಈ ಕಾರ್ಖಾನೆ ಅಭಿವೃದ್ಧಿಹೊಂದ ತೊಡಗಿತು. 1991ರಲ್ಲಿ ಮತ್ತೊಂದು ರೇಡಿಯಲ್ ಟೈರ್ ಸ್ಥಾವರ ಸ್ಥಾಪನೆಯಾಯ್ತು. ಇಲ್ಲಿ ಟ್ಯೂಬ್‌ರಹಿತ ಟೈರ್‌ಗಳನ್ನು ಹಾಗೂ ಟ್ರಕ್ ಟೈರ್‌ಗಳನ್ನು ಅತ್ಯುತ್ತಮ ಗುಣ ಮಟ್ಟದಲ್ಲಿ ತಯಾರು ಮಾಡಿ ರಫ್ತು ಮಾಡುವ ಮೂಲಕ ವಿಶ್ವಮಾರುಕಟ್ಟೆಯಲ್ಲಿ ಮನ್ನಣೆಗಳಿಸಿತು. ಇಲ್ಲಿ ತಯಾರಾದ ಟೈರ್‌ಗಳು, ಟ್ಯೂಬ್‌ಗಳು ಹಾಗೂ ರೇಡಿಯಲ್ ಟ್ಯೂಬ್ ರಹಿತ ಟೈರ್‌ಗಳು ಹೊರ ದೇಶಗಳಿಗೆ ರಫ್ತು ಮಾಡಲ್ಪಡುತ್ತಿತ್ತು. 1995-96ರಲ್ಲಿ ಭಾರತ ಸರ್ಕಾರ ಈ ಕಾರ್ಖಾನೆಗೆ ರಫ್ತು ಪ್ರಶಸ್ತಿ ನೀಡಿತು. ಕಾರ್ಖಾನೆ ಅಧಿಕ ಲಾಭಗಳಿಸತೊಡಗಿತು. 1991-92ರಲ್ಲಿ ಹನ್ನೆರಡೂವರೆ ಕೋಟಿ ರೂ. ಲಾಭಗಳಿಸಿತು. ಅಂದಿನ ವ್ಯವಸ್ಥಾಪಕ ನಿರ್ದೇಶಕರಾದ ಐ.ಎ.ಎಸ್. ಅಧಿಕಾರಿ ಕೃಷ್ಣಕುಮಾರ್‌ರವರ ಶ್ರಮವೂ ಇದರಲ್ಲಿ ಸೇರಿದೆ. ಅವರ ಅಧಿಕಾರಾವಧಿಯಲ್ಲಿ ಕಾರ್ಖಾನೆ ಲಾಭಗಳಿಸಿ ಕಾರ್ಮಿಕರಿಗೆ ಅಲ್ಪ ಸ್ವಲ್ಪ ಸವಲತ್ತುಗಳನ್ನು ನೀಡಿದ್ದರು. ಆಗ ನೀಡಿದ್ದ ಸವಲತ್ತುಗಳನಷ್ಟೇ ಇಂದಿನವರೆಗೂ ಕಾರ್ಮಿಕರಿಗೆ ನೀಡಲಾಗುತ್ತಿದೆ.

ಅದಕ್ಷ ಆಡಳಿತಾಧಿಕಾರಿಗಳ ನೇಮಕ

ಬಂಡವಾಳಶಾಹಿ ಆಡಳಿತ ತನ್ನ ವರ್ಗಗುಣವನ್ನು ಇಲ್ಲೂ ತೋರದೇ ಬಿಡಲಿಲ್ಲ. ಅದಕ್ಷ ಹಾಗೂ ಭ್ರಷ್ಟಾಚಾರಿ ಆಡಳಿತಾಧಿಕಾರಿಗಳನ್ನು ನೇಮಿಸುವುದು. ಆ ಮೂಲಕ ಕಾರ್ಖಾನೆ ನಷ್ಟ ಅನುಭವಿಸುವಂತೆ ಮಾಡುವುದು. ಅದೇ ನೆಪ ಮುಂದೆ ಮಾಡಿ ಖಾಸಗಿ ಬಂಡವಾಳದಾರರಿಗೆ ಅತಿ ಕಡಿಮೆ ಬೆಲೆಗೆ ಮಾರಿ ತನ್ನ ವರ್ಗ ಹಿತಕಾಪಾಡಿಕೊಳ್ಳುವುದು ಅದರ ಮುಖ್ಯ ಗುರಿ. ಇತ್ತೀಚೆಗಂತೂ ಈ ನೀತಿಯನ್ನು ಯಾವುದೇ ಎಗ್ಗಿಲ್ಲದೇ ಜಾರಿ ಮಾಡುತ್ತಿದೆ. ವಿಕ್ರಾಂತ್ ಟೈರ್ಸ್ ಕಾರ್ಖಾನೆ ಲಾಭದಾಯಕವಾಗಿ ನಡೆಯುತ್ತಿತ್ತು. ಕರ್ನಾಟಕ ಸರ್ಕಾರ ಅದಕ್ಷ ಆಡಳಿತಗಾರರನ್ನು ನೇಮಿಸಿತು. 6 ತಿಂಗಳಿಗೊಮ್ಮೆ ಕೆಲವೊಮ್ಮೆ 3 ತಿಂಗಳಿಗೊಮ್ಮೆ ಇಂತಹ ಅದಕ್ಷ ಭ್ರಷ್ಟಾಚಾರಿ ಐ.ಎ.ಎಸ್. ಅಧಿಕಾರಿಗಳನ್ನು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸತೊಡಗಿತು. ಕಾರ್ಖಾನೆ ದಿನೇ ದಿನೇ ನಷ್ಟಕ್ಕೊಳಗಾಗತೊಡಗಿತು.

ಕಾರ್ಮಿಕರು ಜಾಗೃತರಾಗಿ ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿದರು. ವಿಕ್ರಾಂತ್ ಉಳಿಸಿ ಎಂಬ ಹೋರಾಟ ನಡೆಸಿದರು. ಸಾವಿರಾರು ಕಾರ್ಮಿಕರು ವಿಧಾನಸೌಧ ಚಲೋ ಕಾರ್ಯಕ್ರಮದಲ್ಲಿ ಭಾಗವಹಿಸಿ ಸರ್ಕಾರದ ಮತ್ತು ಕಾರ್ಖಾನೆಯ ಆಡಳಿತಾಧಿಕಾರಿಗಳ ಧೋರಣೆಯನ್ನು ಪ್ರತಿಭಟಿಸಿದರು. ಸರ್ಕಾರ ಕಾರ್ಮಿಕರ ಕೂಗಿಗೆ ಕಿವಿಗೊಡಲಿಲ್ಲ, ಅಧಿಕಾರಿಗಳನ್ನು ಬದಲಾಯಿಸುತ್ತಾ ಮತ್ತೆ ಮತ್ತೆ ಅಸಮರ್ಥರನ್ನೇ ನೇಮಿಸತೊಡಗಿತು.

ಖಾಸಗೀಕರಣ

ಕಾರ್ಖಾನೆ ನಷ್ಟಹೊಂದಲು ಕಾರಣವೇನೆಂದು ಸರ್ಕಾರ ಪರಿಶೀಲಿಸಲು ಮುಂದಾಗಲಿಲ್ಲ, ಕಾರ್ಮಿಕರ ಎಚ್ಚರಿಕೆಗೆ ಕಿವಿಗೊಡಲಿಲ್ಲ, ಬದಲಾಗಿ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿದೆ. ಸರ್ಕಾರ ಕಾರ್ಖಾನೆಯನ್ನು ನಡೆಸಲು ಸಾಧ್ಯವಾಗುತ್ತಿಲ್ಲ ಎಂಬ ನೆಪ ಮುಂದೆ ಮಾಡಿ ಖಾಸಗಿಯವರಿಗೆ ಮಾರಾಟಮಾಡಲು ಮುಂದಾಯಿತು. ಆಗಲೂ ಕಾರ್ಮಿಕರು ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿದರು. ಮೈಸೂರಿನಲ್ಲಿ ಬೃಹತ್ ಜಾಥಾ ನಡೆಸಿದರು. ವಿಕ್ರಾಂತ್ ಟೈರ್ಸ್‌ನ ಉಳಿವಿಗಾಗಿ ಹಲವು ಹೋರಾಟ ನಡೆಸಿದರು. ಕಾರ್ಮಿಕರ ಪ್ರಬಲ ವಿರೋಧದ ನಡುವೆಯೂ ಸರ್ಕಾರ ಶೇರು ಬಂಡವಾಳವನ್ನು ಖಾಸಗಿಯವರಿಗೆ ಮಾರಿತು. ಅಂದಿನ ಮಾರುಕಟ್ಟೆ ಬೆಲೆಗಿಂತ ಅತಿ ಕಡಿಮೆ ಬೆಲೆಗೆ ಶೇರುಗಳನ್ನು ಮಾರಾಟ ಮಾಡಿದರು. ಭಾರತದ ಅತಿ ದೊಡ್ಡ ಬಂಡವಾಳಗಾರರಲ್ಲಿ ಒಬ್ಬರಾದ ಗುತ್ತೆದಾರಿ ಬಂಡವಾಳಗಾರ ಸಿಂಘಾನಿಯರವರ ಜೆ.ಕೆ. ಇಂಡಸ್ಟ್ರೀಸ್ ಕಂಪೆನಿ ಈ ಕಾರ್ಖಾನೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿತು.

ಶಿಂಘಾನಿಯ ದೇಶಾದ್ಯಂತ ಹಲವು ಕಾರ್ಖಾನೆಗಳನ್ನು ಹೊಂದಿದ್ದಾನೆ. ಅವುಗಳಲ್ಲಿ ಜೆ.ಕೆ. ಟೈರ್ಸ್ ಕಂಪೆನಿಯೂ ಒಂದು. ಕಾರ್ಮಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ನೀಡದೆ ಅಧಿಕ ಲಾಭಗಳಿಸುತ್ತಲೇ ಬಂದಿದ್ದಾನೆ. ಅಧಿಕ ಕೆಲಸದ ಹೊರೆ ಕಡಿಮೆ ವೇತನ ಅವರ ನೀತಿ. ಇದನ್ನರಿತ ಕಾರ್ಮಿಕರು ಮುಂದೆ ಬರಬಹುದಾದ ದಾಳಿ ದಬ್ಬಾಳಿಕೆಯನ್ನು ನೆನೆದು ಪ್ರತಿಭಟಿಸಿದಾಗ ಮಾಲೀಕ ವರ್ಗ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಕಾರ್ಮಿಕರಿಗೆ ಕೆಲವು ಭರವಸೆಗಳನ್ನು ನೀಡಿದರು. ಯಾವುದೇ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕುವುದಿಲ್ಲ. ಕಾರ್ಮಿಕರ ನ್ಯಾಯಯುತವಾದ ಬೇಡಿಕೆಗಳನ್ನು ಚಾಲ್ತಿಯಲ್ಲಿರುವ ಒಪ್ಪಂದದ ಅವಧಿ ಕೊನೆಗೊಳ್ಳುವ ಮೊದಲೇ ಬಗೆಹರಿಸುವುದಾಗಿ ಒಪ್ಪಿದರು.

ಹೆಚ್ಚಿದ ಲಾಭ :

ಜೆ.ಕೆ. ಇಂಡಸ್ಟ್ರೀಸ್ ಸಂಸ್ಥೆಗೆ ಕಾರ್ಖಾನೆ ಅಸ್ತಾಂತರವಾದಾಗ ಆಗಲೇ ನೂರಾರು ಕೋಟಿ ರೂಪಾಯಿಗಳ ಟೈರ್‌ಗಳು ಸಿದ್ಧವಾಗಿದ್ದವು. ಕಾರ್ಖಾನೆಯನ್ನು ಆಧುನೀಕರಿಸುತ್ತೇವೆ. ಹೊಸ ತಂತ್ರಜ್ಞಾನ ಅಳವಡಿಸುತ್ತೇವೆ ಎಂದು ಹೇಳಿ ಬ್ಯಾಂಕುಗಳಿಂದ ಸುಮಾರು 200 ಕೋಟಿ ರೂ ಸಾಲ ಪಡೆದರು. ಕಾರ್ಮಿಕರ ಪರಿಶ್ರಮದಿಂದಾಗಿ ಕಂಪೆನಿ ಅಧಿಕ ಲಾಭಗಳಿಸತೊಡಗಿತು. 1997-98ರಲ್ಲಿ 19 ಕೋಟಿ 1998-99ರಲ್ಲಿ 17-5 ಕೋಟಿ, 1999-2000ದಲ್ಲಿ 14.5ಕೋಟಿ ರೂಗಳ ಲಾಭ ಗಳಿಸಿತು.

ಇಷ್ಟಾದರೂ ಆಡಳಿತ ಮಂಡಳಿ ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಲಿಲ್ಲ. ಬದಲಾಗಿ ಕಾರ್ಮಿಕರಿಗೆ ಕೆಲಸದ ಹೊರೆಯನ್ನು ಅಧಿಕಗೊಳಿಸತೊಡಗಿದರು. 1999 ಸೆಪ್ಟಂಬರ್ 30ಕ್ಕೆ ಮುಗಿಯುತ್ತಿದ್ದ ವೇತನ ಒಪ್ಪಂದವನ್ನು 8 ತಿಂಗಳು ಮುಂಚಿತವಾಗಿ ಮಾಡಿಕೊಳ್ಳೋಣವೆಂದು ಆಡಳಿತ ಮಂಡಳಿ ಹೇಳಿತು. ಕಾರ್ಮಿಕರು ವೇತನ ಪರಿಷ್ಕರಣೆಗಾಗಿ ಮತ್ತು ಶ್ರಮಭಾರ ಕಡಿಮೆಮಾಡಬೇಕೆಂದು ಕಳೆದ 2 ವರ್ಷಗಳಿಂದ ನಿರಂತರ ಒತ್ತಡ ತಂದರೂ ಆಡಳಿತ ಮಂಡಳಿ ನ್ಯಾಯ ದೊರಕಿಸಲು ಮುಂದಾಗಲಿಲ್ಲ.

1999 ಆಗಸ್ಟ್-ಸೆಪ್ಟೆಂಬರ್‌ನಲ್ಲಿ 43 ದಿನಗಳ ಕಾಲ ಕಾರ್ಮಿಕರಿಗೆ ಕೆಲಸವನ್ನೇ ನೀಡಲಿಲ್ಲ ಆಗ ಜಿಲ್ಲಾಧಿಕಾರಿ ಕಛೇರಿ ಮುಂದೆ ಸರದಿ ಉಪವಾಸ ಸತ್ಯಾಗ್ರಹ ನಡೆಸಿದರು. ಕಾರ್ಮಿಕ ಮುಖಂಡರೊಡನೆ ಆಡಳಿತ ಮಂಡಳಿ ಹಲವು ಸುತ್ತಿನ ಸಭೆ ನಡೆಸಿದರೂ ಯಾವುದೇ ಒಪ್ಪಂದಕ್ಕೆ ಬರುತ್ತಿಲ್ಲ. 2000ದ ಮೇ ತಿಂಗಳಲ್ಲಿ ಶಿಂಘಾನಿಯ ನಗರಕ್ಕೆ ಬಂದಿದ್ದಾಗ ಉತ್ಪದನೆಗೆ ದಕ್ಕೆಯಾಗದಂತೆ ಒಂದು ದಿನದ ಸಾಂಕೇತಿಕ ಧರಣಿ ನಡೆಸಲಾಯ್ತು. ಆ ಸಮಯದಲ್ಲಿ 100 ರೂ ಹೆಚ್ಚಳ ಮಾಡುವುದಾಗಿ ನೀಡಿದ ಭರವಸೆಯನ್ನು ಅಧಿಕಾರಿಗಳು ಜಾರಿಮಾಡಲಿಲ್ಲ.

ಮಾಲೀಕರ ಧೋರಣೆ ಪ್ರತಿಭಟಿಸಿ 18-10-2000ದಂದು ಕಾರ್ಮಿಕರು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿ, ನಗರದಲ್ಲಿ ಜಾತಾ ನಡೆಸಿ ಸಹಾಯಕ ಕಾರ್ಮಿಕ ಆಯುಕ್ತರಿಗೆ ಮನವಿ ಸಲ್ಲಿಸಿದರು. ಕಾರ್ಮಿಕ ಸಂಘ ಸೌಹಾರ್ದಯುತ ಒಪ್ಪಂದ ಮಾಡಿಕೊಳ್ಳಲು ಸಿದ್ದರಾಗಿದ್ದರೂ ಆಡಳಿತ ಮಂಡಳಿ ತನ್ನ ಬಿಗಿಪಟ್ಟು ಸಡಿಲಿಸದಿದ್ದಾಗ ಕಾರ್ಮಿಕರು ಮುಷ್ಕರ ಮಾಡಲು ಮುಂದಾದರು. 9-12-2000ದಂದು ನಡೆದ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಒಂದು ನಿರ್ಧಾರಕ್ಕೆ ಬಂದರು. 2-1-2001ರ ನಂತರ ಯಾವಾಗಲಾದರೂ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲು ಸಭೆ ತೀರ್ಮಾನಿಸಿತು. 2-1-2001ರಂದು ಮುಷ್ಕರದ ಸಂಕೇತವಾಗಿ ಕಾರ್ಖಾನೆ ಗೇಟ್‌ಬಳಿ ಕೆಂಪು ಧ್ವಜಾರೋಹಣ ಮಾಡಿ ಪ್ರತಿಭಟಿಸಿ ಸಾರ್ವಜನಿಕರ ಬೆಂಬಲಗಳಿಸಲು ಜನವರಿ 4 ಮತ್ತು 5 ರಂದು ನಗರದ 22 ವೃತ್ತಗಳಲ್ಲಿ ಬೀದಿ ಬದಿ ಸಭೆ ನಡೆಸಿ ಮುಷ್ಕರದ ಕಾರಣಗಳನ್ನು ವಿವರಿಸಿದರು. ಮುಖ್ಯಮಂತ್ರಿಯವರಿಗೆ, ಸಚಿವರಿಗೆ, ಶಾಸಕರಿಗೆ ಮನವಿ ಅರ್ಪಿಸಿದರೂ ಪ್ರಯೋಜನವಾಗಲಿಲ್ಲ.

ಮುಷ್ಕರ ನಡೆಸಲು ತೀರ್ಮಾನಿಸಿದ ನಂತರವೂ ಆಡಳಿತ ಮಂಡಳಿ ಬೆಂಗಳೂರಿನಲ್ಲಿ ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ಕಾರ್ಮಿಕ ಮುಖಂಡರೊಡನೆ ಹಲವು ಸುತ್ತಿನ ಮಾತುಕತೆ ನಡೆಸಿದರೂ ಅದು ವಿಫಲವಾಯಿತು. ಕಾರ್ಮಿಕರ ಬೇಡಿಕೆಗಳ ಬದಲಾಗಿ ಹೆಚ್ಚೆಚ್ಚು ಉತ್ಪಾದನೆ ಮಾಡಲು ಆಡಳಿತ ಮಂಡಳಿ ಷರತ್ತು ವಿಧಿಸತೊಡಗಿತು. ಕಾರ್ಖಾನೆಯಲ್ಲಿ ಅತ್ಯಾಧುನಿಕ ಯಂತ್ರಗಳನ್ನು ಅಳವಡಿಸಿಲ್ಲ. ಬದಲಾಗಿ ಈಗಿರುವ 49 ಟೈರ್ ಬಿಲ್ಡಿಂಗ್ ಯಂತ್ರಗಳಲ್ಲಿ ಒಂದು ಪಾಳಿಗೆ 700 ಟೈರ್‌ಗಳು ಬರುತ್ತಿದ್ದರೆ, ಅದನ್ನು ಕೇವಲ 26 ಯಂತ್ರಗಳಲ್ಲಿ 810 ಟೈರ್‌ಗಳನ್ನು ಉತ್ಪಾದಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಪ್ರಸ್ತುತ ಇಬ್ಬರು ಕಾರ್ಮಿಕರು 8 ಟೈರ್ ಕ್ಯೂರಿಂಗ್ ಯಂತ್ರಗಳಲ್ಲಿ ಕೆಲಸ ಮಾಡುತ್ತಿದ್ದು, ಮುಂದೆ ಒಬ್ಬನೇ ಕಾರ್ಮಿಕ ಆ ಕೆಲಸ ಮಾಡಬೇಕು, ಟ್ಯೂಬ್ ವಿಭಾಗದಲ್ಲಿ 2 ಯಂತ್ರಗಳ ಬದಲಿಗೆ 4 ಯಂತ್ರಗಳಲ್ಲಿ ಕೆಲಸ ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಇದು ಅಸಾಧ್ಯದ ಕೆಲಸ. ಬೆಂಗಳೂರಿನಲ್ಲಿ ಮಾತುಕತೆ ವಿಫಲವಾದ ವಿಷಯ ತಿಳಿದ ಕಾರ್ಮಿಕರು ಜನವರಿ 12 ರಂದು ಮಧ್ಯಾಹ್ನ 3 ಗಂಟೆಗೆ ಕೆಲಸ ಸ್ಥಗಿತಗೊಳಿಸಿ ಮುಷ್ಕರಕ್ಕಿಳಿದಿದ್ದಾರೆ.

ಮುಷ್ಕರ ಮುರಿಯಲು ಯತ್ನ :

ಆಡಳಿತ ಮಂಡಳಿ ಮುಷ್ಕರವನ್ನು ಮುರಿಯಲು ಸಂಘಟನೆ ಒಡೆಯಲು ಹಲವು ತಂತ್ರಗಳನ್ನು ಉಪಯೋಗಿಸುತ್ತಿದೆ. ಪತ್ರಿಕೆಗಳಲ್ಲಿ ಕಾರ್ಮಿಕರ ಮೇಲ್ಕೆ ಸುಳ್ಳು ಪ್ರಚಾರ ಪ್ರಕಟಿಸುವುದು, ಕರಪತ್ರ ಹಂಚುವ ಮೂಲಕ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಸುವುದು, ಕಾರ್ಮಿಕರಿಗೆ ಹಲವು ಆಮಿಷ ತೋರಿ ಕೆಲಸಕ್ಕೆ ಹಾಜರಾಗುವಂತೆ ಒತ್ತಾಯಿಸುವುದು, ಈ ಮೂಲಕ ಮುಷ್ಕರ ಮುರಿಯಲು ಪ್ರಯತ್ನಿಸುತ್ತಿದ್ದಾರೆ. ಕಾರ್ಮಿಕರಲ್ಲಿ ವರ್ಗಪ್ರಜ್ಞೆ ಮೂಡಿಸಲು ಸದಾ ಪ್ರಯತ್ನಿಸುತ್ತಿರುವ ಸಿಐಟಿಯು ಸಂಘಟನೆಯ ಅಡಿಯಲ್ಲಿ ಸಂಘಟಿತರಾಗಿರುವ ಕಾರ್ಮಿಕರು ಎಂದೂ ಇಂತಹ ಆಸೆ, ಆಮಿಷ, ಬೆದರಿಕೆಗಳಿಗೆ ಮಣಿಯುವುದಿಲ್ಲವೆಂದು ಇತಿಹಾಸದ ಅನೇಕ ಹೋರಾಟಗಳು ಸೂಚಿಸುತ್ತವೆ. ವಿಕ್ರಾಂತ್ ಕಾರ್ಮಿಕ ಎಲ್ಲವನ್ನು ಎದುರಿಸಿ ನಿಲ್ಲುತ್ತಾರೆಂದು ಮಾಲೀಕ ಅರಿಯಬೇಕಾಗಿದೆ.

ಭಚೂರಿಯ ವೇತನ ಎಷ್ಟುಗೊತ್ತೆ?

"ಕಾರ್ಮಿಕರಿಗೆ ಈಗ ಕೊಡುತ್ತಿರುವ ವೇತನ ಅಧಿಕವಾಗಿದೆ. ಕಾರ್ಮಿಕ ವೆಚ್ಚವು ದೇಶದ ಇತರ ಕಾರ್ಖಾನೆಗಳ ಕಾರ್ಮಿಕರ ವೆಚ್ಚಕ್ಕಿಂತ ಅಧಿಕ" ಎಂದು ಆಡಳಿತ ಮಂಡಳಿ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದೆ. ಕಳೆದ ಮೂರುನಾಲ್ಕು ವರ್ಷಗಳಲ್ಲಿ ಅಗತ್ಯವಸ್ತುಗಳ ಬೆಲೆಗಳು ತುಟ್ಟಿಯಾಗಿವೆ. ಅಡಿಗೆ ಅನಿಲ, ಪೆಟ್ರೋಲ್, ಸೀಮೆಎಣ್ಣೆ, ಸಾರಿಗೆ, ವಿದ್ಯಾಭ್ಯಾಸ ಎಲ್ಲದರ ದರಗಳ ಏರಿಕೆಯಿಂದಾಗಿ ಜನರ ಜೀವನವೆಚ್ಚ ಅಧಿಕವಾಗಿದೆ. ವೇತನ ಹೆಚ್ಚಳದಿಂದ ಮಾತ್ರ ಕಾರ್ಮಿಕರು ಇದನ್ನು ಸರಿದೂಗಿಸಬಹುದಷ್ಟೆ.

ಕಾರ್ಮಿಕರಿಗೆ ಕೊಡುವ ವೇತನ ಹೆಚ್ಚು ಎಂದು ಹೇಳುವ ಆಡಳಿತ ಮಂಡಳಿ ತನ್ನ ಅಧಿಕಾರಿಗಳಿಗೆ ಕೊಡುತ್ತಿರುವ ವೇತನ ಎಷ್ಟು ಗೊತ್ತೆ? ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾದ ಭಚೂರಿಯಾದವರಿಗೆ ತಿಂಗಳಿಗೆ 1 ಲಕ್ಷದ 50 ಸಾವಿರ ರೂ ವೇತನ, ಮನೆ ಬಾಡಿಗೆಗೆ ಹತ್ತಾರು ಸಾವಿರ, ಕಾರು, ಕಾರಿಗೆ ಪೆಟ್ರೋಲ್ ಖರ್ಚು, ಕಾರು ಚಾಲಕನಿಗೆ ವೇತನ ಇನ್ನಿತರ ಸೌಲಭ್ಯಗಳಿವೆ. (ಐ.ಎ.ಎಸ್. ಅಧಿಕಾರಿಗಳ ವೇತನ 30 ರಿಂದ 35 ಸಾವಿರ ರೂ ಮಾತ್ರ) ಇದಲ್ಲದೆ ಭಚೂರಿಯವರಿಗೆ ಲಾಭಾಂಶದಲ್ಲಿ 100 ರೂಗೆ 50 ಪೈಸೆ ಕಮಿಶನ್ ಸಿಗುತ್ತಿದೆ. ಕಾರ್ಖಾನೆಯ ಹಣದಲ್ಲೆ ವಿದೇಶಿ ಪ್ರವಾಸಕ್ಕೆ ಲಕ್ಷಾಂತರ ರೂ ಖರ್ಚು. ಕಾರ್ಮಿಕರಿಗೆ ವೇತನ ಹೆಚ್ಚು ಎಂದು ಹೇಳುವ ಭಚೂರಿಯಾರವರೇ ನೀವೇಕೆ ಇಷ್ಟೊಂದು ಹಣ ಲೂಟಿ ಮಾಡುತ್ತೀರಿ ಎಂದು ಕಾರ್ಮಿಕರು ಪ್ರಶ್ನಿಸುತ್ತಿದ್ದಾರೆ.

ನೀರಿನ ತೆರಿಗೆ ಬಾಕಿ 4.5 ಕೋಟಿ ರೂ.

ವಿಕ್ರಾಂತ್ ಟೈರ್ಸ್ ಕಂಪೆನಿ ಕೋಟ್ಯಾಂತರ ರೂ. ಲಾಭ ಗಳಿಸುತ್ತಿದ್ದರೂ ಸರ್ಕಾರದ ಇಲಾಖೆಗಳಿಗೆ ಪಾವತಿಸಬೇಕಾದ ಹಣವನ್ನು ಸಂದಾಯ ಮಾಡಿಲ್ಲವೆಂದರೆ ನಿಮಗೆ ಆಶ್ಚರ್ಯವಾಗುತ್ತದೆಯೇ. ಬಂಡವಾಳ ಶಾಹಿಗಳ ಗುಣಗಳನ್ನು ಸ್ವಲ್ಪವಾದರೂ ತಿಳಿದಿದ್ದರೆ, ಅಂತಹ ಸುದ್ದಿ ಆಶ್ಚರ್ಯಕರವಾಗುವುದಿಲ್ಲ. ಕಂಪೆನಿ ತಾನು ಬಳಸಿಕೊಂಡ ನೀರಿನ ತೆರಿಗೆ ಬಾಕಿ 4.5 ಕೋಟಿ ರೂ. ಮೈಸೂರಿನ ಜಲಮಂಡಳಿಯ ಬಾಕಿದಾರರಲ್ಲಿ ಮೊದಲಿಗರು. □

WTO ಉರುಳಿನಿಂದ ಉಳಿಯಲಾಗದೆ?

ಮುಕ್ತ ಆಮದು ನೀತಿಯಿಂದಾಗಿ ಭಾರತದ ರೈತರು ಬೆಳೆದ ಕೃಷಿ ಉತ್ಪನ್ನಗಳ ಬೆಲೆಗಳ ತೀವ್ರ ಕುಸಿತಕ್ಕೆ ಕಾರಣವಾದ ಅಂಶಗಳಲ್ಲಿ ಪ್ರಮುಖವಾದದ್ದು ಮತ್ತು ಈಗಾಗಲೇ WTO ಒಪ್ಪಂದದಲ್ಲಿ ಮುಕ್ತ ಆಮದು ತಡೆಗಟ್ಟಲು ಇರುವಂತಹ ಕೆಲವಾದರೂ ಅವಕಾಶಗಳನ್ನು ಸರಕಾರವು ಸಮರ್ಥವಾಗಿ ಉಪಯೋಗಿಸಿಕೊಳ್ಳದಿರುವುದೂ ಬೆಲೆ ಕುಸಿತಕ್ಕೆ ಕಾರಣವಾಗಿದೆ.

ಹಾಗಾದರೆ ಮಾಡಬೇಕಾಗಿರುವುದೇನು ?

. ಭಾರತದ ಬ್ಯಾಲೆನ್ಸ್ ಆಫ್ ಪೇಮಂಟ್(Balance of paument) ಉತ್ತಮ ಸ್ಥಿತಿಯಲ್ಲಿದೆ ಎಂದು ಕೃಷಿ ಉತ್ಪನ್ನಗಳಿಗೆ ಮುಕ್ತ ಆಮದಿಗಿರುವ ಅವಕಾಶ ರದ್ದು ಮಾಡುವುದನ್ನು ತಪ್ಪಿಸಿ ಕೃಷಿ ಉತ್ಪನ್ನಗಳ

ಮಾರುತಿಮಾನ್ಪಡೆ - ಕೋದಂಡ ರಾಂ

ಪ್ರಮಾಣಾತ್ಮಕ ನಿರ್ಬಂಧವನ್ನು ಉಳಿಸಿಕೊಳ್ಳಲು ಸರಕಾರ ಪ್ರಯತ್ನ ಪಡಬೇಕು. ಇದಕ್ಕೆ ಭಾರತದ ತಲಾ ಆದಾಯ ಪರಿಗಣಿಸುವಂತಾಗಬೇಕು.

. ಮುಂದುವರಿದ ದೇಶಗಳು ತಮ್ಮ ಆಮದು ತೆರಿಗೆಯನ್ನು ಕಡಿಮೆಗೊಳಿಸದಂತೆ ಒತ್ತಾಯ ತರಬೇಕು.

. ಮುಂದುವರಿದ ದೇಶಗಳು ತಮ್ಮ ದೇಶದ ರೈತರಿಗೆ ವಿಪರೀತ ಸಹಾಯ ಧನ ನೀಡುವುದನ್ನು 'ಗ್ರೀನ್ ಬಾಕ್ಸ್', 'ಬ್ಲೂ ಬಾಕ್ಸ್' ಕ್ರಮಗಳನ್ನು ಅನುಸರಿಸಿ ಸಬ್ಸಿಡಿ ನೀಡುವುದರ ಮೂಲಕ ಅದನ್ನು ರಕ್ಷಿಸಿಕೊಳ್ಳುತ್ತಿವೆ. ಅದರ ಬದಲು ಆ ದೇಶಗಳ ತಲಾ ಆದಾಯದಂತೆ ಪ್ರಮಾಣೀಕರಿಸಿ ನಿರ್ದಿಷ್ಟ ಹಂತಕ್ಕೆ ನಿಗದಿ ಪಡಿಸುವಂತೆ ಒತ್ತಾಯ ಪಡಿಸುವುದು.

. ಅಭಿವೃದ್ಧಿಶೀಲ ರಾಷ್ಟ್ರಗಳು ಪರಸ್ಪರ ಒಪ್ಪಿದ ವಿಷಯಗಳಾಗಿ ಒಂದುಗೂಡಿಸಿ ಬಲಾಢ್ಯ ದೇಶಗಳ ಆಕ್ರಮಣಕಾರಿ ನೀತಿಗಳನ್ನು ತಡೆಯಲು ಭಾರತ ಸರಕಾರ ಮುತುವರ್ಜಿ ವಹಿಸಬೇಕು.

. ಆಮದು ತೆರಿಗೆಯನ್ನು ಶೇಕಡ ಶೇ. 300 ರಷ್ಟು ಹೆಚ್ಚಿಸಲು ಇರುವ ಅವಕಾಶ, ಆಂಟಿ ಡಂಪಿಂಗ್ ಡ್ಯೂಟಿ, ಕೌಂಟರ್ ವೀಲಿಂಗ್ ಡ್ಯೂಟಿ(ಸಬ್ಸಿಡಿ ನೀಡಿದಷ್ಟು ತೆರಿಗೆ ಹಾಕಲು ಇರುವ ಅವಕಾಶ)ಗಳನ್ನು ಉಪಯೋಗಿಸಿಕೊಂಡು ವಿದೇಶದಿಂದ ಆಮದಾಗುವ ಕೃಷಿ ಉತ್ಪನ್ನಗಳನ್ನು ತಡೆಯಬಹುದಾಗಿದೆ.

. ಭಾರತ ದೇಶವು ಪ್ರತ್ಯೇಕ ಆಹಾರ ಭದ್ರತೆ, ಗ್ರಾಮೀಣ ಉದ್ಯೋಗ ಮತ್ತು ಉದ್ಯೋಗ ಅಭಿವೃದ್ಧಿ ಬಾಕ್ಸ್ ಸೃಷ್ಟಿಸುವಂತೆ ಒತ್ತಾಯ ಹೇರಬೇಕು. ಆ ಮೂಲಕ ಭಾರತದ ಸುಮಾರು 70 ಕೋಟಿ ಜನತೆಯ ಹಿತ ಕಾಪಾಡಲು ಸಾಧ್ಯ.

ಮೇಲಿನ ಈ ಒತ್ತಾಯಗಳನ್ನೆಲ್ಲ ಈಗಾಗಲೇ ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕಿಸಾನ್‌ಸಭಾಗಳು ಹಲವಾರು ಕಾರ್ಯಕ್ರಮಗಳ ಮೂಲಕ ಮಾಡುತ್ತಲೇ ಬಂದಿದೆ. ಆದರೆ ದಿನ ಬೆಳಗಾದರೆ ಕೋಮು ಜ್ವಾಲೆ ಎಬ್ಬಿಸಿ, ಜನರ ಮಿದುಳನ್ನು ದಿಕ್ ತಪ್ಪಿಸುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮಾತ್ರ ರೈತರ ಹಿತ ರಕ್ಷಿಸುವಂತಹ ಈ ಯಾವ ಅಂಶಗಳನ್ನು ಜಾರಿ ಮಾಡಲು ಸಿದ್ಧವಿಲ್ಲ. ಇದಕ್ಕೆ ಒಂದೇ ಉದಾಹರಣೆ ನೋಡಬಹುದು. ಅಮೇರಿಕವು ತನ್ನ ದೇಶಕ್ಕೆ ಆಮದಾಗುತ್ತಿರುವ ಶೇಂಗಾ ಎಣ್ಣೆಯ ಮೇಲೆ ಶೇಕಡ ಶೇ.173 ರಷ್ಟು ತೆರಿಗೆ ಹಾಕಿದೆ. ಆದರೆ ಭಾರತಕ್ಕೆ ಆಮದಾಗುವ 'ಪಾಮ್ ಆಯಿಲ್' ಮೇಲೆ ನಮ್ಮ ಸರ್ಕಾರ ಕೇವಲ ಶೇಕಡ 25 ರಷ್ಟು ಮಾತ್ರ ತೆರಿಗೆ ಹಾಕಿದೆ. ಹೇಗಿದೆ ಕೇಂದ್ರ ಸರ್ಕಾರದ 'ಸ್ವದೇಶಿ ರೈತ ರಕ್ಷಣೆ'

ಭಾರತ ಸರಕಾರದ ಆಹಾರ ನಿಗಮವು ಆಹಾರ ಧಾನ್ಯಗಳ ಖರೀದಿ ಮಾಡುವ ಏಕೈಕ ಸಂಸ್ಥೆಯಾಗಿದೆ. ಈ ಸಂಸ್ಥೆಯನ್ನು ತೆಗೆದು ಹಾಕಿ ಸಾರ್ವಜನಿಕ ವಿತರಣಾ ವ್ಯವಸ್ಥೆ(PDS-ರೇಷನ್ ವ್ಯವಸ್ಥೆ)ಯನ್ನು ಖಾಸಗಿಯವರಿಗೆ ಮತ್ತು ವಿದೇಶಿ ಕಂಪನಿಗಳಿಗೆ ವಹಿಸಿಕೊಡಲು ಮುಂದಾಗಿದೆ. ಬೀಜ, ಕ್ರಿಮಿನಾಶಕ, ರಸಗೊಬ್ಬರಗಳ ಉತ್ಪಾದನೆ ಮತ್ತು ಮಾರಾಟವನ್ನು ಈಗಾಗಲೇ ಬಹುರಾಷ್ಟ್ರೀಯ ಕಂಪನಿಗಳು ಕೈವಶ ಮಾಡಿಕೊಂಡಿವೆ. ಜೀವ ತಂತ್ರಜ್ಞಾನವನ್ನು ಕೂಡ ಬಹುರಾಷ್ಟ್ರೀಯ ಕಂಪನಿಗಳಿಗೆ ವಹಿಸಲು ಭಾರತ ಸರ್ಕಾರ ಮುಂದಾಗಿದೆ.

ಮುಂದೇನು ?

ಹೀಗೆ ಕೇಂದ್ರ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ರೈತರ ಕತ್ತು ಕೊಯ್ಯುವಾಗಲೇ ಕರ್ನಾಟಕದ ಹೈಟೆಕ್ ಮನುಷ್ಯಕಾಂಗ್ರೆಸ್‌ನ ಎಸ್.ಎಂ.ಕೃಷ್ಣ ಅವರು ತಾವೇನು ಕಮ್ಮಿಯಿಲ್ಲ ಎನ್ನುವಂತೆ ಈಗಾಗಲೇ ಅನೇಕಾನೇಕ ರೈತವಿರೋಧಿ-ಜನವಿರೋಧಿ ನೀತಿಗಳನ್ನು ಜಾರಿಗೆ ತಂದಿರುವರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ದುಡಿವ ಜನರ ಕಣ್ಣಿಗೆ ಮಣ್ಣು, ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕುವಂತಹ ಎಲ್ಲಾ ಕುತಂತ್ರಗಳನ್ನು ಮಾಡುತ್ತ ಬರುತ್ತಿವೆ. ಬಡವರ ಮನೆಯ ಭಾಗ್ಯಜ್ಯೋತಿ-ಕುಟೀರ ಜ್ಯೋತಿಗಳನ್ನು ನಂದಿಸಲಾಗುತ್ತಿದೆ(ತೆಗೆದುಹಾಕಲಾಗುತ್ತಿದೆ). ರೇಷನ್ ಕಾರ್ಡ್‌ಗಳು ಬಡವರಿಗೆ ಸಿಗುತ್ತಿಲ್ಲ. ಆಶ್ರಯ ಮನೆಗಳ ಆಸರೆಯು ಮಹಡಿಯಿದ್ದವರಿಗೆ ಮಾತ್ರ ದಕ್ಕಿದೆ. ಕೆಲವು ಜನ ಬಡವರಿಗೆ ಮಾತ್ರ ಸಿಕ್ಕ ಆಶ್ರಯ ಮನೆಗಳು ಒಂದೇ ಮಳೆ-ಗಾಳಿ ಹೊಡೆತಕ್ಕೆ ಕುಸಿದು ಎಲುಬಿನ ಗೂಡಿನಂತೆ ಬಯಲಾಗಿ ನಿಂತಿವೆ.

ಒಟ್ಟಾರೆ ದುಡಿವ ಕೈಗಳಿಂದ ಭೂಮಿಯನ್ನು ಕಸಿದುಕೊಳ್ಳುವ ಮೂಲಕ ಉತ್ತರ ಕರ್ನಾಟಕದಲ್ಲಿ ಈ ಮೇಲಿನ ಎಲ್ಲ ರೀತಿಯ ಸಮಸ್ಯೆಗಳ ತಾಂಡವತೆ ಹುಟ್ಟುಹಾಕಲಾಗಿದೆ. ಒಂದೆಡೆ ಪೂರ್ತಿ ಗೊಳ್ಳದ ನೀರಾವರಿಗಳು, ಬಂದ ಹಣವನ್ನು ನುಂಗಿ ನೀರು ಕುಡಿವ ಗೆದ್ದವರು, ಭ್ರಷ್ಟ ಅಧಿಕಾರಿಗಳು. ಇನ್ನೊಂದೆಡೆ ಬೆಳೆದ ಬೆಳೆಗಳಿಗೆ ಸರಿಯಾದ ಬೆಂಬಲ ಬೆಲ ಸಿಗದ ಸಂಕಷ್ಟ, ಮತ್ತೊಂದೆಡೆ ಬದುಕಿನ ಬಂಡಿಯನ್ನು ತಳ್ಳಲೇಬೇಕಾದ ಅನಿವಾರ್ಯತೆ ಈ ಎಲ್ಲಾ ಕಷ್ಟಗಳ ಗೂಡಲ್ಲಿ ರೈತರು, ದುಡಿವ ಜನತೆ ಸಿಕ್ಕಿ ಒದ್ದಾಡುತ್ತಿರುವರು.

ಪರಿಸ್ಥಿತಿ ಹೀಗಿರುವಾಗ, ರಸ್ತೆಗೆ ಆಲೂಗಡ್ಡೆ, ಮೆಣಸಿನಕಾಯಿ, ಬತ್ತ, ಜೋಳ, ಮೆಕ್ಕೆಜೋಳ ಚೆಲ್ಲಿ ಪ್ರತಿಭಟಿಸಿದ ರೈತರು ಇನ್ನು ಮುಂದೆ ಫೆಬ್ರವರಿ **5,6,7 ರಂದು ದೇಶಾದ್ಯಂತ 'ಕೃಷಿ ಉಳಿಸಿ-ದೇಶ ರಕ್ಷಿಸಿ' ಎಂಬ ಘೋಷಣೆಯ** ಗುಟುರು ಹಾಕಿ ತೀವ್ರತರ ಹೋರಾಟಕ್ಕೆ ಸಜ್ಜಾಗಿದ್ದಾರೆ. ಎಲ್ಲೆಡೆ ರಸ್ತೆ ರೋಕೋ, ಜೈಲ್ ಭರೋ, ಪಿಕೆಟಿಂಗ್ ನಡೆಸಿ ಜನ ವಿರೋಧಿ, ರೈತ ವಿರೋಧಿ ಸರಕಾರಗಳಿಗೆ ಎಚ್ಚರಿಕೆಯ ಗಂಟೆ ಹೊಡೆಯಲು ತೀರ್ಮಾನಿಸಿದ್ದಾರೆ. ಅವರ ನೀತಿ ಬದಲಿಸಲು ಆಗ್ರಹಿಸುತಿದ್ದಾರೆ. ಬನ್ನಿ, ಈ ದೇಶಪ್ರೇಮಿ ಹೋರಾಟದಲ್ಲಿ ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ಕಾರ್ಮಿಕರು, ನೌಕರರು ಪಾಲ್ಗೊಳ್ಳುವ ಮೂಲಕ ಸಂಘಟನೆ ಮತ್ತು ಹೋರಾಟದ ಬಾವುಟವನ್ನು ಎತ್ತಿ ಹಿಡಿಯೋಣ.

ಉತ್ತಮ ಬೆಲೆ ಸಿಗದೇ ಟೊಮೊಟೋವನ್ನು ಬೀದಿಗೆಸೆಯುತ್ತಿರುವ ರೈತರು



ರೈತರ ಹೋರಾಟಕ್ಕೆ ಕಾರ್ಮಿಕರ ಬೆಂಬಲ

ಎಸ್.ಸೂರ್ಯನಾರಾಯಣ ರಾವ್

ಆಮದು ಶುಲ್ಕ ಕಡಿತಗೊಳಿಸಿ, ನಿರ್ಬಂದಗಳನ್ನು ತೆಗೆದು, ಹೊರದೇಶದ ಮಾಲುಗಳು ನಮ್ಮ ದೇಶದೊಳಗೆ ಬರುತ್ತಿವೆ. ದೇಶೀಯ ಕೈಗಾರಿಕೆಗಳಿಗೆ ಕೇಂದ್ರ ಸರ್ಕಾರ ಸಣ್ಣ ಕೈಗಾರಿಕೆಗಳಿಗಿದ್ದ ರಕ್ಷಣೆ ತೆಗೆದು ಲಕ್ಷಾಂತರ ಕೈಗಾರಿಕೆಗಳು ಮುಚ್ಚಿವೆ. ಈ ದೇಶದಲ್ಲಿ ಹೆಚ್ಚಿನ ಉದ್ಯೋಗ ಕೊಡುತ್ತಿದ್ದ ಸುಮಾರು 18 ಲಕ್ಷ ಸಣ್ಣ ಕೈಗಾರಿಕೆಗಳು ಮುಚ್ಚಿರುವುದರಿಂದಾಗಿ ನಿರುದ್ಯೋಗ ಹೆಚ್ಚು ಪ್ರಮಾಣದಲ್ಲಿ ಬೆಳೆದಿದೆ. 2001, ಏಪ್ರಿಲ್ ನಿಂದ ತೆಗೆಯಬೇಕಾಗಿದ್ದ WTO (ವಿಶ್ವ ವ್ಯಾಪಾರ ಸಂಘಟನೆ) ನಿರ್ಬದಗಳನ್ನು ಅವಧಿಗೆ ಮುಂಚೆ ತೆಗೆದು ರೈತರು ಎರಡು ರೀತಿಯ ತೊಂದರೆ ಅನುಭವಿಸುವಂತಾಗಿದೆ.

ಒಂದೆಡೆ ಅಡಿಕೆ ತೆಂಗು, ಕಾಫಿ, ಗೋಧಿ, ಅಕ್ಕಿ, ಎಣ್ಣೆ, ಹಾಲಿನ ಪುಡಿ ಮಾಂಸ ಇತ್ಯಾದಿಗಳು ಹೇರಳವಾಗಿ ಇಲ್ಲಿಗೆ ಬಂದು ಇವುಗಳ ಬೆಲೆ ಕುಸಿದಿದೆ. ಇನ್ನೊಂದೆಡೆ ರಸಾಯನಿಕ ಗೊಬ್ಬರ, ಕ್ರಿಮಿನಾಶಕ ಬಿತ್ತನೆ ಬೀಜ ಇತ್ಯಾದಿಗಳ ಬೆಲೆ ಹೆಚ್ಚಾಗಿ ಉತ್ಪಾದನಾ ಖರ್ಚು ಹೆಚ್ಚಾಗಿ ರೈತರು ಸಂಕಷ್ಟಕ್ಕೊಳಗಾಗಿದ್ದು, ಸಾಲ ತೀರಿಸಲಾಗದೆ ಅನೇಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಲೋಕ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದರೂ ವಾಜಪೇಯಿ ಸರ್ಕಾರ ರೈತರ ರಕ್ಷಣೆಗೆ ಮುಂದೆ ಬರುತ್ತಿಲ್ಲ.

ನಮ್ಮ ರಾಜ್ಯದ ಹೊಸ ದುರ್ಗದಲ್ಲಿ ರೈತರು ತೆಂಗಿನ ಕಾಯಿ ರಾಶಿಹಾಕಿ ಸುಟ್ಟಿದ್ದಾರೆ, ಟಮೋಟೋ, ಈರುಳ್ಳಿ ರಸ್ತೆಗೆ ಚೆಲ್ಲಿದ್ದಾರೆ, ಮೆಕ್ಕೆ ಜೋಳ, ಅಕ್ಕಿ ಬೆಲೆ ಕುಸಿತವಾಗಿ ಕೊಪ್ಪಳ ಗಂಗಾವತಿ ರೈತರು ಹೋರಾಟ ಲಾಠಿಚಾರ್ಜು ಎದುರಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಆಲೂಗೆಡ್ಡೆ ಬೆಲೆ ಕುಸಿತದಿಂದಾಗಿ ಮತ ಪ್ರದರ್ಶನ ನಡೆದಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಗ್ರಾಮಾಂತರ ಪ್ರದೇಶದಲ್ಲಿ ರೈತರ ಮೇಲೆ ಇಷ್ಟು ದೊಡ್ಡದಾಳಿ ಈಗ ನಡೆದಿದೆ. ಶ್ರೀಮಂತ ರೈತರೂ ಸಹ ಈ ಪರಿಸ್ಥಿತಿಯಿಂದ ಪಾರಾಗಲು ಕಷ್ಟಪಡುತ್ತಿದ್ದಾರೆ. ಪಂಜಾಬಿನಲ್ಲಿ ರೈತರು ರೈಲು ತಡೆಹಿಡಿದ್ದಾರೆ. ಇವೆಲ್ಲವುಗಳನ್ನು ಗಮನಿಸಿ ನಮ್ಮ ದೇಶದ ಅನೇಕ ಸಂಘಟನೆಗಳು ಈ ರೈತರ ಸಂಕಷ್ಟಗಳಿಗೆ ಪರಿಹಾರ ಕಾಣಲು ನಂ. 30 ರಂದು ದೆಹಲಿಯಲ್ಲಿ ಬೃಹತ್ ರ್‍ಯಾಲಿ ನಡೆಸಿದರು. ಫೆಬ್ರವರಿ 5-6-7 ರಂದು ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಪ್ರತಿಭಟಿಸಿ, ಆಮದು ನಿರ್ಬಂದ ತೆಗದಿರುವುದನ್ನು ಪುನಃ ಪರಿಶೀಲಿಸಬೇಕು. ಆಮದು ಶುಲ್ಕ ಶೇ. 300 ರಷ್ಟು ಏರಿಸಬೇಕು. ರೈತರ ಫಸಲನ್ನು ಕೇಂದ್ರ ಆಹಾರ ನಿಗಮದ ಮೂಲಕ ನ್ಯಾಯವಾದ ಬೆಲೆಯಲ್ಲಿ ಖರೀದಿಸಲು ಒತ್ತಾಯಿಸುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿಯೂ ಕರ್ನಾಟಕ ಪ್ರಾಂತ ರೈತ ಸಂಘ ಮತ್ತಿತರ ಸಂಘಟನೆಗಳು ಈ ಹೋರಾಟ ಹಮ್ಮಿಕೊಂಡಿವೆ. ಈ ಬಗ್ಗೆ ಮಂಗಳೂರು ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಮಾವೇಶಗಳನ್ನು ಸಹ ನಡೆಸಲಾಗಿದೆ. ನಮ್ಮ ದೇಶ ಸ್ವಾತಂತ್ರ್ಯದಾರರೂ ಸಹ ಭೂಮಾಲೀಕ ಬಂಡವಾಳಿಗರ ಶೋಷಣೆಯಲ್ಲಿ ನರಳುತ್ತಿದೆ. ಕಾರಣ ಅವರ ಹಿಡಿತದಲ್ಲಿ ಸರ್ಕಾರಗಳು ನಡೆಯುತ್ತಿವೆ. ಅದರಿಂದಾಗಿ ಜನರ ಸಮಸ್ಯೆಗಳನ್ನು ನಿವಾರಣೆ ಮಾಡಲು ಅಡ್ಡಿಯಾಗಿದೆ. ಅಭಿವೃದ್ಧಿ ಕುಂಠಿತವಾಗುತ್ತಿದೆ. ಈ ಶೋಷಣೆ ವಿರುದ್ಧ ಹೋರಾಡ ಬೇಕಾದರೆ ಎಲ್ಲಾದುಡಿಯುವ ಜನ ಜೊತೆಗೂಡ ಬೇಕಾಗಿದೆ. ಅದರಲ್ಲಿಯೂ ಅದರ ನಾಯಕತ್ವವನ್ನು ಕಾರ್ಮಿಕ ವರ್ಗ ತೆಗೆದುಕೊಳ್ಳಬೇಕು. ದೇಶದೆಲ್ಲೆಡೆ ರೈತರಲ್ಲಿರುವ ಅತೃಪ್ತಿಯನ್ನು ಮನಗಂಡ, ಹೈದರಬಾದಿನಲ್ಲಿ ನಡೆದ 10ನೇ ಸಿಐಟಿಯು ಸಮ್ಮೇಳನ ರೈತ ಹೋರಾಟಕ್ಕೆ ಕಾರ್ಮಿಕರು ಸಕ್ರಿಯ ಬೆಂಬಲ ನೀಡಲು ತೀರ್ಮಾನಿಸಲಾಗಿದೆ. ಹಾಗೆ ವಿದ್ಯಾರ್ಥಿ ಯುವಜನ ಮಹಿಳೆಯರೂ ತಿರ್ಮಾನಿಸಿದ್ದಾರೆ. ಬೇರೆ ವಿಭಾಗದ ಜನರು ಮುಂದೆ ಬಂದಿರುವುದು ನಮ್ಮ ದೇಶದ ರಾಜಕಾರಣದಲ್ಲಿ ಒಂದು ಬದಲಾವಣೆ ತರಲು ಸಹಾಯಕವಾಗುತ್ತದೆ.

ಫೆಬ್ರವರಿ 5 ರಿಂದ 7ರ ವರಗಿನ ರೈತ ಹೋರಾಟ ನಮ್ಮ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದು ಪಿಕೆಟಿಂಗ್, ಬಂಧನ ಆದರೆ, ನಮ್ಮ ರಾಜ್ಯದ ರಾಜಕೀಯ ಬೆಳವಣಿಗೆಯನ್ನು ರೈತ ಕಾರ್ಮಿಕರ ಪರವಾಗಿ ಕೊಂಡೊಯ್ಯಲು ಸಹಾಯವಾಗುತ್ತದೆ. ಜನರ ಐಕ್ಯತೆ ಪ್ರಜಾಪ್ರಭುತ್ವವನ್ನು ಬೆಳೆಸಲು ವಾಜಪೇಯಿ ಸರ್ಕಾರದ ಆರ್ಥಿಕ ಹಾಗೂ ಕೋಮುವಾದಿ ನೀತಿ ಎದುರಿಸಲು ಸಹಾಯಕವಾಗುತ್ತದೆ. ಸಿಪಿಐ(ಎಂ) ರಾಜ್ಯ ಸಮಿತಿಯು ಇದನ್ನು ಗಂಭೀರವಾಗಿ ಪರಿಗಣಿಸಿ ಬೆಂಬಲಿಸಿದೆ.

ಪ್ರಚಾರಾಂದೋಲನದಲ್ಲಿ ಕೇಂದ್ರ ಸರ್ಕಾರದ ರೈತ ಕೂಲಿಕಾರ, ಕಾರ್ಮಿಕ ವಿರೋಧಿ ನೀತಿ ಜೊತೆಗೆ ಕೋಮುವಾದಿ ಶಕ್ತಿಗಳ ಬಗ್ಗೆ ಜನತೆಯನ್ನು ಎಚ್ಚರಿಸಿ, ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸುವಂತೆ, ಒತ್ತಾಯಿಸಬೇಕಿದೆ. ರೈತ ಅಭಿವೃದ್ಧಿಯಾಗದೇ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಈ ಕಾರಣದಿಂದಾಗಿ ಎಲ್ಲಾ ದೇಶ ಪ್ರೇಮಿಗಳು ವಿದ್ಯಾರ್ಥಿ ಯುವಜನ, ಮಹಿಳೆಯರು, ನೌಕರರು ಈ ಮಹತ್ವದ ಹೋರಾಟದಲ್ಲಿ ಭಾಗವಹಿಸಿ ವಾಜಪೇಯಿ ಸರ್ಕಾರದ ಆರ್ಥಿಕ ನೀತಿಗಳನ್ನು ಬದಲಾಯಿಸಲು ಕೋಮುವಾದಿ ಶಕ್ತಿಗಳನ್ನು ತಡೆಗಟ್ಟಲು ಮುಂದೆ ಬರುತ್ತಾರೆಂಬ ವಿಶ್ವಾಸವಿದೆ.

21ನೇ ಶತಮಾನ ಸಮಾಜವಾದದ ಶತಮಾನ

ವಿಶ್ವದೆಲ್ಲೆಡೆ ಕ್ರಾಂತಿಕಾರಿ ಆಂದೋಲನ ಬೆಳವಣಿಗೆ ನೀಡುತ್ತಿರುವ ಆತ್ಮವಿಶ್ವಾಸದೊಂದಿಗೆ ನಾವು 21ನೇ ಶತಮಾನಕ್ಕೆ ಪ್ರವೇಶಿಸುತ್ತಿದ್ದೇವೆ. (ನಮ್ಮ ಶತ್ರುಗಳು ಹೇಳುತ್ತಿರುವಂತೆ ಇದು ಆಧಾರವಿಲ್ಲದ ಆತ್ಮವಿಶ್ವಾಸವೇನಲ್ಲ). ಇಂತಹ ಸಂದರ್ಭದಲ್ಲಿ ನಾವು ಇತಿಹಾಸವನ್ನು ಸೇರುತ್ತಿರುವ 20ನೇ ಶತಮಾನದತ್ತ ಹಿಂದಿರುಗಿ ನೋಡದಿರಲು ಸಾಧ್ಯವಿಲ್ಲ. ಇದೊಂದು ವ್ಯರ್ಥ ಕಸರತ್ತೂ ಅಲ್ಲ. ಏಕೆಂದರೆ ಮುಂಬರುವ ವರ್ಷಗಳಲ್ಲಿ ಏನಾಗಬಹುದು ಎಂದು ಮುಂಗಾಣಬೇಕಾದರೆ 20ನೇ ಶತಮಾನದ ಪ್ರಮುಖ ಘಟನೆಗಳನ್ನು ನೆನಪಿಸಿಕೊಳ್ಳುವುದು ಅಗತ್ಯ.

ಹರ್ಕಿಶನ್ ಸಿಂಗ್ ಸುರ್ಜಿತ್



20ನೇ ಶತಮಾನದ ಅತ್ಯಂತ ಮಹತ್ವಪೂರ್ಣ ಘಟನೆಯೆಂದರೆ 1917 ರ ಮಹಾನ್ ಅಕ್ಟೋಬರ್ ಕ್ರಾಂತಿ. ಇದು ಮಾರ್ಕ್ಸ್ ಮತ್ತು ಎಂಗಲ್ಸ್ ಪ್ರತಿಪಾದಿಸಿದ, ನಂತರ ಲೆನಿನ್ ಬೆಳೆಸಿದ ವಿಚಾರಗಳನ್ನು ಅನುಷ್ಠಾನಕ್ಕೆ ತಂದ ಕ್ರಾಂತಿ. ಮಾರ್ಕ್ಸ್‌ವಾದ ಆರಾಮಕುರ್ಚಿಯಲ್ಲಿ ಕುಳಿತು ನಡೆಸಿದ ಚಿಂತನೆಯಲ್ಲ. 'ವರ್ಗ ಎಂಬುದಾಗಲೀ, ವರ್ಗ ಹೋರಾಟವಾಗಲಿ ನಾನು ನಿರ್ಮಿಸಿದ್ದಲ್ಲ" ಎನ್ನುತ್ತಿದ್ದರು ಮಾರ್ಕ್ಸ್. ಇವು 19ನೇ ಶತಮಾನದಲ್ಲಿನ ಬಂಡವಾಳಶಾಹಿ ಬೆಳವಣಿಗೆಯ ಸಹಜ ಪರಿಣಾಮ. ಈ ವರ್ಗ ಹೋರಾಟದ ಫಲವಾಗಿ ಬಂಡವಾಳಶಾಹಿಯನ್ನು ಕಿತ್ತೆಸೆದು ಅದರ ಜಾಗದಲ್ಲಿ ಒಂದು ಶೋಷಣಾರಹಿತ ಸಮಾಜ ಬರುತ್ತದೆ ಎಂದು ತೋರಿಸಲಷ್ಟೇ ನಾನು ಪ್ರಯತ್ನಿಸಿದ್ದೇನೆ ಎಂದಿದ್ದರು ಮಾರ್ಕ್ಸ್.

ಅಂದರೆ ಮಾರ್ಕ್ಸ್, ಅವರ ಕಾಲದ ಇತರ ಚಿಂತಕರಂತೆ ಯಾವುದೇ ತತ್ವಶಾಸ್ತ್ರವನ್ನು ಕಂಡು[illegible]ಯುಲಿಲ್ಲ, ನಿರ್ದಿಷ್ಟ ಪರಿಸ್ಥಿತಿಯ ನಿರ್ದಿಷ್ಟ ಅಧ್ಯಯನದಿ[illegible] ಕೆಲವು ತೀರ್ಮಾನಗಳನ್ನು ತೋರಿಸಿಕೊಟ್ಟರು. ಬ[illegible]ಳಶಾಹಿಯನ್ನು ಕಿತ್ತೆಸೆದು ಇಡೀ ಸಮಾಜಕ್ಕೆ [illegible]ಷಣೆ, ದಮನದಿಂದ ಮುಕ್ತಿ ನೀಡಬಲ್ಲ ವರ್ಗವೆಂದ[illegible] ಶ್ರಮಜೀವಿ ವರ್ಗ ಎಂದೂ ಅವರು ಹೇಳಿದರು.

ಈ ಮೊದಲು ಹೇಳಿದಂತೆ ಮಾರ್ಕ್ಸ್ ಕೇವಲ ದೃಷ್ಟಾರರಾಗಿರಲಿಲ್ಲ. ಅವರು ಅದಕ್ಕಾಗಿ ದುಡಿದರು ಕೂಡಾ. ಕಮ್ಯುನಿಸ್ಟ್ ಲೀಗ್‌ನಿಂದ ಹಿಡಿದು ಅಂತರ್‌ರಾಷ್ಟ್ರೀಯ ದುಡಿಯುವ ಜನರ ಸಂಘ(ಪ್ರಥಮ ಅಂತರ್‌ರಾಷ್ಟ್ರೀಯ) ದವರೆಗೆ ಅವರು ವಿವಿಧ ದೇಶಗಳ ಕಾರ್ಮಿಕ ವರ್ಗವನ್ನು ಒಂದು ಐಕ್ಯ ಶಕ್ತಿಯಾಗಿ ಬೆಳೆಸಲು ಪ್ರಯತ್ನಿಸಿದ್ದರು. ಅವರ ಮರಣದ ನಂತರ ಎಂಗೆಲ್ಸ್ ಇದ್ದಾಗ 1889 ರಲ್ಲಿ ಸ್ಥಾಪಿಸಿದ ಎರಡನೇ ಅಂತರ್‌ರಾಷ್ಟ್ರೀಯ ಸಮಾಜವಾದದ ವಿಚಾರಗಳನ್ನು ಹರಡಲು ನೆರವಾಯಿತು. ಲೆನಿನ್, ರೋಸಾ ಲಕ್ಸಂಬರ್ಗ್, ಪ್ಲೆಖನೊವ್, ಕೌಟ್ಸಕೀ ಮುಂತಾದವರು ಈ ಗರಡಿಯಲ್ಲಿ ತರಬೇತು ಪಡೆದವರು.

1905 ರ ಕ್ರಾಂತಿ

ಎಂಗೆಲ್ಸ್ ಮರಣದ ಒಂದು ದಶಕದೊಳಗೆ ಅಂದರೆ 1905 ರಲ್ಲಿ ನಡೆದ ಕ್ರಾಂತಿ ಯುರೋಪಿನ ಆಳುವ ವರ್ಗಗಳನ್ನೆಲ್ಲಾ ನಡುಗಿಸಿ ಬಿಟ್ಟಿತು. ಈ ಕ್ರಾಂತಿಗೆ ಮಾರ್ಗದರ್ಶನ ನೀಡುವಲ್ಲಿ ಲೆನಿನ್ ಮತ್ತು ಅವರ ನೇತೃತ್ವದ ರಶ್ಯನ್ ಸೋಶಲ್ ಡೆಮಾಕ್ರಾಟಿಕ್‌ಲೇಬರ್ ಪಾರ್ಟಿ(ಬೊಲ್ಶೆವಿಕ್ ಪಾರ್ಟಿ) ಪ್ರಮುಖ ಪಾತ್ರ ವಹಿಸಿದ್ದರು. ನಿಜ, ಈ ಕ್ರಾಂತಿ ವಿಫಲವಾಯಿತು. ರಶ್ಯನ್ ಕಾರ್ಮಿಕ ವರ್ಗ ಮತ್ತು ಇತರ ಶ್ರಮಜೀವಿ ಜನತೆ ಅಪಾರ ತ್ಯಾಗ-ಬಲಿದಾನ ಕೊಟ್ಟರೂ ವಿಫಲವಾಯಿತು. ಆದರೆ ಇದು 12 ವರ್ಷಗಳ ನಂತರ ನಡೆದ ಘಟನೆಗೆ ರಂಗತಾಲೀಮು ಆಗಿತ್ತು. ಈ ಕ್ರಾಂತಿಯ ಸಮಯದಲ್ಲಿ ರಶ್ಯಾದೆಲ್ಲೆಡೆ ವಿವಿಧ ಹಂತಗಳಲ್ಲಿ ಸೋವಿಯತ್‌ಗಳು ಹುಟ್ಟಿಕೊಂಡವು! ಇವನ್ನು ಲೆನಿನ್‌ರಾಗಲೀ, ಬೊಲ್ಶೆವಿಕ್ ಪಕ್ಷವಾಗಲೀ ನಿರ್ಮಿಸಿದ್ದಲ್ಲ, ಕ್ರಾಂತಿಕಾರಿ ಜನಸಮೂಹಗಳು ತಾವೇ ನಿರ್ಮಿಸಿದ್ದು. ಲೆನಿನ್‌ರ ಜನಸಮೂಹಗಳು ತಾವೇ ನಿರ್ಮಿಸಿದ್ದು. ಲೆನಿನ್ನರ ಮಹಾನತೆಯೆಂದರೆ ಅವರು ಈ ಸೋವಿಯತ್‌ಗಳಲ್ಲಿ ಕಾರ್ಮಿಕ ವರ್ಗದ ಪ್ರಭುತ್ವ ಶಕ್ತಿಯ ಮೂಲವನ್ನು ಕಂಡರು.

ಲೆನಿನ್ ಈ ಕ್ರಾಂತಿಯ ಅನುಭವದಿಂದ ಇನ್ನೊಂದು ತೀರ್ಮಾನಕ್ಕೆ ಬಂದರು - ಬೂರ್ಜ್ವಾ ವರ್ಗಕ್ಕೆ ಆ ವೇಳೆಗೆ ಪಾಳೆಯಗಾರಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಅಳಿಸಿಬಿಡುವ ಪ್ರಜಾಪ್ರಭುತ್ವ ಕ್ರಾಂತಿಗೆ ನೇತೃತ್ವ ನೀಡುವ ಶಕ್ತಿ ಉಳಿದಿರಲಿಲ್ಲ. ಈ ಕೆಲಸವನ್ನು ಕಾರ್ಮಿಕ ವರ್ಗವೇ ಮಾಡಬೇಕು, ಆ ಮೂಲಕ ಸಮಾಜವಾದಿ ಕ್ರಾಂತಿಗೆ ಹಾದಿಮಾಡಿಕೊಡಬೇಕು. ಈ ವಿಚಾರವನ್ನು ಲೆನಿನ್ ತಮ್ಮ 'ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಸೋಶಲ್ ಡೆಮಾಕ್ರಸಿಯ ಎರಡು ತಂತ್ರಗಳು' ಎಂಬ ಕಿರುಪುಸ್ತಕದಲ್ಲಿ ವಿಶದಪಡಿಸಿದರು. ಇದು ಹಾಗೂ ಅವರ ಇನ್ನೊಂದು ಕೃತಿ 'ಏನು ಮಾಡಬೇಕು'(What is to be Done) ಕಾರ್ಮಿಕವರ್ಗದ ಪಕ್ಷದ ಮೂಲಭೂತ ನೀತಿಗಳನ್ನು ಹಾಕಿಕೊಟ್ಟಿರುವ ಕೃತಿಗಳು.

1914 ರಲ್ಲಿ ಮೊದಲ ಮಹಾಯುದ್ಧ ಆರಂಭವಾಯಿತು. ಆಗ ಮಾರ್ಕ್ಸ್‌ವಾದದ ಕ್ರಾಂತಿಕಾರಿ ಸ್ವರೂಪವನ್ನು ಕಾಪಾಡಿಕೊಳ್ಳುವ ಗುರುತರ ಜವಾಬ್ದಾರಿ ಲೆನಿನ್ನರ ಮೇಲೆ ಬಿತ್ತು.

ತಂತಮ್ಮ ದೇಶದ ಬೂರ್ಜ್ವಾ ವರ್ಗದ ಬೆಂಬಲಕ್ಕೆ ನಿಂತು ಸಂಕುಚಿತ ಘೋಷಣೆಗಳನ್ನೆತ್ತಲಾರಂಭಿಸಿದವು. ಆಗ ಲೆನಿನ್ ಇದು ಸಾಮ್ರಾಜ್ಯಶಾಹಿಗಳು ವಿಶ್ವವನ್ನು ತಮ್ಮ-ತಮ್ಮೊಳಗೆ ಹಂಚಿಕೊಳ್ಳಲು ಮಾಡುತ್ತಿರುವ ಮಹಾಯುದ್ಧ ಎಂದು ತೋರಿಸಿಕೊಟ್ಟರು. ವಿಭಿನ್ನ ದೇಶಗಳ ಶ್ರಮಜೀವಿ ವರ್ಗಗಳು ಈ ಸಾಮ್ರಾಜ್ಯಶಾಹಿ ಯುದ್ಧದಲ್ಲಿ ತಮ್ಮ ಆಳುವ ವರ್ಗಗಳಿಗೆ ಬೆಂಬಲ ನೀಡಲು ಸಾಧ್ಯವಿಲ್ಲ, ಅದರ ಬದಲು ಇದನ್ನು ಒಂದು ವಿಮೋಚನಾ ಯುದ್ಧವಾಗಿ ಪರಿವರ್ತಿಸಬೇಕು ಎಂದರು ಲೆನಿನ್. ಈ ಕ್ರಾಂತಿಕಾರಿ ದಾರಿಯನ್ನು ಬಿಡದೇ ಇದ್ದವರು ಆಗ ಲೆನಿನ್ ಮಾತ್ರ.

ಸ್ವಲ್ಪ ಸಮಯದಲ್ಲೇ 1916 ರ ಮಧ್ಯ ಭಾಗದಲ್ಲಿ ಲೆನಿನ್‌ರ ಇನ್ನೊಂದು ಮಹತ್ವದ ಕೃತಿ 'ಸಾಮ್ರಾಜ್ಯಶಾಹಿ ಬಂಡವಾಳಶಾಹಿಯ ಅತ್ಯುನ್ನತ ಘಟ್ಟ' ಪ್ರಕಟವಾಯಿತು. 19ನೇ ಶತಮಾನ ಮುಗಿಯುತ್ತಿದ್ದಂತೆ ಹೇಗೆ ಹಣಕಾಸು ಬಂಡವಾಳ ವಿಶ್ವ ವ್ಯವಹಾರಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲಾರಂಭಿಸಿತು, ಇದರಿಂದ ಬಂಡವಾಳಶಾಹಿ ತನ್ನದೇ ವಿಶಿಷ್ಟ ಲಕ್ಷಣಗಳುಳ್ಳ ಸಾಮ್ರಾಜ್ಯಶಾಹಿಯಾಗಿ ಹೇಗೆ ಬೆಳೆಯುತ್ತಿದೆ ಎಂಬುದನ್ನು ಲೆನಿನ್ ಈ ಕೃತಿಯಲ್ಲಿ ತೋರಿಸಿಕೊಟ್ಟರು. ಈ ವಿಶ್ಲೇಷಣೆಯ ಮೂಲಕ ಅವರು ಒಂದು ತೀರ್ಮಾನಕ್ಕೆ ಬಂದರು. ಅದೇಂದರೆ ಸಾಮ್ರಾಜ್ಯಶಾಹಿ ಶೋಷಣೆಯ ಅತ್ಯಂತ ದುರ್ಬಲ ಕೊಂಡಿಯಾದ ರಶ್ಯಾದಲ್ಲಿ ಕ್ರಾಂತಿ ಸಾಧ್ಯ ಎಂದು ಶ್ರಮಜೀವಿ ವರ್ಗದ ಕ್ರಾಂತಿ ಮೊದಲಿಗೆ ಒಂದು ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶದಲ್ಲಿ ಮಾತ್ರ ಸಾಧ್ಯ ಎಂಬ ನಿರೂಪಣೆ ಬದಲಾಯಿತು.

ಜಗತ್ತೇ ನಡುಗಿತು

ಬೇಗನೇ ಲೆನಿನ್‌ರ ವಿಚಾರ ಸರಿಯೆಂದು ಸಾಬೀತಾಯಿತು. ಫೆಬ್ರವರಿ 1917 ರಲ್ಲಿ ರಶ್ಯಾದಲ್ಲಿ ಪ್ರಜಾಪ್ರಭುತ್ವ ಕ್ರಾಂತಿ ನಡೆಯಿತು. ಲೆನಿನ್ನರ ನಿಪುಣ ನೇತೃತ್ವದಲ್ಲಿ ಅದು ಬೇಗನೇ ಅಂದರೆ ನವೆಂಬರ್ 1917 ರಲ್ಲಿ (ರಶ್ಯಾದ ಹಳೆಯ ಕ್ಯಾಲೆಂಡರ್ ಪ್ರಕಾರ ಅಕ್ಟೋಬರ್ 1917 ರಲ್ಲಿ) ಸಮಾಜವಾದಿ ಕ್ರಾಂತಿಗೆ ದಾರಿ ಮಾಡಿಕೊಟ್ಟಿತು. ಅದನ್ನು ಕಣ್ಣಾರೆಕಂಡ ಅಮೆರಿಕನ್ ಪತ್ರಕರ್ತ ಜಾನ್ ರೀಡ್ ಹೇಳಿದಂತೆ ಅಕ್ಷರಶಃ ಜಗತ್ತನ್ನೇ ನಡುಗಿಸಿದ ಕ್ರಾಂತಿಯಾಗಿತ್ತದು.

ವಿವಿಧ ಯುರೋಪಿಯನ್ ದೇಶಗಳ ಆಳುವ ವಲಯಗಳಲ್ಲಿ ಇದು ಭೂಕಂಪನದ ಅಲೆಗಳನ್ನೇ ಹರಡಿತು. ಅವರು ಈ ಹೊಸ ತಮ್ಮ ಶೋಷಣಾ ಆಳ್ವಿಕೆಗಳ ಈ ಹೊಸ ಶತ್ರುವನ್ನು ಎದುರಿಸಲು ತಂತಮ್ಮ ಭಿನ್ನಾಭಿಪ್ರಾಯಗಳನ್ನು ಮುಂದೂಡಲು ನಿರ್ಧರಿಸಿದರು. ಇನ್ನೊಂದೆಡೆ ಈ ಕ್ರಾಂತಿ ವಿಶ್ವದ ದಮನಕ್ಕೊಳಗಾದ ಜನಗಳಲ್ಲಿ ಹೊಸ ಆಸೆ ಚಿಗುರಿಸಿತು. ಉದಾಹರಣೆಗೆ ಭಾರತದಲ್ಲಿ ತಿಲಕ್, ಸುಭಾಶ್‌ಚಂದ್ರ ಬೋಸ್, ಗಣೇಶ ಶಂಕರ ವಿದ್ಯಾರ್ಥಿ ಮುಂತಾದ ರಾಷ್ಟ್ರೀಯಮುಖಂಡರು ಇದನ್ನು ಸ್ವಾಗತಿಸಿದರು. ಅದನ್ನು ಮೇಲ್ಜಾತಿಗಳ ಮೇಲೆ ಶೂದ್ರರ ವಿಜಯ ಎಂದು ವಿಶಿಷ್ಟವಾದ ಭಾರತದ ಪದಪುಂಜಗಳಲ್ಲೇ ವರ್ಣಿಸಿದರು. ಈ ಕ್ರಾಂತಿ ನಂತರ ರವೀಂದ್ರನಾಥ ಟಾಗೋರ್, ಜವಹರಲಾಲ್ ನೆಹರೂ ಮತ್ತು ಹಲವು ರಾಷ್ಟ್ರೀಯವಾದಿಗಳಿಗೆ, ಕ್ರಾಂತಿಕಾರಿಗಳಿಗೆ ಒಂದು ಶಕ್ತಿಶಾಲೀ ಸ್ಫೂರ್ತಿ ನೀಡಿತು.

ಒಟ್ಟಾಗಿ ಮಧ್ಯ ಪ್ರವೇಶಿಸಿದರು. ಕೋಲ್ಚರ್, ಡೆನಿಕಿನಂತಹ ಸೇನಾಧಿಪತಿಗಳಿಗೆ ಅಂತರ್ಯುದ್ಧ ನಡೆಸಲು ಕುಮ್ಮಕ್ಕು ಕೊಟ್ಟರು, ಮಧ್ಯ ಏಶ್ಯಾದ ಪ್ರತಿಗಾಮಿ ಶಕ್ತಿಗಳಿಗೂ ಕುಮ್ಮಕ್ಕು ಕೊಟ್ಟು ಬೊಲ್ಶೆವಿಕ್ ಸರ್ಕಾರ ಕ್ರೋಢೀಕರಣಗೊಳ್ಳದಂತೆ ಪ್ರಯತ್ನಿಸಿದರು. ಆದರೂ ಲೆನಿನ್ ಮತ್ತು ಅವರ ಪಕ್ಷ ಸೂಕ್ತ ಕ್ರಮಗಳನ್ನು ಕೈಗೊಂಡು ಸೋವಿಯತ್ ಪ್ರಭುತ್ವವನ್ನು ಕ್ರೋಢೀಕರಿಸಿದರು, ದೇಶದ ಕೈಗಾರಿಕೀಕರಣಕ್ಕೆ ದೃಢ ಕ್ರಮ ಕೈಗೊಂಡರು.

ಸೋವಿಯತ್ ಒಕ್ಕೂಟದ ಸ್ಥಾಪನೆ

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಲೆನಿನ್ ಮತ್ತು ಅವರ ಪಕ್ಷದ ಎದುರು ಸಮಾಜವಾದಿ ನಿರ್ಮಾಣಕ್ಕೆ ಯಾವುದೇ ಉದಾಹರಣೆ ಅಥವಾ ಮಾದರಿಗಳಿರಲಿಲ್ಲ. ತಾವೇ ಕತ್ತಲಲ್ಲಿ ತಡಕಾಡಿದಂತೆ ಹಾದಿ ಹುಡುಕಿಕೊಳ್ಳಬೇಕಾಗಿತ್ತು. ಅದರಿಂದಾಗಿ ಯುದ್ಧ ಕಮ್ಯುನಿಸಂ, ಹೊಸ ಆರ್ಥಿಕ ನೀತಿ ಇತ್ಯಾದಿ ಪ್ರಯೋಗಗಳನ್ನು ನಡೆಸಿ ಕಷ್ಟ-ಕೋಟಲೆಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಬೇಕಾಯಿತು.

ಕ್ರಾಂತಿ ನಡೆದ ಕೂಡಲೇ ಲೆನಿನ್ ಸಾಮ್ರಾಜ್ಯಶಾಹಿ ಯುದ್ಧದಿಂದ ರಶ್ಯಾವನ್ನು ಹಿಂತೆಗೆದುಕೊಂಡು, ಜಗತ್ತನ್ನು ಹಂಚಿಕೊಳ್ಳಲು ಸಾಮ್ರಾಜ್ಯಶಾಹಿ ದೇಶಗಳೊಂದಿಗೆ ಝಾರ್ ಶಾಹಿ ರಶ್ಯಾ ಮಾಡಿಕೊಂಡಿದ್ದ ಎಲ್ಲಾ ಗುಪ್ತ ಒಪ್ಪಂದಗಳನ್ನು ಪ್ರಕಟಗೊಳಿಸಿದರು. ಇಂತಹ ಎಲ್ಲಾ ಸಂಧಿಗಳನ್ನು ಬೊಲ್ಶೆವಿಕ್ ಸರಕಾರ ರದ್ದು ಮಾಡಿತು. ಜತೆಗೆ ಭೂಮಿ ಮತ್ತು ಶಾಂತಿ ಕುರಿತಂತೆ ಡಿಕ್ರಿಗಳನ್ನು ಹೊರಡಿಸಿತು. ಇದು ಜಗತ್ತಿನಾದ್ಯಂತ ದಮನಕ್ಕೊಳಗಾದ ಜನಗಳ ಪ್ರಶಂಸೆ ಗಳಿಸಿತು.

ಝಾರ್ ಶಾಹಿ ರಶ್ಯಾವನ್ನು 'ರಾಷ್ಟ್ರೀಯತೆಗಳ ಬಂದೀಖಾನೆ' ಎನ್ನಲಾಗುತ್ತಿತ್ತು. ಅಷ್ಟೊಂದು ದೇಶೀಯರು ಅವರ ಕಪಿಮುಷ್ಟಿಯಲ್ಲಿ ಸಿಲುಕಿದ್ದರು. ಸಮಾಜವಾದಿ ಕ್ರಾಂತಿ ಅವರೆಲ್ಲರೂ ಶತಮಾನಗಳಿಂದ ಬಯಸುತ್ತಿದ್ದ ಸ್ವಾತಂತ್ರ್ಯವನ್ನು ನೀಡಿತು. ಸಹಜವಾಗಿಯೇ, ನಂತರ ಅವೆಲ್ಲಾ ಸ್ವಯಂಇಚ್ಛೆಯಿಂದಲೇ ಹೊಸ ಒಕ್ಕೂಟವೊಂದನ್ನು ರಚಿಸಿಕೊಂಡವು. ಸೋವಿಯತ್ ಒಕ್ಕೂಟ ಅಸ್ತಿತ್ವಕ್ಕೆ ಬಂದ ಬಗೆಯಿದು. ನಂತರ ಅದೇ ರೀತಿ ಲಿಥುವಾನಿಯ, ಲ್ಯಾಟಿವಿಯಾ ಮತ್ತು ಎಸ್ಟೋನಿಯಾ 1930 ರಲ್ಲಿ ಹಿಟ್ಲರ್ ಮಂದೆಗಳ ಬೆದರಿಕೆ ಎದುರಿಸುತ್ತಿದ್ದಾಗ ಸಂತೋಷದಿಂದಲೇ ಸೋವಿಯತ್ ಒಕ್ಕೂಟವನ್ನು ಸೇರಿಕೊಂಡವು.

ಮೂರನೇ ಅಂತರ್‌ರಾಷ್ಟ್ರೀಯ

ಕ್ರಾಂತಿಯಾದ ಸ್ವಲ್ಪವೇ ಸಮಯದಲ್ಲಿ ಯುರೋಪಿನ ಸೋಶಿಯಲ್ ಡೆಮಾಕ್ರಟಿಕ್ ಪಕ್ಷಗಳಲ್ಲಿನ ತೀವ್ರಗಾಮಿಗಳೆಲ್ಲಾ ಕ್ರಾಂತಿಯನ್ನು ಬೆಂಬಲಿಸಿದರು. ಇದರ ಪರಿಣಾಮವಾಗಿ 1918 ರಲ್ಲಿ ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯ(ಅಥವಾ ಮೂರನೇ ಅಂತರ್‌ರಾಷ್ಟ್ರೀಯ) ಸ್ಥಾಪನೆಯಾಯಿತು. ಇದರಿಂದಾಗಿ ಹಲವು ಹತ್ತು ದೇಶಗಳಲ್ಲಿ ಮೊದಲ ಬಾರಿಗೆ ಕಮ್ಯುನಿಸ್ಟ್ ಪಕ್ಷಗಳು ಹುಟ್ಟಿಕೊಂಡವು. ಭಾರತ ಚೀನಾ, ಜಪಾನ್ ಮತ್ತಿತರ ಹಲವು ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ರಚನೆಯಾದದ್ದು ಈ ಅವಧಿಯಲ್ಲೇ.

ಜಗತ್ತು ಕಣ್ಣು ಬಿಟ್ಟು ನೋಡುತ್ತಿತ್ತು, ರಶ್ಯಾದಲ್ಲಿ

ಚುರುಕುಗೊಳಿಸಿತು. ಉದಾಹರಣೆಗೆ ಟಾಗೋರ್, ನೆಹರೂ 1920 ರ ದಶಕದಲ್ಲಿ ರಶ್ಯಾದಲ್ಲಿನ ಬೃಹತ್ ಬೆಳವಣಿಗೆಗಳಿಂದ ಪ್ರಭಾವಿತರಾದರು. ಬಂಡವಾಳಶಾಹಿ ದೇಶಗಳು 1929-33 ರ ಮಹಾ ಕುಸಿತದಲ್ಲಿ ತತ್ತರಿಸುತ್ತಿದ್ದಾಗ ಸೋವಿಯತ್ ಒಕ್ಕೂಟ ದಾಪುಗಾಲುಗಳನ್ನಿಟ್ಟು ಮುಂದೆ ಸಾಗುತ್ತಿತ್ತು. ಇದು ಸಮಾಜವಾದದ ಶ್ರೇಷ್ಠತೆಯನ್ನು ನಿರ್ಣಾಯಕವಾಗಿ ಸಾಬೀತು ಮಾಡಿತು.

ಈ ಅವಧಿಯಲ್ಲೇ ಬಂಡವಾಳಶಾಹಿ ದೇಶಗಳು ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗದ ನಡುವಿನ ವೈರುದ್ಧ್ಯ ಮತ್ತು ಸಾಮ್ರಾಜ್ಯಶಾಹಿಗಳ ನಡುವಿನ ವೈರುದ್ಧ್ಯದ ಜೊತೆಗೆ ವಸಾಹತುಶಾಹಿಗಳು ಮತ್ತು ದಮನಕ್ಕೊಳಗಾದ ದೇಶಗಳ ನಡುವೆ ಹಾಗೂ ಸಾಮ್ರಾಜ್ಯಶಾಹಿ ಮತ್ತು ಸಮಾಜವಾದದ ನಡುವೆ ಕೂಡಾ ವೈರುಧ್ಯಗಳು ತೀವ್ರಗೊಂಡವು. ಲೆನಿನ್ ಆಗ ಬದುಕುಳಿದಿರಲಿಲ್ಲ. ಆದರೆ ಸಮಾಜವಾದಿ ಸೋವಿಯತ್ ಒಕ್ಕೂಟ, ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗ ಮತ್ತು ದಮನಕ್ಕೊಳಗಾಗಿದ್ದ ದೇಶಗಳ ನಡುವೆ ಐಕ್ಯತೆ ಬೆಸೆಯುವ ವಿಚಾರ ಈ ಅವಧಿಯಲ್ಲಿ ಬಹಳ ಪ್ರಭಾವ ಬೀರಿತು.

ಫ್ಯಾಸಿಸಂ ಮೇಲೆ ವಿಜಯ

ಈ ಅವಧಿಯಲ್ಲಿ ಸೋವಿಯತ್ ಒಕ್ಕೂಟದ ಆರ್ಥಿಕ ಸಾಧಿಸಿದ ತ್ವರಿತ ಪ್ರಗತಿಯಿಂದಾಗಿ ಜೂನ್ 1941 ರಲ್ಲಿ ಫ್ಯಾಸಿಸ್ಟ್ ಧಾಳಿ ಬಂದಾಗ ಅದನ್ನು ಎದುರಿಸಿ ನಿಲ್ಲಲು ಸಾಧ್ಯವಾಯಿತು. ಫ್ಯಾಸಿಸಂ ಇಟಲಿಯಲ್ಲಿ 1922 ರಲ್ಲಿ ಬೇರು ಬಿಟ್ಟಿತು. ಜರ್ಮನಿಯಲ್ಲಿ 1933 ರಲ್ಲಿ ಹಿಟ್ಲರ್ ಅಧಿಕಾರಕ್ಕೆ ಬಂದ. ಹಿಟ್ಲರ್ ಮತ್ತು ಮುಸಲೋನಿ ಇಬ್ಬರೂ ಆಗಿದ್ದ ಏಕಮಾತ್ರ ಸಮಾಜವಾದಿ ದೇಶದ ಬದ್ಧವೈರಿಗಳಾಗಿದ್ದರು. ಇತರ ಸಾಮ್ರಾಜ್ಯಶಾಹಿ ದೇಶಗಳೂ ಇದರ ಪ್ರಯೋಜನ ಪಡೆಯಲು, ಸಮಾಜವಾದಿ ಸೋವಿಯತ್‌ಒಕ್ಕೂಟವನ್ನು ಹೇಳ ಹೆಸರಿಲ್ಲದಂತೆ ಮಾಡಲು ಪ್ರಯತ್ನಿಸಿದರು. ಆದರೆ ಹಿಟ್ಲರ್ ಪೂರ್ವಕ್ಕೆ ಸೋವಿಯತ್ ಒಕ್ಕೂಟದತ್ತ ತೆರಳುವ ಮೊದಲು ಇತರ ದೇಶಗಳನ್ನು ಧೂಳೀಪಟ ಮಾಡಲಾರಂಭಿಸಿದಾಗ ಅವರೆಲ್ಲಾ ಅವಾಕ್ಕಾದರು.

ಇದರಿಂದ ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಾದ ಮುಖಂಡರು ಸೋವಿಯತ್ ಒಕ್ಕೂಟದೊಂದಿಗೆ ಯುದ್ಧಕಾಲದ ಮೈತ್ರಿ ಬೆಸೆಯಲು ಮುಂದಾಗಬೇಕಾಯಿತು. ಆದರೂ ತಮ್ಮ ಆಟವನ್ನು ಅವರು ಬಿಟ್ಟಿರಲಿಲ್ಲ. ಆದ್ದರಿಂದಲೇ ಜರ್ಮನ್ ವಿರುದ್ಧ ಎರಡನೇ ಯುದ್ಧರಂಗ ತೆರೆಯಲು ಅವರು ವಿಳಂಬ ಮಾಡಿದರು. 1943 ರಲ್ಲಿ ಸ್ಟಾಲಿನ್‌ಗ್ರಾಡ್ ಸಮರದ ನಂತರ ಎರಡನೇ ಮಹಾಯುದ್ಧದ ಸ್ವರೂಪವೇ ತಿರುಗುಮುರುಗಾಯಿತು. ಕೊನೆಗೂ 1945 ರಲ್ಲಿ ಕೆಂಪುಸೇನೆ ಬರ್ಲಿನನ್ನು ವಶಪಡಿಸಿಕೊಂಡಿತು. ಆದರೆ ಈ ವಿಜಯಕ್ಕೆ, ಫ್ಯಾಸಿಸ್ಟ್ ಪಿಡುಗನ್ನು ನಿವಾರಿಸಲಿಕ್ಕೆ ಅದು ಭಾರೀ ಬೆಲೆ ತೆತ್ತಿತು. 2 ಕೋಟಿ ಸೋವಿಯತ್ ನಾಗರೀಕರ ಬಲಿದಾನವಾಯಿತು. ಜೊತೆಗೆ ವ್ಯಾಪಕ ವಿನಾಶವನ್ನು ಎದುರಿಸ ಬೇಕಾಯಿತು. ಸಾಮ್ರಾಜ್ಯಶಾಹಿ ಶಕ್ತಿಗಳು ಕೂಡಾ ಫ್ಯಾಸಿಸಂನ್ನು ನಾಶ ಮಾಡುವಾಗ ಸ್ವತಃ ದುರ್ಬಲಗೊಂಡವು.

ನಕಾಶೆಯೇ ಬದಲಾಯಿತು

ಫ್ಯಾಸಿಸಂ ಮೇಲಿನ ವಿಜಯ ಜಗತ್ತಿನ ನಕಾಶೆಯನ್ನೇ ಬದಲಿಸಿತು. ದುರ್ಬಲಗೊಂಡ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ತಮ್ಮ ವಸಾಹತುಗಳನ್ನು ಇಟ್ಟುಕೊಳ್ಳುವುದು ಸಾಧ್ಯವಿರಲಿಲ್ಲ. ರಾಷ್ಟ್ರೀಯ ವಿಮೋಚನಾ ಹೋರಾಟಗಳು ಅಭೂತಪೂರ್ವ ರಭಸ ಪಡೆದವು. ಭಾರತವೂ ಸೇರಿದಂತೆ ಹಲವು ದೇಶಗಳು ಸ್ವತಂತ್ರವಾದವು. ನೇರ ವಸಾಹತುಶಾಹಿ ಆಳ್ವಿಕೆಯ ಕಾಲ ಕೊನೆಗೊಂಡಿತು. ಅತ್ತ ಪೂರ್ವ ಯುರೋಪಿನಲ್ಲಿ ಫ್ಯಾಸಿಸಂ-ವಿರೋಧಿ ಶಕ್ತಿಗಳ ಕೈ ಮೇಲಾಯಿತು. ಸೋವಿಯತ್ ಒಕ್ಕೂಟ ಮತ್ತು ಕೆಂಪು ಸೇನೆಯ ಬೆಂಬಲದಿಂದ ಇಲ್ಲೆಲ್ಲಾ ಜನತಾ ಪ್ರಜಾಪ್ರಭುತ್ವಗಳು ಸ್ಥಾಪನೆಯಾದವು.

ಸಾಮ್ರಾಜ್ಯಶಾಹಿ ಶಕ್ತಿಗಳು ದುರ್ಬಲವಾದ್ದರಿಂದ ಚೀನಾ, ಕೊರಿಯಾ, ವಿಯೆಟ್ನಾಂ ಮತ್ತು ನಂತರ [illegible]

ಮುಂಬರುವ ಕೇರಳ-ಪಶ್ಚಿಮ ಬಂಗಾಳ ಚುನಾವಣೆಗೆ ವೀಕ್ಷಕನಾಗಿ ಸಿಐಎ - 20 ಲಕ್ಷ ಡಾಲರ್ ವೆಚ್ಚ

ಕುಪ್ರಸಿದ್ಧ ಅಮೆರಿಕಾ ಗೂಢಾಚಾರ ಸಂಘಟನೆಯಾದ ಸಿ.ಐ.ಎ.(ಸೆಂಟ್ರಲ್ ಇಂಟಲಿಜೆನ್ಸ್ ಏಜೆನ್ಸಿ) ಕೇರಳ ಹಾಗೂ ಪಶ್ಚಿಮ ಬಂಗಾಳಕ್ಕೆ ಚುನಾವಣಾ ವೀಕ್ಷಕರನ್ನು ಕಳುಹಿಸಿದೆ. ಕೆಲವು ತಿಂಗಳೊಳಗೆ ನಡೆಯುವಂತಹ ಪಶ್ಚಿಮ ಬಂಗಾಳ ಹಾಗೂ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎಡ ಪಕ್ಷಗಳು ಅಧಿಕಾರಕ್ಕೆ ಬರುವುದನ್ನು ತಡೆಯಲು 20 ಲಕ್ಷ ಡಾಲರ್ (9.5 ಕೋಟಿ ರೂಪಾಯಿ) ಹಣ ಖರ್ಚು ಮಾಡಲು ಅಮೆರಿಕಾದ ಲಂಗಾಲ ಕೇಂದ್ರವಾಗಿ ಕೆಲಸ ಮಾಡುತ್ತಿರುವ ಸಿಐಎ ಸಂಸ್ಥೆ ತೀರ್ಮಾನಿಸಿದೆ. ಈ ಹಿಂದೆ ಸಿಐಎ ಏಜೆಂಟನಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಈ ಗುಪ್ತ ಸಮಾಚಾರವನ್ನು ಬಹಿರಂಗಗೊಳಿಸಿದ್ದಾರೆ.

ಬೇರೆ ರಾಷ್ಟ್ರಗಳ ಮೂಲಭೂತ ವಿಷಯಗಳಲ್ಲಿ ಸಿಐಎ ಮಧ್ಯ ಪ್ರವೇಶ ಮಾಡುವುದು ಎಲ್ಲರಿಗೂ ತಿಳಿದ ವಿಷಯ. ಬಂಗಾಳ ಹಾಗೂ ಕೇರಳ ವಿಧಾನಸಭೆ ಚುನಾವಣೆಗೆ ವೀಕ್ಷಕರನ್ನು ಕಳುಹಿಸುವ ನೆಪದಿಂದ ಸಿಐಎ ಈ ಕುತಂತ್ರಕ್ಕೆ ಮುಂದಾಗಿದೆ. ಅಮೆರಿಕಾ ಸಾಮ್ರಾಜ್ಯಶಾಹಿಗಳ ಹಿತವನ್ನು ಕಾಪಾಡುವಂತಹ ಪಕ್ಷಗಳನ್ನು ಅಧಿಕಾರಕ್ಕೆ ತರುವುದೇ ಇವರ ಮೂಲ ಉದ್ದೇಶ.

ಅಮೆರಿಕಾಕ್ಕೆ ಸಂಪೂರ್ಣ ಬೆಂಬಲವಿರುವ ಸರಕಾರ ಕೇಂದ್ರದ ವಾಜಪೇಯಿ ಸರಕಾರ. ಇದರಿಂದ ಸಿಐಎ ಕುತಂತ್ರಗಳು ಸುಲಭವಾಗಲು ಸಾಧ್ಯವಾಗಿದೆ. ಅಮೆರಿಕಾದ ರಹಸ್ಯ ಗೂಢಾಚಾರ ಸಂಸ್ಥೆಯಾದ ಎಫ್‌ಬಿಐ (ಫೆಡರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್) ಕಛೇರಿಯನ್ನು ವಾಜಪೇಯಿಯವರ ಆಶೀರ್ವಾದದೊಂದಿಗೆ ದೆಹಲಿಯಲ್ಲಿ ತೆರೆಯಲಾಗಿದೆ.

ಕೇರಳದ ಎ.ಕೆ.ಆಂಟನಿ ನಾಯಕತ್ವದ ಯು.ಡಿ.ಎಫ್. ಗೆ ಪಶ್ಚಿಮ ಬಂಗಾಳದ ಕೇಂದ್ರ ರೈಲ್ವೆ ಸಚಿವೆ ಮಮತಾ ಬ್ಯಾನರ್ಜಿಯ ತೃಣಮೂಲ ಬಿಜೆಪಿ ಒಕ್ಕೂಟಕ್ಕೆ ಸಹಾಯ ಮಾಡಿದರೆ ಕಮ್ಯುನಿಸ್ಟ್ ನೇತೃತ್ವದ ಸರಕಾರಗಳು ಅಧಿಕಾರಕ್ಕೆ ಬರದಂತೆ ತಡೆಯಲು ಸಾಧ್ಯವೆಂದು ದೆಹಲಿಯಲ್ಲಿರುವ ಸಿಐಎ ನಿರ್ದೇಶಕರು ಅಮೇರಿಕಾಕ್ಕೆ ಸೂಚನೆ ಕಳುಹಿಸಿದ್ದಾರೆ.

1957 ರಲ್ಲಿ ಅಧಿಕಾರಕ್ಕೆ ಬಂದ ಇ.ಎಂ.ಎಸ್. ಸರಕಾರದ ವಿರುದ್ಧ ವಿಮೋಚನಾ ಚಳುವಳಿ ಎಂಬ ಹೆಸರಿನಲ್ಲಿ ಸಿಐಎ ಹಣಬಲದಿಂದ ಮುಖಂಡತ್ವ ನೀಡಿದವರೇ ಎ.ಕೆ.ಆಂಟನಿಯ ಸಹಪಾಠಿಗಳು. ಅವರೇ ಇಂದಿನ ಯು.ಡಿ.ಎಫ್. ನ ಮುಖಂಡರು. ಪಶ್ಚಿಮ ಬಂಗಾಳದಲ್ಲಿ ಸಿದ್ಧಾರ್ಥ ಶಂಕರ್ ರಾಯ್ ನೇತೃತ್ವದಲ್ಲಿ ಬೆಳೆದವಳೇ ಇಂದಿನ ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾಬ್ಯಾನರ್ಜಿ. ಇವರ ಮುಖಂಡತ್ವದಲ್ಲಿ ಫೆಬ್ರವರಿ ತಿಂಗಳಲ್ಲಿ ಬಂಗಾಳ ಮುಕ್ತಿ ಬಾಹಿನಿ ಎಂಬ ಹೆಸರಿನಲ್ಲಿ ಹೋರಾಟಕ್ಕೆ ಕರೆ ಕೊಡಲಾಗಿದೆ. ಕೇರಳದಲ್ಲಿ ಎ.ಕೆ.ಆಂಟನಿ ನೇತೃತ್ವದಲ್ಲಿ ಇದೇ ಸಮಯಕ್ಕೆ ಕೇರಳ ವಿಮೋಚನಾ ಯಾತ್ರೆಗೆ ಕರೆ ಕೊಡಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ಇತ್ತೀಚಿಗೆ ನಡೆಯುತ್ತಿರುವ ರಾಜಕೀಯ ಘಟನೆಗಳಲ್ಲಿ ಸಿಐಎ ಮಧ್ಯ ಪ್ರವೇಶ ಮಾಡಲು ಶ್ರಮ ಪಡುತ್ತಿದೆ. ಬುರ್‌ಬಾಂ ಜಿಲ್ಲೆಯಲ್ಲಿ ಇತ್ತೀಚಿಗೆ ನಡೆದ ಭೂ ಮಾಲೀಕರ ಅಟ್ಟಹಾಸವನ್ನು ಎದುರಿಸಿದ ಕೃಷಿ ಕೂಲಿಗಾರರ ಚಳುವಳಿ ಬಗ್ಗೆ ತನಿಖೆ ಮಾಡಲು ಅಮೇರಿಕಾ ರಾಯಭಾರಿ ಕಛೇರಿ ಇಬ್ಬರು ಅಧಿಕಾರಿಗಳನ್ನು ಇಲ್ಲಿಗೆ ಕಳುಹಿಸಿತು. ತೃಣಮೂಲ ಬಿಜೆಪಿ ಸಖ್ಯತೆ ಹಾಗೂ ಭೂ ಮಾಲೀಕರ ಗೂಂಡಾಗಳು ಸೇರಿ 11 ಬಡ ರೈತರನ್ನು ಹತ್ಯೆ ಮಾಡಿರುತ್ತಾರೆ. ಪಶ್ಚಿಮ ಬಂಗಾಳ ಸರಕಾರ ಭೂ ಮಾಲೀಕರ ಹೆಚ್ಚುವರಿ ಭೂಮಿಯನ್ನು ವಶಪಡಿಸಿ ಭೂಹೀನ ರೈತರಿಗೆ ವಿತರಿಸಿತು. ಇದನ್ನು ಮರಳಿ ವಶಪಡಿಸಿಕೊಳ್ಳಲು ಭೂ ಮಾಲೀಕರು ತೃಣಮೂಲ-ಬಿಜೆಪಿ ಸಖ್ಯವನ್ನು ಬೆಂಬಲಿಸಿ ಎಡರಂಗ ಸರ್ಕಾರದ ವಿರುದ್ಧ ಗಲಭೆ ಆರಂಭಿಸಿದ್ದಾರೆ.

ಭಾರತ ಸಾರ್ವಭೌಮತೆಗೆ ಸವಾಲು ಒಡ್ಡಿರುವ ಈ ಸಿಐಎ ಕುತಂತ್ರಿ ಏಜೆಂಟರಾದ ಅಮೆರಿಕಾ ರಾಯಭಾರಿ ಕಛೇರಿ ಅಧಿಕಾರಿಗಳು ಬಹಿರಂಗವಾಗಿ ಪತ್ರಿಕಾಗೋಷ್ಠಿ ನಡೆಸಿರುತ್ತಾರೆ. ಆಗ ಮುಖ್ಯಮಂತ್ರಿಯಾಗಿದ್ದ ಜ್ಯೋತಿಬಸುರವರು ಈ ಘಟನೆಯನ್ನು ತೀವ್ರವಾಗಿ ಖಂಡಿಸಿದಾಗ ವಾಜಪೇಯಿ ಸರಕಾರ ಹಾಗೂ ಅಮೆರಿಕಾ ರಾಯಭಾರಿ ಇನ್ನು ಮುಂದೆ ಈ ರೀತಿ ರಾಜ್ಯಗಳ ವಿಷಯಗಳಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲ ಎಂದು ಸ್ಪಷ್ಟನೆ ನೀಡಿದ್ದರು.

ಭಾರತದ ಎಡ ಪಕ್ಷಗಳ ಉಕ್ಕಿನ ಕೋಟೆಗಳಾದ ಪಶ್ಚಿಮ ಬಂಗಾಳ ಹಾಗೂ ಕೇರಳ ರಾಜ್ಯಗಳು ಜಾಗತೀಕರಣಕ್ಕೆ ಎದುರಾಗಿ ತಾತ್ವಿಕವಾಗಿ ಹಾಗೂ ಕಾರ್ಯ ಮೂಲಕ ವಿ[illegible]ಸಿಕೊಂಡು ಬಂದಿವೆ. ಆದುದರಿಂದ [illegible] ರಾಜ್ಯಗಳಲ್ಲಿ ಸಿಐಎ ಮಧ್ಯ ಪ್ರವೇಶ ಮಾ[illegible] ಅಮೆರಿಕಾಕ್ಕೆ ಎದುರಾದ ವಿರೋಧವನ್ನು ಕೂನೆಗಾಣಿಸಲು ಭಾರತದ ಎಡ ಪಕ್ಷಗಳನ್ನು ಸೋಲಿಸಲೇಬೇಕೆಂಬ ಪಣ ತೊಟ್ಟಿವೆ.

ಕೇರಳ ಹಾಗೂ ಪಶ್ಚಿಮ ಬಂಗಾಳದಲ್ಲಿರುವ ವಿರೋಧ ಪಕ್ಷಗಳು ಈ ಕಾರ್ಯಕ್ಕೆ ಸಹಾಯ ನೀಡುತ್ತವೆ ಎಂದು ಮುಂಚಿತವಾಗಿಯೇ ಸಿಐಎ ಗ್ರಹಿಸಿದೆ. 1960ರಲ್ಲಿ ಪ.ಬಂಗಾಳದಲ್ಲಿ ಜ್ಯೋತಿಬಸು ಉಪಮುಖ್ಯಮಂತ್ರಿಯಾದ ಮಂತ್ರಿಮಂಡಲವನ್ನು ಕೆಳಗಿಳಿಸಲು ಅಂದು ಸಿಐಎ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿತ್ತು. ಈ ಬಗ್ಗೆ ಭಾರತದಲ್ಲಿ ಅಮೆರಿಕಾ ರಾಯಭಾರಿಯಾಗಿದ್ದ ಡೇನಿಯಲ್ ಪ್ಯಾಟ್ರಿಕ್ ಮಾಯೋಹಾನಿಯನ್ ಮುಂದಿನ ದಿನಗಳಲ್ಲಿ ವಿಷಯ ಬಹಿರಂಗ ಪಡಿಸಿರುತ್ತಾರೆ. ಅವರು ಬರೆದ 'ದಿ ಡೇಂಜರಸ್ ಪ್ಲೇಸ್' ಎಂಬ ಪುಸ್ತಕದಲ್ಲಿ ಪ.ಬಂಗಾಳ ಹಾಗೂ ಕೇರಳದಲ್ಲಿರುವ ಎಡ ಪಕ್ಷಗಳನ್ನು ದಮನ ಮಾಡಲು ಕಾಂಗ್ರೆಸ್ ಪಕ್ಷಕ್ಕೆ ಅಮೇರಿಕಾ ಹಣ ಸಹಾಯ ಮಾಡಿದೆ ಎಂದು ಬರೆದಿರುತ್ತಾರೆ.

ಕಳೆದ ಐದು ವರ್ಷಗಳಿಂದ ಪ.ಬಂಗಾಳದ ಎಡರಂಗ ಸರ್ಕಾರವನ್ನು ಕೆಳಗಿಳಿಸಲು ವಿದೇಶಿ ಶಕ್ತಿಗಳು ಮತ್ತು ಸಿಐಎ ತಮ್ಮ ಕೆಲಸಗಳನ್ನು ಚುರುಕುಗೊಳಿಸಿರುತ್ತಾರೆ. ಕಳೆದ ಚುನಾವಣೆಗೆ ಮೂರು ತಿಂಗಳು ಮೊದಲು ಪುರೋಲಿಯ ಜಿಲ್ಲೆಯಲ್ಲಿ ಈ ಶಕ್ತಿಗಳು ವಿಮಾನದಿಂದ ಶಸ್ತ್ರಾಸ್ತ್ರಗಳನ್ನು ಇಳಿಸಿರುತ್ತಾರೆ. ಈ ಘಟನೆ ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್‌ರವರ ಅರಿವಿನಿಂದಲೇ ನಡೆದಿದೆ. ಜ್ಯೋತಿಬಸು ಸರಕಾರ ಅಧಿಕಾರಕ್ಕೆ ಬರದಂತೆ ತಡೆಯುವುದು ಹಾಗೂ ಎಡ ಪಕ್ಷಗಳನ್ನು ದಮನ ಮಾಡಲು ಉಪ[illegible]ಸಲು ಎಂದು ಸಿಬಿಐ ಈ ಶಸ್ತ್ರಗಳನ್ನು ಇಳಿಸಲಾ[illegible]ಸಿದೆ. ಈ ಮೊಕದ್ದಮೆಯಲ್ಲಿ ತನ್ನ ತನಿಖೆಯ[illegible] [illegible]ನಾದ ಬ್ರಿಟಿಷ್ ಪ್ರಜೆ ಪೀಟರ್ ಬ್ರೆಸ್ಲೋವ್ 9 ಪುಟಗಳ ತಪ್ಪೊಪ್ಪಿಗೆಯಲ್ಲಿ ಈ ಬಗ್ಗೆ ಒಪ್ಪಿರುತ್ತಾರೆ. ಈ ಶಸ್ತ್ರಾಸ್ತ್ರ ವಿತರಣೆ ಮೊಕದ್ದಮೆಯಲ್ಲಿ ಮುಖ್ಯ ಅಪರಾಧಿಯಾದ ಕಿಮ್ ಡೇವಿಡ್ ಕುಪ್ರಸಿದ್ಧ ಸಿಐಎ ಏಜೆಂಟನಾಗಿರುತ್ತಾನೆ. ಈ ವ್ಯಕ್ತಿಯನ್ನು ಸೆರೆ ಹಿಡಿಯಲು ವಾಜಪೇಯಿ ಸರಕಾರ ಆಸಕ್ತಿ ತೋರುತ್ತಿಲ್ಲ. ಜೈಲಿನಲ್ಲಿದ್ದ ಉಳಿದ ಅಪರಾಧಿಗಳನ್ನು ವಾಜಪೇಯಿ ಸರಕಾರ' ಬಿಡುಗಡೆಗೊಳಿಸಿದೆ.

ಪಶ್ಚಿಮಬಂಗಾಳದಲ್ಲಿ ಸಿಪಿಐ(ಎಂ) ಅನ್ನು ದಮನ ಮಾಡಲು ತೃಣಮೂಲ ಕಾಂಗ್ರೆಸ್ ಗೂಂಡಾಗಳು ಇಂದಿಗೂ ಈ ಶಸ್ತ್ರಾಸ್ತ್ರಗಳನ್ನೇ ಬಳಸುತ್ತಿದ್ದಾರೆ.

ಇ.ಕೆ.ಎನ್.ರಾಜನ್

......ಸಮಾಜವಾದದ ಶತಮಾನ

ಪುಟ 9ರಿಂದ

ಈ ಕ್ರಾಂತಿಗಳೂ ವಿಶ್ವದ ಸ್ವರೂಪವನ್ನು ಬದಲಿಸುವಲ್ಲಿ ದೊಡ್ಡ ಕೊಡುಗೆ ನೀಡಿದವು.

ಈ ಎಲ್ಲಾ ಸಮಾಜವಾದಿ ದೇಶಗಳು ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲೂ ಅತ್ಯಲ್ಪ ಕಾಲದಲ್ಲೇ ತ್ವರಿತ ಪ್ರಗತಿ ಸಾಧಿಸಿದವು. ವಿಜ್ಞಾನ-ತಂತ್ರಜ್ಞಾನ [illegible]ಂಗದಲ್ಲಿ ಸೋವಿಯತ್ ಒಕ್ಕೂಟ ತನ್ನ ಮೇಲ್ಮೆಯನ್ನು ತೋರಿಸಿಕೊಟ್ಟಿತು - ಚಂದ್ರನನ್ನು ಸುತ್ತುವ ಮೊದಲ ಉಪಗ್ರಹವನ್ನು ಹಾರಿಸಿತು. ಸೋವಿಯತ್ ಒಕ್ಕೂಟ ಪರಮಾಣು ಶಕ್ತಿ ಹೊಂದಿದ ಮೇಲೆ ಅಮೆರಿಕಾದ ಪರಮಾಣು ಬ್ಲಾಕ್‌ಮೇಲ್ ನಡೆಯಲಿಲ್ಲ. 1945 ರಲ್ಲಿ ಅದು ಎರಡು ಜಪಾನಿ ನಗರಗಳ ಮೇಲೆ ಅಣುಬಾಂಬು ಹಾಕಿತು, ಅದಕ್ಕೆ ಅದು ಏಕಮಾತ್ರ ಪರಮಾಣು ಶಕ್ತಿಯಾಗಿದ್ದದ್ದೇ ಕಾರಣ ಎಂಬುದನ್ನು ನೆನಪಿಸಿಕೊಳ್ಳಬೇಕು.

ಇಷ್ಟೇ ಅಲ್ಲ, ಸಮಾಜವಾದಿ ದೇಶಗಳು, ಅದರಲ್ಲೂ ಸೋವಿಯತ್ ಒಕ್ಕೂಟ ಹೊಸದಾಗಿ ಸ್ವತಂತ್ರವಾದ ದೇಶಗಳಿಗೆ ಆರ್ಥಿಕ ಬೆಳವಣಿಗೆಯಲ್ಲಿ ಅಮೂಲ್ಯ ಸಹಾಯ ಒದಗಿಸಿದವು. ಇದರಿಂದ ಈ ದೇಶಗಳು ಸಾಮ್ರಾಜ್ಯಶಾಹಿ ಬ್ಲಾಕ್‌ಮೇಲ್‌ಗಳನ್ನು ಎದುರಿಸಿ ತಮ್ಮ ಸಾರ್ವಭೌಮತೆಯನ್ನು ರಕ್ಷಿಸಿಕೊಂಡು ಸ್ವಾವಲಂಬೀ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಯಿತು. ಭಾರತ ಕೂಡಾ ತನ್ನ ಅಭಿವೃದ್ಧಿಗೆ ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳಿಗೆ ಋಣಿಯಾಗಿದೆ.

ಹಿನ್ನಡೆಯ ನಂತರ

ಸೋವಿಯತ್ ಒಕ್ಕೂಟದ ವಿಘಟನೆ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದಕ್ಕಾದ ಹಿನ್ನಡೆ ಕಳೆದ 11 ವರ್ಷಗಳಲ್ಲಿ ಈ ದೇಶಗಳ ಮೇಲಷ್ಟೇ ಅಲ್ಲ ಇಡೀ ಜಗತ್ತಿನ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಎರಡು ಧ್ರುವಗಳ ಜಗತ್ತು ಈಗ ಏಕಧ್ರುವ ಜಗತ್ತಾಯಿತು. ಸಾಮ್ರಾಜ್ಯಶಾಹಿಗಳ ಬ್ಲಾಕ್‌ಮೇಲ್‌ಗಿದ್ದ ಬಲವಾದ [illegible] ಇಲ್ಲವಾಯಿತು, ತತ್ಕಾಲಿಕವಾಗಿ ಅಂತರಾಷ್ಟ್ರೀಯ ವರ್ಗ ಬಲಾಬಲದಲ್ಲಿ ಸಾಮ್ರಾಜ್ಯಶಾಹಿಯ ಕೈ ಮೇಲಾಯಿತು.

ಈ ಹಿನ್ನೆಲೆಯಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ಯಜಮಾನಿಕೆ ಸ್ಥಾಪಿಸಲು ಆರ್ಥಿಕ, ರಾಜಕೀಯ, ರಾಜತಾಂತ್ರಿಕ ಮತ್ತು ಮಿಲಿಟರಿ ಹೀಗೆ ಎಲ್ಲಾ ಸಾಧನಗಳನ್ನು ಪ್ರಯೋಗಿಸುತ್ತಿರುವುದನ್ನು ಕಾಣುತ್ತೇವೆ. ಒಂದೆಡೆ ಐಎಂಎಫ್-ವಿಶ್ವಬ್ಯಾಂಕ್, ಡಬ್ಲುಟಿಓ ಮೂಲಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಸವಾರಿ ಮಾಡಲು ಪ್ರಯತ್ನಿಸುತ್ತಿದ್ದರೆ, ಇನ್ನೊಂದೆಡೆ ಇರಾಕ್, ಯುಗೋಸ್ಲಾವಿಯಗಳಲ್ಲಿ ಮಿಲಿಟರಿ ಮಧ್ಯ ಪ್ರವೇಶ ನಡೆಸುತ್ತಿದೆ. ಬೇರೆ ದೇಶಗಳಲ್ಲೂ ಇದು ಪುನರಾವರ್ತನೆ ಮಾಡುವ ಬೆದರಿಕೆ ಹಾಕುತ್ತಿದೆ. ಅದೇ ವೇಳೆಗೆ ಪ್ಯಾಲೆಸ್ಟೈನ್, ಐರ್ಲೆಂಡ್, ಕಾಶ್ಮೀರಗಳಲ್ಲಿ ಮೂಗು ತೂರಿಸಿ ಸಾಧ್ಯವಾದಷ್ಟು ದೇಶಗಳನ್ನು ತನ್ನ ಹಿಡಿತದಲ್ಲಿ ತರಲು ಪ್ರಯತ್ನಿಸುತ್ತಿದೆ.

ಸಾಮ್ರಾಜ್ಯಶಾಹಿ ಹತೋಟಿಯ ಹಣಕಾಸು ಸಂಸ್ಥೆಗಳು ಉದಾರೀಕರಣ- ಖಾಸಗೀಕರಣ- ಜಾಗತೀಕರಣದ ಧೋರಣೆಗಳನ್ನು ಮೂರನೇ ಜಗತ್ತಿನ ಮೇಲೆ ಹೇರಿದ್ದು ಈ ಸಂದರ್ಭದಲ್ಲೇ ಎಂಬುದನ್ನು ಗಮನಿಸಬೇಕು. ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಜನಕಲ್ಯಾಣ ಬಜೆಟ್ಟನ್ನು ಕಡಿತಗೊಳಿಸುತ್ತಿವೆ ಮಾತ್ರವಲ್ಲ, ಅಭಿವೃದ್ಧಿ ಹೊಂದುತ್ತಿರುವ ದೇಶಗಳೂ ಹಾಗೆಯೇ ಸಾಮಾಜಿಕ ವಲಯದಲ್ಲಿ ಖರ್ಚುಗಳನ್ನು ಕಡಿತಗೊಳಿಸಬೇಕು ಎಂದು ಒತ್ತಾಯಿಸುತ್ತಿವೆ. ಇದು ದೇಶಗಳ ಬಡ ಜನರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಉದಾಹರಣೆಗೆ ಭಾರತದಲ್ಲಿ ಇಳಿಮುಖಗೊಳ್ಳುತ್ತಿದ್ದ ಬಡತನ ದರ ಈಗ ಏರಲಾರಂಭಿಸಿದೆ.

ಸವಾಲುಗಳೂ ಬರುತ್ತಿವೆ

ಆದರೆ ಸಾಮ್ರಾಜ್ಯಶಾಹಿಗಳ ತಂತ್ರ-ಪಿತೂರಿಗಳಿಗೆ ಪ್ರತಿಸವಾಲುಗಳೇ ಬರುತ್ತಿಲ್ಲವೆಂದೇನೂ ಅಲ್ಲ. ಸವಾಲುಗಳೂ ಬರುತ್ತಿವೆ. ಇರಾಕ್, ಯುಗೋಸ್ಲಾವಿಯಾ, ಸೋಮಾಲಿಯಗಳಲ್ಲಿ ಸಾಮ್ರಾಜ್ಯಶಾಹಿ ವಿನಾಶಕಾರ್ಯಗಳಿಗಾಗಲೀ, ಜಾಗತೀಕರಣ ಧೋರಣೆಗಳಿಗಾಗಲೀ ದಿನೇ ದಿನೇ ಪ್ರತಿರೋಧ [illegible] ವರ್ಗ ಬಲಾಬಲ ಸಾಮ್ರಾಜ್ಯಶಾಹಿಗಳ ಪರವಾಗಿರುವುದೇನೋ ನಿಜ. ಪ್ರತಿರೋಧಗಳು ಅಲ್ಲಲ್ಲಿ ನಡೆಯುತ್ತಿದೆ. ಆದರೆ ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ, ಹೊಂದುತ್ತಿರುವ ದೇಶಗಳಲ್ಲೂ ಪ್ರತಿಭಟನೆಗಳು ನಡೆಯುತ್ತಿವೆ ಎಂಬ ಸಂಗತಿಯೇ ಮುಂದೆ ಇದು ಹೆಚ್ಚು ಪರಿಣಾಮಗಾರಿಯಾಗುವ, ವ್ಯಾಪಕವಾಗುವ, ಸಮನ್ವಯಗೊಳ್ಳುವ ಸಾಧ್ಯತೆಗಳತ್ತ ಬೊಟ್ಟು ಮಾಡಿ ತೋರುತ್ತಿವೆ. ಭಾರತದಲ್ಲೂ ಪ್ರತಿಭಟನೆಗಳು ಇತ್ತೀಚಿಗೆ ಕಂಡು ಬಂದಿವೆ. ಈ ಪ್ರವೃತ್ತಿ ಇನ್ನಷ್ಟು ವ್ಯಾಪಕಗೊಳ್ಳಲಿದೆ.

ರಾಷ್ಟ್ರೀಯ ಕ್ಷಿಪಣಿ ರಕ್ಷಣೆ(ಎನ್‌ಎಂ.ಡಿ) ಮತ್ತು ರಂಗ ಕ್ಷಿಪಣಿ ರಕ್ಷಣೆ(ಟಿಎಂಡಿ) ವ್ಯವಸ್ಥೆಗಳನ್ನು ನಿರ್ಮಿಸುವ ಅಮೆರಿಕಾದ ತಂತ್ರಗಳನ್ನು ರಶ್ಯಾ ಮತ್ತು ಚೀನಾ ವಿರೋಧಿಸಿವೆ. ಇತರ ಹಲವು ದೇಶಗಳೂ ವಿರೋಧಿಸಲು ಮುಂದೆ ಬಂದಿವೆ. ಏಕೆಂದರೆ ವಿಶ್ವದ ಈಗಿರುವ ಏಕಧೃವ ವ್ಯವಸ್ಥೆಯನ್ನು ಕೊನೆಗೊಳಿಸುತ್ತಾರೆ. ಆದ್ದರಿಂದ ಏಕಧೃವ ವ್ಯವಸ್ಥೆಯ ಸ್ಥಾನದಲ್ಲಿ ಬಹುಧೃವ ವ್ಯವಸ್ಥೆ ಬೇಗನೇ ಬರಲಿದೆ.

ಅದೇ ವೇಳೆಗೆ ಎಲ್ಲಾ ಕಡೆಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಮತ್ತೆ ಒಟ್ಟುಗೂಡುತ್ತಿವೆ. ಸೋವಿಯತ್ ಒಕ್ಕೂಟದ ಪತನದ ನಂತರ ಕಮ್ಯುನಿಸಂ ಸತ್ತಿತು ಎಂಬ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ಪ್ರಚಾರ ಸುಳ್ಳಾಗುತ್ತಿದೆ. ಸ್ವಲ್ಪ ಕಾಲದೊಳಗೇ ವಿವಿಧ ದೇಶಗಳಲ್ಲಿ ಕಮ್ಯುನಿಸ್ಟರು ಮತ್ತೆ ಒಂದುಗೂಡುತ್ತಿದ್ದಾರೆ. ಕೆಲವರು ಬಂಡವಾಳಶಾಹಿ ಪ್ರಚಾರದಿಂದ ವಿಚಲಿತರಾದರೂ ಕಮ್ಯುನಿಸ್ಟರು ಮಾರ್ಕ್ಸ್‌ವಾದದ ಬಾವುಟವನ್ನು ಈಗಲೂ ಎತ್ತಿ ಹಿಡಿದಿದ್ದಾರೆ.

ಸಮಾಜವಾದಿ ದೇಶಗಳು (ಚೀನಾ, ವಿಯೆಟ್ನಾಂ, ಉತ್ತರ ಕೊರಿಯಾ ಮತ್ತು ಕ್ಯೂಬಾ) ಹೊಸ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲು ತೀವ್ರ ಕ್ರಮಗಳನ್ನು ಕೈಗೊಳ್ಳುತ್ತಿವೆ. ಅವು ಕೆಲವು ರಾಜಿಗಳನ್ನು ಮಾಡಿಕೊಳ್ಳಬೇಕಾಯಿತು. ಆದರೂ ಈಗ ಈ ಎಲ್ಲಾ ದೇಶಗಳು ಆರ್ಥಿಕ ಉತ್ಕರ್ಷವನ್ನು ಕಾಣುತ್ತಿದೆ. ವಿಶೇಷವಾಗಿ ಚೀನಾದ ತ್ವರಿತ ಪ್ರಗತಿ ಇಡೀ ವಿಶ್ವದ ಕಣ್ಣು ಕೋರೈಸಿದೆ. ವಿಯೆಟ್ನಾಂ ಯುದ್ಧದ ವಿನಾಶಲೀಲೆಯಿಂದ ಚೇತರಿಸಿಕೊಂಡು ಉಜ್ವಲ ಭವಿಷ್ಯದತ್ತ ನೋಡುತ್ತಿದೆ.

ಇನ್ನೊಂದೆಡೆ ಬಂಡವಾಳಶಾಹಿ ಮಾನವಕುಲದ ಮೂಲಭೂತ ಸಮಸ್ಯೆಗಳನ್ನು ಪರಿಶೀಲಿಸಲು ತಾನು ಅಸಮರ್ಥ ಎಂದು ಹೆಚ್ಚು-ಹೆಚ್ಚಾಗಿ ತೋರಿಸಿಕೊಳ್ಳುತ್ತಿದೆ. ಒಂದೊಮ್ಮೆ ಅಭೇದ್ಯವೆಂದು ಕಾಣುತ್ತಿದ್ದ ಪೂರ್ವ ಏಶ್ಯಾ, ದಕ್ಷಿಣ-ಪೂರ್ವ ಏಶ್ಯಾದ ದೇಶಗಳ ಆರ್ಥಿಕ ಆಟದ ಎಲೆಗಳಂತೆ ಪಟಪಟನೆ ಉದುರಿಬಿದ್ದದ್ದು ಬಂಡವಾಳಶಾಹಿಯ ಶ್ರೇಷ್ಠತೆಯ ಬಗ್ಗೆ ಮಾತನಾಡುತ್ತಿದ್ದವರ ಬಾಯಿಯನ್ನು ಸಂಪೂರ್ಣವಾಗಿ ಮುಚ್ಚಿಸಿದೆ.

ಈ ಎಲ್ಲಾ ಬೆಳವಣಿಗೆಗಳು ಹೊಸ ಶತಮಾನದಲ್ಲಿ ತೀವ್ರಗೊಳ್ಳಲಿವೆ-ಬಂಡವಾಳಶಾಹಿ ದೇಶಗಳನ್ನು ಪೀಡಿಸುತ್ತಿರುವ ಬಿಕ್ಕಟ್ಟುಗಳು, ಮೂರನೇ ಜಗತ್ತಿನ ದೇಶಗಳು ಮತ್ತು ಹಿಂದಿನ ಸಮಾಜವಾದಿ ದೇಶಗಳಲ್ಲೂ ಹದಗೆಡುತ್ತಿರುವ ಜನಗಳ ಪರಿಸ್ಥಿತಿ, ಸಮಾಜವಾದಿ ದೇಶಗಳಲ್ಲಿ ಆರ್ಥಿಕ ಉತ್ಕರ್ಷ, ವಿಶ್ವಾದ್ಯಂತ ಹೆಚ್ಚುತ್ತಿರುವ ಪ್ರತಿಭಟನೆಗಳು ಹಾಗೂ ಶಾಂತಿ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಶಕ್ತಿಗಳು ಮತ್ತೆ ಒಂದುಗೂಡುತ್ತಿರುವುದು ಇವೆಲ್ಲಾ ತೀವ್ರಗೊಳ್ಳಲಿವೆ.

ಮೇಲೆ ಪರಿಶೀಲಿಸಿದ 20ನೇ ಶತಮಾನದ ಬೆಳವಣಿಗೆಗಳೆಲ್ಲಾ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಕುರಿತ ಮಾರ್ಕ್ಸ್‌ವಾದಿ ವಿಶ್ಲೇಷಣೆ ಸರಿಯೆಂಬುದನ್ನು ಸಾಬೀತು ಮಾಡಿವೆ. ಬಂಡವಾಳಶಾಹಿಗೆ ತನ್ನ ಆಂತರಿಕ ವೈರುಧ್ಯಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಾಗಿಲ್ಲ. ತನ್ನ ಗೋರಿ ತೋಡುವ ಶ್ರಮಜೀವಿಗಳನ್ನು ಅಳಿಸಿ ಹಾಕಲು ಕೂಡ ಅದಕ್ಕೆ ಸಾಧ್ಯವಾಗಿಲ್ಲ. ಇವೆಲ್ಲಾ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಕೊನೆ ನಿಶ್ಚಿತ, ಸಮಾಜವಾದ ಮಾತ್ರವೇ ಮಾನವಕುಲದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕೊಡಬಲ್ಲದು ಎಂದು ನಮಗೆ ಆತ್ಮವಿಶ್ವಾಸ ನೀಡುತ್ತಿವೆ.

ಈ ನಿರೀಕ್ಷೆ ಮತ್ತು ಆತ್ಮವಿಶ್ವಾಸದೊಂದಿಗೆ ನಾವೀಗ ಹೊಸ ಶತಮಾನವನ್ನು ಪ್ರವೇಶಿಸುತ್ತಿದ್ದೇವೆ - ಈ ಶತಮಾನದ ಸಮಾಜವಾದದ ಶತಮಾನವಾಗಲಿದೆ ಎಂಬ ನಿರೀಕ್ಷೆ ಮತ್ತು ಆತ್ಮವಿಶ್ವಾಸದಿಂದ ಪ್ರವೇಶಿಸುತ್ತಿದ್ದೇವೆ.




ಇಲ್ಲಿ ಕೊರಳು ಬಿರಿಯುವಂತಹ ಹಾರ



ಅಲ್ಲಿ ಜೀವ ತೆಗೆದ ಸಾಲದ ಭಾರ

ಹೊಸ ಶತಮಾನದ ಹೊಸ್ತಿಲಲ್ಲಿ ಘಟಿಸಿದ ಮಹಾದುರಂತ ಈ ಗುಜರಾತ್‌ನ ಭೂಕಂಪ. ತಂದ ಸಾವು 20 ಸಾವಿರನ್ನು ದಾಟುತ್ತಿದೆ. ಇಂತಹ ಸ್ಥಿತಿಯಲ್ಲಿ ಅಲ್ಲಿನ ಜನತೆಗೆ ಎಲ್ಲರ ಸಹಾಯ ಧಾವಿಸಬೇಕಿದೆ. ಮಾನವೀಯತೆ ಮಿಡಿಯಬೇಕಿದೆ. ಬದುಕುಳಿದವರನ್ನು ರಕ್ಷಿಸಬೇಕಿದೆ.



ಕರ್ನಾಟಕದಲ್ಲಿ ಈ ವಾರ

ಪುಟ 3 ರಿಂದ

ಕಾಲೇಜುಗಳಲ್ಲಿ ಎಲ್ಲಾ ಕೋರ್ಸ್‌ಗಳು ಮಾಹಿತಿ ತಂತ್ರಜ್ಞಾನದ್ದು. ಕಂಪ್ಯೂಟರ್ ಹಾಗೂ ತಂತ್ರಜ್ಞಾನ ಮಾತ್ರವಲ್ಲ ಕಂಪ್ಯೂಟರ್ ಇಂಜಿಯನಿಯರ್‌ಗಳನ್ನು ರಫ್ತು ಮಾಡಲಾಗುವುದಂತೆ. ಲಕ್ಷ ಲಕ್ಷಗಳನ್ನು ದೋಚುವ ಈ ಸಂಸ್ಥೆಗಲ ಕೋರ್ಸ್‌ಗಳಿಗೆ ಪ್ರವೇಶಿಸುವ, ಸ್ಪರ್ಧಿಸುವ ಶಕ್ತಿ ಯಾರಿಗಿದೆ? ಮತ್ತೆ ಈ ಗುಂಪು.... ಅವರಿಗಿದೆಲ್ಲ ಭಿಕ್ಕೆ ಎತ್ತುವಕೆಲಸ.... ಎಂತಹ ಅಮಾನವೀಯ ತಾರತಮ್ಯ.

ಈ ಸಂಸ್ಥೆಗಳ ಅನುಮತಿಗಾಗಿ ಅದೆಷ್ಟು ಕೋಟಿ ರೂಪಾಯಿಗಳನ್ನು 'ವಿನಿಮಯ' ಮಾಡಿಕೊಳ್ಳಲಾಗಿದೆಯೇ? ಹಾಗೇನೋಡಿದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣ ಈ ಶಿಕ್ಷಣದ ದಂಧೆ ಆರಂಭಿಸಲು ಹೊಸ ಸಂಸ್ಥೆಗಳಿಗೆ ಅನುಮತಿ ನೀಡಲು ತುದಿಗಾಲಲ್ಲಿ ನಿಂತಿತ್ತು. ಆದರೆ ಸಾರ್ವಜನಿಕ ಒತ್ತಡ, ಟೀಕೆಗಳಿಗೆ ಹೆದರಿ ಸ್ವಲ್ಪ ಮುಂದೂಡಿತು. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಇತರೆ ಎಲ್ಲರನ್ನು ಮೀರಿಸಲು ಹಾತೊರೆಯುತ್ತಿರುತ್ತದೆ. ಈಗಾಗಲೇ ಶಿಕ್ಷಣದ ಮಾಫಿಯಾಗಳ ತವರಾಗುತ್ತಿರುವ ಕರ್ನಾಟಕಕ್ಕೆ ಎಸ್.ಎಂ.ಕೃಷ್ಣ ಸರ್ಕಾರ ಈ ನಿರ್ಧಾರ ಕರಾಳ ನಿರ್ಧಾರವಾಗಿದೆ.

ಕೊಡಗು ಪ್ರತ್ಯೇಕತೆ ತಿರಸ್ಕರಿಸಿ ನಿರ್ಣಯ

ಅತ್ತ ಕೊಡಗು ರಾಜ್ಯವನ್ನು ತೆಗೆದುಕೊಂಡೇ ಬರುವುದು ದೆಹಲಿಯ ಕೊಡಗು ರಾಜ್ಯ ಮುಕ್ತಿ ಮೋರ್ಚಾದ ನಾಯಕ ನಾಚಪ್ಪನವರು ಮೊಕ್ಕಾಂ ಹೂಡಿ ಪಿ.ಎಂ., ಹೆಚ್.ಎಂ.ಮುಂತಾದವರ ಮನೆ ಬಾಗಿಲಿಗೆ ದರ್ಶನ ಹಾಕಿ ಅವಲತ್ತುಕೊಳ್ಳುತ್ತಿದ್ದಾರೆ. ಇತ್ತ ಕಡೆ ಕೊಡಗಿನ ಜಿಲ್ಲಾ ಪಂಚಾಯತ್ 'ಪ್ರತ್ಯೇಕ ಕೊಡಗು'ನ ಬೇಡಿಕೆಗೆ ತಿರಸ್ಕರಿಸಿ ತನ್ನ ತೀವ್ರ ವಿರೋಧವನ್ನು ವ್ಯಕ್ತಪಡಿಸಿ ಐತಿಹಾಸಿಕವಾದ ನಿರ್ಣಯವನ್ನು ಕೈಕೊಂಡಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೂ ತಿಳಿಸಿದೆ. ಇದು ಅಭಿನಂದನಾರ್ಹವಾದುದು. ಪ್ರತ್ಯೇಕವಾದದ ವಿರುದ್ಧ ಹೋರಾಟವನ್ನು ಇನ್ನೂ ಬಲಗೊಳಿಸುವಂತಹದ್ದು. ಆದರೆ ಇದು ಇಲ್ಲಿಗೆ ಮುಗಿಯಲಾರದು. ಆದ್ದರಿಂದ ಈ ಪ್ರಕ್ರಿಯೆ ಮುಂದುವರಿಯಬೇಕು. ಜನರ ನಡುವಿನಿಂದ ಪ್ರತ್ಯೇಕವಾದಿಗಳು ದೂರವಾಗುವಂತೆ ರಾಜಕೀಯ ಪ್ರಚಾರ, ಕ್ರಿಯೆಗಳು ನಡೆಯಬೇಕು.

ಇದರಿಂದ ಪ್ರತ್ಯೇಕತಾವಾದಿಗಳೂ ಅವರ ಬೆಂಬಲಿಗರು ಕುಪಿತವಾಗಿದ್ದಾರೆ. ಹಲವು ಚರ್ಚೆಗಳ ನಡುವೆ ಈ ನಿರ್ಣಯವನ್ನು ಮಂಡಿಸಿದ ಸಿಪಿಐ(ಎಂ)ನ ಜಿಲ್ಲಾ ಪಂಚಾಯತ್ ಸದಸ್ಯ ಕಾಳಯ್ಯ ಹಾಗೂ ಬಂಡಾಯ ಕಾಂಗ್ರೆಸ್‌ನ ಶಶಿಧರ್‌ರವರಿಗೆ ಪ್ರಾಣಭಯದ ಬೆದರಿಕೆ ಒಡ್ಡಲಾಗುತ್ತಿದೆ. ಇಂತಹ **ಫ್ಯಾಸಿಸ್ಟ್ ರೀತಿಯ ಕೃತ್ಯಗಳನ್ನು ಸರ್ಕಾರ ದಮನ** ಮಾಡಬೇಕು. ರಕ್ಷಣೆ ಕೊಡಬೇಕು. ಕೃಷ್ಣ ಸರ್ಕಾರವೂ ದೃಢಕ್ರಮ ವಹಿಸಬೇಕು.

ಈ ನಿರ್ಣಯದಿಂದಾಗಿ ರಾಜ್ಯದ ಸಚಿವ ಎಂ.ಎಂ.ನಾಣಯ್ಯನವರು 'ಇರುಸು ಮುರುಸು' ಅನುಭವಿಸುತ್ತಿದ್ದಾರೆಂದು ಕೊಡಗಿನ ಸುದ್ದಿ ಮಾಧ್ಯಮಗಳು ವರದಿ ಮಾಡಿವೆ. ಹೀಗೆ ಮುಂದುವರಿದಲ್ಲಿ ಸಚಿವ ಸಂಪುಟದಿಂದ ಅವರಿಗೆ ಮೋಕ್ಷ ಕಾಣಿಸಬೇಕು. ಕೃಷ್ಣ ಏನನ್ನುತ್ತಾರೆ?

ಜನರ ಸಂಕಟ ಗಣಿಸದ ಪ್ರಧಾನಿ

ಪ್ರಧಾನಿ ವಾಜಪೇಯಿಯವರು ಕರ್ನಾಟಕಕ್ಕೆ ಬಂದರು. ಹೋದರು. ಕರಾವಳಿಯಿಂದ ಬೆಂಗಳೂರಿನವರೆಗೂ ಎರಡುದಿನಗಳೂ ಬಿಡುವಿಲ್ಲದ ಕಾರ್ಯಕ್ರಮಗಳು. ಅವರು ಕನಕನ ಕಿಂಡಿಯಲ್ಲಿ ಇಣುಕಿದ್ದು, ಆತ್ಮ ಪರಮಾತ್ಮ ಭಕ್ತಿ ಬಗ್ಗೆ, ಪೇಜಾವರರ ಬಗ್ಗೆ ಗುಣಗಾನ ಮಾಡಿದರು. ಬಡತನ, ದಾರಿದ್ರಗಳ ಬಗ್ಗೆ ನೊಂದುಕೊಂಡರು.

ಆದರೆ.......

ಪ್ರಧಾನಿಯವರ ಪ್ರವಾಸದ ಸಂದರ್ಭದಲ್ಲಿ ರಾಜ್ಯದಲ್ಲಿ ಆಲೂಗಡ್ಡೆ ಬೆಳೆದ ರೈತ, ಬೆಳೆಗೆ ಬೆಲೆ ಸಿಗದೇ ಸಾಲದ ಭಾದೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ಧಾರುಣ ಘಟನೆ ಅವರ ಗಮನ ಸೆಳೆಯಲಿಲ್ಲ. ಬೆಲೆ ಇಲ್ಲದೇ, ಪರದಾಡುವ, ಲಾಠಿ ಚಾರ್ಜು, ಗೋಲಿಬಾರ್‌ಗೆ ಎದುರಿಸುವ ರೈತರ ಸಂಕಟ ಅವರ ಕೊನೆಗಣ್ಣಿಗೂ ಗೋಚರಿಸಲಿಲ್ಲ. ಪರಿಹಾರವನ್ನು ಘೋಷಿಸಲಿಲ್ಲ. ಇಲ್ಲೆಲ್ಲಾ ಚಳುವಳಿ ಮಾಡುವ ಬಿಜೆಪಿಗಳು ಯಾಕೆ ಪ್ರಧಾನಿಗೆ ಪಟ್ಟು ಹಿಡಿಯಲಿಲ್ಲ. ಶ್ವೇತಪತ್ರ ಪ್ರಕಟಿಸಿ ಎಂದು ಗೋಗರೆವ ಮುಖ್ಯಮಂತ್ರಿ ಕೃಷ್ಣ ಯಾಕೆ ಇಡೀ ಜನತೆಯ ಪ್ರತಿನಿದಿಯಾಗಿ... ಪ್ರಧಾನಿಗೆ ಮನವಿ ಸಲ್ಲಿಸಿ, ಬೆಂಬಲ ಬೆಲೆಗೆ ಹಣ ನೀಡಲು ಆಗ್ರಹಿಸಲಿಲ್ಲ. ಜನವರಿ 19 ರಂದು ವಾಜಪೇಯಿ ಭೂತದಹನ ಮಾಡಬೇಡಿರೆಂದು ವಿದ್ಯಾರ್ಥಿ-ಯುವಜನರನ್ನು ಗೋಗರೆದ ಪೋಲೀಸರ ಬಾಯಿಯನ್ನೇಕೆ ಮುಚ್ಚಲಿಲ್ಲ...... ವಾಜಪೇಯಿ, ಕೃಷ್ಣರ ಡೊಂಗಿತನಕ್ಕೆ ಎಣೆಯುಂಟೇ.....ವಿಶ್ವ ವಾಣಿಜ್ಯ ಸಂಘಟನೆಯ ಧಣಿಗಳ ಭಯವೇ? ಈ ನಿಷ್ಠಾಳಜಿಯ, ಕಪಟಿಗಳಿಗೆ, ಕಟುಕರಿಗೆ....

⊖

ಜನರ ಪ್ರತಿರೋಧ ಆಳಗೊಳ್ಳಲಿ ಸರ್ಕಾರವನ್ನು ಸೋಲಿಸಲಿ

ಪುಟ 5 ರಿಂದ

ಸಾಕಷ್ಟು ಕೂಲಿಯನ್ನೂ ಪಡೆಯುತ್ತಿಲ್ಲ. ಯಾವುದೇ ಸಾಮಾಜಿಕ ಭದ್ರತೆಯೂ ಅದಕ್ಕಿಲ್ಲ.

ಬಿಜೆಪಿಯ ನಿರ್ಲಕ್ಷ್ಯದ ಪರಿ

ಇಲ್ಲಿಯೂ ಬಿಜೆಪಿಯ ನಿರ್ಲಕ್ಷ್ಯದ ಪರಿ ಎದ್ದು ಕಾಣುತ್ತಿದೆ. ಸರಕಾರ ಭಾರತೀಯ ಉದ್ಯಮಿಗಳಿಗೆ ಸಮತಟ್ಟಿನ ಆಟದ ಮೈದಾನ(ಸಮಾನ ಅವಕಾಶ) ಕೊಡಿಸಿದ್ದೇವೆ ಎನ್ನುತ್ತಿದೆ. ಆದರೆ ರೈತರ ಮಟ್ಟಿಗೆ ಅದೂ ಇಲ್ಲ. ಡಬ್ಲ್ಯು.ಟಿ.ಓ. ಒಪ್ಪಂದ ಏನೇ ಹೇಳಲಿ ಅಮೆರಿಕನ್ ಸರಕಾರ ತನ್ನ ಪ್ರತಿ ರೈತನಿಗೆ 30000 ಡಾಲರ್(ಸುಮಾರು 14 ಲಕ್ಷ ರೂ) ಸಬ್ಸಿಡಿ ಕೊಡುತ್ತಿದೆ. ಅದೇ ರೀತಿ ಯುರೋಪಿಯನ್ ಒಕ್ಕೂಟ, ಜಪಾನ್ ತಮ್ಮ ರೈತರಿಗೆ ಕೊಡುತ್ತಿದೆ. ಆದರೆ ಭಾರತದ ರೈತನಿಗೆ ಇದುವರೆಗೆ ಕೊಡುತ್ತಿದ್ದ ಸಬ್ಸಿಡಿಯನ್ನು ಹಣಕಾಸು ಕೊರತೆಯೋ, ಇನ್ಯಾವುದೋ ನೆವ ಹೇಳಿ ಕಸಿದುಕೊಳ್ಳಲಾಗುತ್ತಿದೆ. ಹೀಗಿರುವಾಗ ಭಾರತೀಯ ರೈತ ಆಮದಾದ ಕೃಷಿ ಸರಕುಗಳೊಂದಿಗೆ ಸ್ಪರ್ಧೆ ನಡೆಸುವುದು ಹೇಗೆ?

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಳಚಿ ಹಾಕಿದ್ದರಿಂದ ಗ್ರಾಮೀಣ, ನಗರ ಪ್ರದೇಶಗಳ ಬಡಜನರ ಆಹಾರ ಭದ್ರತೆಗೆ ಕೂಡಾ ಸಂಚಕಾರ ಬಂದಿದೆ. ಎಫ್.ಸಿ.ಐ. ಗೋದಾಮುಗಳಲ್ಲಿ 40 ಲಕ್ಷ ಟೌನ್ ಧಾನ್ಯಗಳಿರುವಾಗ ಅವರನ್ನು ಆಹಾರದಿಂದ ವಂಚಿಸಲಾಗುತ್ತಿದೆ. ಅದರಲ್ಲಿ ಸಾಕಷ್ಟು ದಾಸ್ತಾನುಕೊಳೆಯುತ್ತಲೂ ಇದೆ. ಆದರೆ ಆಹಾರ ಧಾನ್ಯಗಳನ್ನು ಬಡವರಿಗೆ ಸಬ್ಸಿಡಿ ದರಗಳಲ್ಲಿ ಒದಗಿಸುವ ಬದಲು ಈ ಸರಕಾರ ಅವನ್ನು ಅಗ್ಗ ದರದಲ್ಲಿ ರಫ್ತು ಮಾಡುವ ಯೋಜನೆಯಲ್ಲಿದೆ. ಇಲ್ಲಿನ ಸಂದೇಶ ಸ್ಪಷ್ಟ - ವಿದೇಶಿಯರಿಗೆ ಸಬ್ಸಿಡಿ, ಭಾರತೀಯ ಬಡವರಿಗೆ ಏನಿಲ್ಲ

ಪ್ರತಿರೋಧ ಬೆಳೆಯುತ್ತಿದೆ

ಭಾರತೀಯ ಜನ ಸಮೂಹಗಳ ಪ್ರತಿರೋಧ ಬೆಳೆಯುತ್ತಿರುವ ಇಂತಹ ಒಂದು ಸನ್ನಿವೇಶದಲ್ಲಿ ಕಳೆದ ಕೆಲವು ತಿಂಗಳಲ್ಲಿ ಕಾರ್ಮಿಕರ, ನೌಕರರ, ಮಧ್ಯಮ ವರ್ಗಗಳ ಹಲವು ವಿಭಾಗಗಳು ಹಲವಾರು ಹೋರಾಟ ನಡೆಸಿದ್ದಾರೆ. ಇವುಗಳಲ್ಲಿ ಹಲವು ಸ್ವಯಂಸ್ಫೂರ್ತವಾಗಿ ನಡೆದವುಗಳು. ಜನಗಳಲ್ಲಿನ ಅಸಂತುಷ್ಟಿಯನ್ನು ಇದು ತೋರಿಸುತ್ತದೆ.

ರೈತ-ಕೃಷಿಕೂಲಿಕಾರರು' ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಗಳ ವಿರುದ್ಧ ಹೋರಾಟದ ಕಣಕ್ಕೆ ಇಳಿಯುತ್ತಿದ್ದಾರೆ.

ಜನತೆಯ ಈ ಅಸಂತುಷ್ಟಿಗೆ ಒಂದು ಸಂಘಟಿತ, ಪ್ರಜಾಸತ್ತಾತ್ಮಕ ದಿಕ್ಕು ನೀಡಲು ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿಗಳು, ಯುವ ಜನರು, ಮಹಿಳಾ ಸಂಘಟನೆಗಳು ಪ್ರಯತ್ನಿಸುತ್ತಿರುವುದು ಸ್ವಾಗತಾರ್ಹ ಸಂಗತಿ. ತಕ್ಷಣದಲ್ಲೇ ಏಳು ರೈತ-ಕೃಷಿಕೂಲಿಕಾರರ ಸಂಘಟನೆಗಳು ಪೆಬ್ರವರಿ 5 ರಿಂದ 7 ರ ವರೆಗೆ ಕೇದ್ರ ಮತ್ತು ರಾಜ್ಯ ಸರ್ಕಾರಗಳ ಕಾಲೇಜುಗಳ ಪಿಕೆಟಿಂಗ್ ನಡೆಸುವ ಅಖಿಲ ಭಾರತ ಕಾರ್ಯಕ್ರಮಕ್ಕೆ ಸಿದ್ಧರಾಗುತ್ತಿದ್ದಾರೆ. ಇದಕ್ಕೆ ದೇಶಾದ್ಯಂತ ಬೃಹತ್ ಬೆಂಬಲ ವ್ಯಕ್ತವಾಗುವ ಸಂಭವವಿದೆ.

ಆದರೆ ಇಷ್ಟೇ ಸಾಲದು. ಬಿಜೆಪಿ ನೇತೃತ್ವದ ಸರಕಾರದ ವಿರುದ್ಧ ಪ್ರತಿರೋಧವನ್ನು ಇನ್ನಷ್ಟು ವ್ಯಾಪಕಗೊಳಿಸಬೇಕು, ಆಳಗೊಳಿಸಬೇಕು, ಜನಸಮೂಹಗಳ ಎಲ್ಲಾ ಸಂಘಟನೆಗಳು, ವಿಶೇಷವಾಗಿ ಎಡ ನೇತೃತ್ವದ ಸಂಘಟನೆಗಳು ಜನಸಮೂಹಗಳನ್ನು ಸಾರ್ವತ್ರಿಕವಾಗಿ ಅಣಿನೆರೆಸುವ ಈ ಪ್ರಕ್ರಿಯೆ ತೀವ್ರಗೊಳ್ಳುವಂತೆ ಮಾಡಬೇಕು. ಬಿಜೆಪಿ ಸರ್ಕಾರದ ಜನ-ವಿರೋಧಿ ದೇಶ ವಿರೋಧಿ ಮತ್ತು ಧರ್ಮನಿರಪೇಕ್ಷ-ವಿರೋಧಿ ಕುಕೃತ್ಯಗಳನ್ನು ಬಯಲಿಗೆಳೆಯಬೇಕು, ಸೋಲಿಸಬೇಕು.

⊖

ಚಾರ್ಲಿ ಚಾಪ್ಲಿನ್ ಮಾಡರ್ನ್ ಟೈಮ್ಸ್ ಮತ್ತು ಕಮ್ಯುನಿಸಂ

ಕೈಗಾರಿಕಾ ಆಧುನಿಕತೆಯು ಬಂಡವಾಳಶಾಹಿ ವ್ಯವಸ್ಥೆಯ ಸಂಕೇತ. ಅದರೊಡನೆ ಒಡನಾಡುವ, ಸಂಪತ್ತು ಸೃಷ್ಟಿಸುವ ಕಾರ್ಮಿಕ, ಶ್ರಮಿಕ ಶಕ್ತಿಯನ್ನು ಜೀರ್ಣಿಸಿಕೊಂಡ ರಭಸದ ಯಂತ್ರದಂತೆ, ಸರಕಿನಂತೆ ಅಸ್ತಿತ್ವ ಇಲ್ಲದಂತೆ ಯಂತ್ರದಲ್ಲಿ ಯಂತ್ರವಾಗಿ ಬಿಡುವ ಸ್ಥಿತಿ, ಜೊತೆಗಿದ್ದು, ಎಲ್ಲದರ ಸೃಷ್ಟಿಗೆ ಕಾರಣವಾಗಿರುವ ಶ್ರಮಿಕ ಪರಕೀಯನಾಗಿರುವ ಪರಿಸ್ಥಿತಿ, ಇದರ ಒಟ್ಟು ಪರಿಣಾಮಗಳಲ್ಲಿ ದುಷ್ಪರಿಣಾಮಗಳಿಂದ ಬಳಲುವ ಕಾರ್ಮಿಕ ಚಾಪ್ಲಿನ್‌ಗೆ ಹೊಸ ಜೀವ, ದಿಕ್ಕು ಅಸ್ತಿತ್ವ ನೀಡಿದ್ದ, ನೀಡಿದ್ದು ಕಾರ್ಮಿಕರ ಚಳುವಳಿ. ಇದು ವ್ಯವಸ್ಥೆಯೊಂದಿಗೆ ಮುಖಾಮುಖಿಯಾಗುವಲ್ಲಿ ಮಾತ್ರವೇ ಬದುಕು ಕಂಡುಕೊಳ್ಳುತ್ತದೆ. ಕೈಗಾರಿಕಾ ಕ್ರಾಂತಿ ತಂದ ಆರ್ಥಿಕ, ಸಾಮಾಜಿಕ ಸ್ಥಿತ್ಯಂತರಗಳನ್ನು ಮತ್ತು ದುರಂತಮಯವಾಗುತ್ತಿರುವ ಕಾರ್ಮಿಕ ಬದುಕನ್ನು ಸಮಸ್ಯೆಗಳನ್ನು ಹುಟ್ಟುವ ಸಂಘರ್ಷಗಳನ್ನು ಮನಮುಟ್ಟುವಂತೆ ವಿವರಿಸುವ ಚಿತ್ರ 'ದಿ ಮಾಡ್ರನ್ ಟೈಮ್ಸ್' ಚಾಪ್ಲಿನ್ ಚಿತ್ರಗಳೆಲ್ಲವೂ ಅವರ ಮಹಾನ್ ಪ್ರತಿಭೆಗೆ,ಆಳವಾದ ಅಧ್ಯಯನಶೀಲತೆಗೆ ಸಾಕ್ಷಿಯಾಗಿ ನಿಲ್ಲುವಂತಹುಗಳು. ಇಂತಹ ಚಿತ್ರ ಆಳುವವರ ಕೆಂಗಣ್ಣಿಗೆ ಗುರಿಯಾಗದ್ದು ಸಹ ಸಹಜವೇ.

....ಚಾಪ್ಲಿನ್ ಸ್ಟೀಲ್ ಫ್ಯಾಕ್ಟರಿಯಲ್ಲಿ ಕಾರ್ಮಿಕ, ಬೆಲ್ಟ್ ಮೇಲೆ ಇಡೀದಿನ ಎರಡು ನೆಟ್‌ಗಳನ್ನು ಬಿಗಿದೂ ಬಿಗಿದೂ ಮಾನಸಿಕವಾಗಿ ಅಸ್ವಸ್ಥಗೊಂಡು ಚಾಪ್ಲಿನ್ ಆಸ್ಪತ್ರೆ ಪಾಲಾಗುತ್ತಾನೆ. ಫ್ಯಾಕ್ಟರಿಯಲ್ಲಿ ಕೆಲಸ ಮಾಡುವಾಗ ಚಾಪ್ಲಿನ್ ಕಣ್ಣಿಗೆ ಇಡೀ ಪ್ರಪಂಚವೇ ಫ್ಯಾಕ್ಟರಿಯಂತೆ ಕಾಣುತ್ತದೆ, ಕಿವಿಯ ತುಂಬ ಫ್ಯಾಕ್ಟರಿಯ ಸದ್ದು, ಸುಂದರ ಸ್ತ್ರೀಯರ ಉಡುಪು, ವಕ್ಷ ಸ್ಥಳ ಬಣ್ಣ ಬಣ್ಣದ ಗುಂಡಿಗಳು, ಇವೆಲ್ಲ ಅವನ ಕಣ್ಣಿಗೆ ಫ್ಯಾಕ್ಟರಿಯ ಬೆಲ್, ನೆಟ್, ಬೋಲ್ಟ್‌ಗಳಂತೆಯೇ ಗೋಚರಿಸುತ್ತವೆ.




ಚಾಪ್ಲಿನ್ ಆಸ್ಪತ್ರೆಯಿಂದ ಬಿಡುಗಡೆಯಾಗುತ್ತಾನೆ, ಲಾರಿಯ ಡ್ರೈವರ್ ದಯೆಯಿಂದ ನಿಗದಿತ ಸ್ಥಳದವರೆಗೆ ಪ್ರಯಾಣ ಮಾಡಿ ದುರ್ದೈವವಶಾತ್ ಚಾಪ್ಲಿನ್ ಕೈಯಲ್ಲಿ ಒಂದು ಕೆಂಪುಬಣ್ಣದ ಬಟ್ಟೆ ಹಿಡಿದುಕೊಂಡೇ ಕೆಳಗಿಳಿಯುತ್ತಾನೆ. ಅಷ್ಟರಲ್ಲಿ ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನೆ ಕೂಗುತ್ತಾ ಬಂದ ಕಾರ್ಮಿಕರ ಮೆರವಣಿಗೆ ಅವನನ್ನು ಕೊಚ್ಚಿಕೊಂಡು ಹೋಗುತ್ತದೆ. ಕೆಂಪು ಬಣ್ಣದ ಬಟ್ಟೆ ಹಿಡಿದುಕೊಂಡಿದ್ದ ಚಾಪ್ಲಿನ್ನು ಕಾರ್ಮಿಕ ಸಂಘದ ಮುಖಂಡನೆಂದೇ ಭಾವಿಸಿ ಪೋಲೀಸರು ಅವನನ್ನು ಬಂಧಿಸಿ ಜೈಲಿನಲ್ಲಿಡುತ್ತಾರೆ.

ಚಾಪ್ಲಿನ್ ಜೈಲಿನಿಂದ ಬಿಡುಗಡೆಗೊಂಡು ಬರುತ್ತಿದ್ದಾನೆ, ಒಂದು ತುಂಡು ಬ್ರೆಡ್ ಕದ್ದಿರುವಳೆಂಬ ಕಾರಣದಿಂದ ಬೇವಾರ್ಸಿ ಹುಡುಗಿ (ಪೌಲೆಟ್)ಯನ್ನು ಪೋಲೀಸರು ತಮ್ಮ ಸುಪರ್ದಿಗೆ ತೆಗೆದುಕೊಳ್ಳುತ್ತಿದ್ದಾರೆ.

ಚಾಪ್ಲಿನ್ ಆ ಒಂದು ತುಂಡು ಬ್ರೆಡ್ ಕದ್ದ ಅಪವಾದವನ್ನು ತನ್ನ ಮೇಲೆ ಹಾಕಿಕೊಂಡು ಆ ಅನಾಥೆಯನ್ನು ಅವರಿಂದ ಬಿಡಿಸಲು ಪ್ರಯತ್ನಿಸುತ್ತಾನೆ. ಆಕೆಯ ಬದಲಿಗೆ ತನ್ನನ್ನು ಅರೆಸ್ಟ್ ಮಾಡಿ ಜೈಲಿಗೆ ಕಳಿಸಿರಿ ಎಂದು ಪೋಲೀಸರನ್ನು ಒತ್ತಾಯಿಸುತ್ತಾನೆ. ಹೊರಗಡೆ ಇರುವ ಸಮಾಜಕ್ಕಿಂತ ಜೈಲಿನಲ್ಲಿರುವುದೇ ಸೌಖ್ಯ ಎಂಬುದು ಅವನ ವೈಯಕ್ತಿಕ ಅನುಭವ. ಸರಿ! ಪೋಲೀಸರು ಅವರೀರ್ವರನ್ನೂ ವ್ಯಾನಿನಲ್ಲಿ ಹತ್ತಿಸಿಕೊಂಡು ಒಯ್ಯುತ್ತಾರೆ ದಾರಿ ಮಧ್ಯದಲ್ಲಿ ಚಾಪ್ಲಿನ್ ಮತ್ತು ಪೌಲೆಟ್ ಚಲಿಸುವ ವ್ಯಾನಿನಿಂದ ಜಿಗಿದು ತಪ್ಪಿಸಿಕೊಳ್ಳುತ್ತಾರೆ. ಅಂದಿನಿಂದ ತಾವಿಬ್ಬರು ಒಟ್ಟಿಗೆ ಕೂಡಿ ಬಾಳಬೇಕೆಂದು ನಿರ್ಧರಿಸುತ್ತಾರೆ.

ಆದರೆ ಜೀವಿಸಲು ಪೂರಕವಾದ ವಾತಾವರಣ ಹೊರಗಡೆ ಇರುವುದಿಲ್ಲ. ಎಲ್ಲಿ ನೋಡಿದರು ನಿರುದ್ಯೋಗ, ದಾರಿದ್ರ್ಯ, ಹಣದುಬ್ಬರ, ಚಳುವಳಿಗಳು, ಲಾಕೌಟ್ ಘೋಷಿಸಿರುವ ಕಾರ್ಖಾನೆಗಳು, ಹಿಂಸೆ, ಗಲಾಟೆ, ಈ ಎಲ್ಲ ಕಠೋರ ವಾಸ್ತವದ ನಡುವೆ ಅವರಿಬ್ಬರು ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತ ಬದುಕುತ್ತಿರುತ್ತಾರೆ. ಅವರು ಒಂಚೂರು ನೆರಳಿಗಾಗಿ ವಿಫುಲ ಪ್ರಯತ್ನ ನಡೆಸುತ್ತಾರೆ. ಆಗಿನ ವಸ್ತು ಸ್ಥಿತಿ ಅವರಿಗೆ ವಿರುದ್ಧವಾಗಿರುತ್ತದೆ. ಅವರು ಒಂದಲ್ಲಾ ಒಂದು ಕಷ್ಟ ಅನುಭವಿಸಬೇಕಾಗಿ ಬರುತ್ತದೆ. ಈ ನರಕ ಅನುಭವಿಸುವುದಕ್ಕಿಂತ ಎಲ್ಲಿಗಾದರೂ ಓಡಿ ಹೋಗಬೇಕೆಂದು ಪ್ರಯತ್ನಿಸುವ ಪೌಲೆಟ್, ಪ್ರತಿಯೊಂದನ್ನು ಧೈರ್ಯದಿಂದ ಎದುರಿಸಿ ಗೆಲ್ಲಬೇಕೆಂದು ಬುದ್ಧಿ ಹೇಳುವ ಚಾಪ್ಲಿನ್.

ಔದ್ಯೋಗಿಕ ಕ್ರಾಂತಿಯಿಂದ ಸಮಾಜದ ಮೇಲಾಗಿರುವ ದುಷ್ಪರಿಣಾಮವನ್ನು ಚಾಪ್ಲಿನ್ ಸೂಕ್ಷ್ಮವಾಗಿ ಹೇಳುವ ಪ್ರಯತ್ನ ಮಾಡಿದ್ದಾನೆ. ನಗಿಸುವುದರ ಬೆನ್ನ ಹಿಂದೆಯೇ ವಿಷಾದವನ್ನು ತರುತ್ತಾನೆ. ಯಾವ ಶಬ್ದಗಳ, ಮಾತುಗಳ ಸಹಾಯ ಪಡೆಯದೆ ಅನೇಕ ವಿವರಗಳನ್ನು, ದುರಂತಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವ ಪ್ರಯತ್ನ ಮಾಡಿದ್ದಾನೆ. ಕಾರ್ಮಿಕರ ದುರಂತಮಯ ಬದುಕಿನ ಬಗ್ಗೆ ಔದ್ಯೋಗಿಕ ಕ್ರಾಂತಿಯಿಂದಾಗುವ ಸಾಮಾಜಿಕ ಸ್ಥಿತ್ಯಂತರದ ಬಗ್ಗೆ ಹೇಳುತ್ತಲೇ ಚಾಪ್ಲಿನ್ ಒಂದು ಸ್ಥಿರ ನಿವಾಸಕ್ಕಾಗಿ ಕ್ರಮಿಸುವ ಟ್ರಾಂಪ್‌ನನ್ನು ಮಧ್ಯಮ ವರ್ಗದ ಪ್ರತಿನಿಧಿಯಾಗಿ ನಿಲ್ಲಿಸುತ್ತಾನೆ.



ಟ್ರಾಂಪ್‌ನ ವರ್ತಮಾನ ಕಾಲವೇ ಮಾಡರ್ನ್ ಟೈಮ್ಸ್. ಚಾಪ್ಲಿನ್‌ನ ಪ್ರತಿಯೊಂದು ಚಿತ್ರದಲ್ಲಿ ಟ್ರಾಂಪ್ ಬೀದಿ ಭಿಕಾರಿ. ಅವನಿಗೆ ಒಂದು ಸಾಮಾಜಿಕ ವ್ಯಕ್ತಿತ್ವ ಇಲ್ಲ. ಎಲ್ಲಿ ತುಚ್ಛೀಕರಿಸಿಸಲ್ಪಟ್ಟಿರುವರೋ, ಅಲ್ಲಿ ಅವನು ಇರುವ ಪ್ರಯತ್ನ ಮಾಡುತ್ತಾನೆ. ಯಾರು ತುಚ್ಛೀಕರಿಸಲ್ಪಟ್ಟಿರುವರೋ ಅವರಿಗೆ ಆಸರೆ ನೀಡಲು ಪ್ರಯತ್ನಿಸುತ್ತಾನೆ. ಹೀಗಾಗಿ ಟ್ರಾಂಪ್ ಪ್ರತಿಯೊಂದು ಚಿತ್ರದಲ್ಲಿ ನಿರ್ಗತಿಕ. ಸಿಟಿಲೈಟ್ಸ್‌ನಲ್ಲಿ ಅವನು ಕೆಲವೊಮ್ಮೆ ಶ್ರೀಮಂತನ ಭವ್ಯ ಬಂಗಲೆಯಲ್ಲಿ, ಕೆಲವೊಮ್ಮೆ ಕುರುಡಿಯ ಮುರುಕು ಝೋಪಡಿಯಲ್ಲಿರುತ್ತಾನೆ. ಮಾಡರ್ನ್ ಟೈಮ್ಸ್‌ನಲ್ಲೂ ಅಷ್ಟೆ. ಕೆಲವು ದಿನ ಆಸ್ಪತ್ರೆಯಲ್ಲಿ, ಕೆಲವು ದಿನ ಜೈಲಿನಲ್ಲಿ, ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ, ವಿಲಾಸೀ ಹೋಟಲ್‌ನಲ್ಲಿ, ಬೀದಿಯಲ್ಲಿ ಅಷ್ಟೆ ಏಕೆ ಕೊನೆಗೆ ಪೌಲೆಟ್ ತೋರಿಸುವ ನಾಯಿಗೂಡಿನೊಳಗೂ ವಾಸಿಸುವ ಪ್ರಯತ್ನ ಮಾಡುತ್ತಾನೆ. ಅಲ್ಲಿಂದ ಮತ್ತೆ ಬೀದಿಗೆ ಬರುತ್ತಾನೆ. ಅವನು ಕೊನೆ ಮೊದಲಿಲ್ಲದ ನಿರಾಶ್ರಿತ. ಅವನು ಸೋಲು ಆಯಾಸಗಳನ್ನರಿಯದ ಯಾತ್ರಿಕ. ಅವನ ಯಾತ್ರೆಗೆ ಒಂದು ನಿರ್ದಿಷ್ಟವಾದ ಗುರಿ ಇರುವುದಿಲ್ಲ. ಇಂಥ ಕಾರಣಗಳಿಂದಾಗಿ ಮಾಡರ್ನ್ ಟೈಂಸ್ Keep moving no body keep moving ಎಂಬೊಂದು ವಾಕ್ಯದೊಂದಿಗೆ ಮುಗಿಯುತ್ತದೆ.

ಮಾಡರ್ನ್ ಟೈಮ್ಸ್ ಅಮೇರಿಕಾದ ರಿವೋಲಿ ಥಿಯೇಟರಿನಲ್ಲಿ 1936 ರಲ್ಲಿ ಜನವರಿ 5 ರಂದು ಬಿಡುಗಡೆ ಆಯಿತು. ಆ ಚಿತ್ರವನ್ನು ನೋಡಿ ಜನ ಕೊಂಡಾಡಿದರು. ಪ್ರತಿಧ್ವನಿಸುವ ನಿಶ್ಯಬ್ದವೆಂದು(Resoundng Silence) ಪ್ರಶಂಸಿಸಿದರು. ಇದು ಕಮ್ಯುನಿಸ್ಟರ ಚಿತ್ರವೆಂದು ಮಾಡರ್ನ್‌ಟೈಮ್ಸ್ ಬಿಡುಗಡೆಯಾಗುವುದಕ್ಕಿಂತ ಮೊದಲೇ ಪತ್ರಿಕೆಗಳು ಪ್ರಚಾರ ಶುರು ಮಾಡಿದ್ದವು. ಅಮೇರಿಕಾದ ಕೈಗಾರಿಕೋದ್ಯಮಿಗಳು ಮಾಡರ್ನ್ ಟೈಮ್ಸ್ ಸೃಷ್ಟಿಕರ್ತ ಚಾಪ್ಲಿನನ್ನು ಟೀಕಿಸಿದರು. ಕೈಗಾರಿಕಾ ಯುಗದಲ್ಲಿ ದುರಂತಮಯವಾಗುತ್ತಿರುವ ಶ್ರಮಜೀವಿಗಳ ಬದುಕನ್ನು ಹೃದಯಂಗಮವಾಗಿ ಚಿತ್ರಿಸಿರುವ ಮಹೋನ್ನತ ಚಿತ್ರವೆಂಬ ಹೆಗ್ಗಳಿಕೆಗೆ ಚಾಪ್ಲಿನ್‌ನ ಮಾಡರ್ನ್ ಟೈಮ್ಸ್ ಪಾತ್ರವಾಯಿತು. (ಆದರೆ ಅಮೆರಿಕಾ ಕಟ್ಟಾ ಕಮ್ಯುನಿಸ್ಟ್ ವಿರೋಧಿ ಸರಕಾರ ಚಾಪ್ಲಿನನ್ನು ಗಮನಿಸಲು ಅನುಕೂಲವಾಗುವಂತೆ ಒಂದು ಕಪ್ಪುಚುಕ್ಕೆಯನ್ನು ಅವನ ಬಯೋಡಾಟಾದ ಮೇಲಿರಿಸಿತು)

ಮುಂದಿನ ವಾರ
ಚಾಪ್ಲಿನ್ ಮತ್ತು ಕಮ್ಯುನಿಸಂ



ವಂದೇ ಮಾತರಂ

ಕಿವಿಯಲ್ಲಿ ಹತ್ತಿ ಇದ್ದರೆ ಒಳ್ಳೇದು



ಇತ್ತೀಚಿಗೆ ಭಾರತೀಯ ಚಿತ್ರರಂಗದಲ್ಲಿ ಹೊಸ 'ಟ್ರೆಂಡ್' ಶುರುವಾಗಿದೆ. ಬಹುಪಾಲು ಚಿತ್ರಗಳಲ್ಲಿ ದೇಶ ಕಬಳಿಸಲು ನಿಂತ ಭಯೋತ್ಪಾದಕರು ಅವರ ವಿರುದ್ಧ ಸೆಟೆದು ನಿಂತ ಭಾರತೀಯ ಹೀರೋಗಳು. ಈ ವಿಷಯಕ್ಕೆ ಸಂಬಂಧಪಟ್ಟ ಹಲವು ಚಿತ್ರಗಳು ತೆರೆಕಂಡಿದ್ದು ಹಲವು ನಿರ್ದೇಶಕರು ತಮಗೆ ತೋಚಿದಂತೆ ಈ ವಿಚಾರವನ್ನು ಅರ್ಥೈಸಿಕೊಂಡು ಚಿತ್ರದಲ್ಲಿ ಅಳವಡಿಸಿ ಜನಸಾಮಾನ್ಯರ ದಿಕ್ಕು ತಪ್ಪಿಸುತ್ತಿರುವುದಂತು ಸ್ಪಷ್ಟ. ಇದೇ ಕೆಲಸವನ್ನು ನಿರ್ದೇಶಕ ಓಂಪ್ರಕಾಶ್ ತಮ್ಮ 'ವಂದೇ ಮಾತರಂ' ಚಿತ್ರದಲ್ಲಿ ಮಾಡಿದ್ದಾರೆ. ಕಾಶ್ಮೀರವನ್ನು ಬಯಸುವ ಪಾಕಿಸ್ತಾನಿ ಭಯೋತ್ಪಾದಕ, ಅವನನ್ನು ಮಟ್ಟ ಹಾಕಲು ಹೊರಟ ಇಬ್ಬರು ಪೋಲೀಸ್ ಅಧಿಕಾರಿಗಳು, ಅವರೊಂದಿಗೆ ಇತರ ನಾಲ್ಕೈದು ಮಂದಿ. ಕೊನೆಗೆ ಭಯೋತ್ಪಾದಕರ ನಾಶ, ದೇಶಕ್ಕೆ ಒದಗಿದ್ದ ಆಪತ್ತಿನಿಂದ ವಿಮುಕ್ತಿ, ಇಷ್ಟೇ ಇದರ ಕಥೆ. ಹೊಡೆದಾಟ, ಬಡಿದಾಟ, ಬಾಂಬುಗಳ ಸಿಡಿತ, ಬಸ್ಸು-ಕಾರುಗಳ ಭಸ್ಮ... ಒಟ್ಟಿನಲ್ಲಿ ಹಿಂಸೆಯ ವೈಭವೀಕರಣ. ಇಷ್ಟರಿಂದಲೇ ಜನರಲ್ಲಿ ದೇಶಪ್ರೇಮ ತುಂಬಬಹುದೆಂಬ ಭ್ರಮೆ ನಿರ್ದೇಶಕರಿಗೆ ಇದ್ದಂತಿದೆ. ಆದರೆ ಈ ಅಬ್ಬರವನ್ನು ಕೇಳಲಾಗದೇ ಕಿವಿಗಿಟ್ಟುಕೊಳ್ಳಲು ಒಂದಿಷ್ಟು ಹತ್ತಿ ಎಲ್ಲಾದರೂ ಸಿಕ್ಕೀತೇ ಎನ್ನುವಷ್ಟು ತಲೆ ಚಿಟ್ಟು ಹಿಡಿಸುತ್ತದೆ ಈ ಚಿತ್ರ.

ಇಲ್ಲಿ ಯಾರಿಗೂ ಅಭಿನಯಕ್ಕೆ ಅವಕಾಶವಿಲ್ಲ. ಮಾತಿಗೆ ಸಮಯ ಸಿಕ್ಕಾಗ ದೇಶ ಪ್ರೇಮದ ಬಗ್ಗೆ ಉದ್ದುದ್ದ ಭಾಷಣಗಳು, ಪರದೇಶದ ಬಗ್ಗೆ ಹಿಯ್ಯಾಳಿಕೆಯ ಮಾತುಗಳು, ಇನ್ನುಳಿದಂತೆ ಬರೀ ಹೊಡೆದಾಟ-ಬಡಿದಾಟ. ನೂರಾರು ಕಾರು-ಬಸ್ಸುಗಳನ್ನು ಸುಟ್ಟು ಭಸ್ಮ ಮಾಡಿ ಇದನ್ನೇ ಅದ್ದೂರಿ ಎಂದು ಭಾವಿಸಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವ ಇಂಥವರಿಂದ ವೈವಿದ್ಯಮಯ ಚಿತ್ರಗಳನ್ನು ನಿರೀಕ್ಷಿಸಲು ಸಾಧ್ಯವೇ?

ಕನ್ನ ಚಿತ್ರಗಳಿಗೆ ಪ್ರೋತ್ಸಾಹ ಇಲ್ಲ, 'ಸ್ವಮೇಕ್' ಚಿತ್ರಗಳನ್ನು ಕನ್ನಡಿಗರು ನೋಡಲ್ಲ ಎಂದು ಅಳಲು ತೋಡಿಕೊಳ್ಳುವ ಇವರು, ಇಂತಹ ಕೆಟ್ಟ ಚಿತ್ರಗಳನ್ನು ನಿರ್ಮಿಸಿ ಪ್ರೇಕ್ಷಕರನ್ನು ಕನ್ನಡ ಚಿತ್ರಗಳಿಂದ ದೂರ ಮಾಡುತ್ತಿದ್ದಾರೆ.

ಅದ್ದೂರಿತನದ ಹೆಸರಿನಲ್ಲಿ ಅನಗತ್ಯವಾಗಿ ಹಿಂಸೆಯನ್ನು ವೈಭವೀಕರಿಸಿ, ತಾವು ಹೇಳುತ್ತಿರುವ ವಿಚಾರಗಳ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೆಯೋ ಅಥವಾ ಪ್ರಜ್ಞಾಪೂರ್ವಕವಾಗಿ ಒಂದು ನಿರ್ದಿಷ್ಟ ಕೋಮಿನ ಬಗ್ಗೆ ಹಿಯ್ಯಾಳಿಕೆಯನ್ನು ತುಂಬಿ ಕೋಮು ಭಾವನೆಯನ್ನು ಕೆದಕುವ ಇಂತಹ ಚಿತ್ರಗಳನ್ನು ಪ್ರೇಕ್ಷಕ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಬೇಕು.

ನಿರ್ದೇಶಕರಾದ ಓಂ ಪ್ರಕಾಶ್ ತಮ ಹಿಂದಿನ ಚಿತ್ರಗಳಾದ 'ಲಾಕಪ್‌ಡೆತ್', 'ಸಿಂಹದ ಮರಿ', 'ಎ.ಕೆ.-47', ಈಗ 'ವಂದೇ ಮಾತರಂ' ಚಿತ್ರಗಳಲ್ಲಿ ಬರೀ ಹೊಡೆ-ಬಡಿ ಫಾರ್ಮುಲಾಕ್ಕೆ ಜೋತುಬಿದ್ದು ನೋಡುಗರನ್ನು ಅರೆ ಹುಚ್ಚರನ್ನಾಗಿಸಿದ್ದಾರೆ. ತಮ್ಮ ಮುಂದಿನ ಚಿತ್ರ 'ಹುಚ್ಚ'ದಲ್ಲಿ ಪ್ರೇಕ್ಷಕರನ್ನು ಪೂರ್ತಿ ಹುಚ್ಚರನ್ನಾಗಿಸದಿದ್ದರೆ ಸಾಕು.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ